KSA LIBRARY, B'lore
B021836
350RP GOK 1981
II – 35

(B) 21836

ಭಾಷಾ ಸಮಿತಿಯ ವರದಿ

ದಿನಾಂಕ : ೨೭-೧-೧೯೮೧

(ಡಾ। ಗೋಕಾಕ್ ಸಮಿತಿ ವರದಿ)

(B) 21836

ಸನ್ಮಾನ್ಯ ಶಿಕ್ಷಣ ಸಚಿವರಿಗೆ,

ಸಂಸ್ಕೃತವನ್ನು ಪ್ರಥಮಭಾಷೆಗಳ ಪಟ್ಟಿಯಿಂದ ತೆಗೆಯುಲು 1979ನೇ ಅಕ್ಟೋಬರ್ ತಿಂಗಳಲ್ಲಿ ಸರ್ಕಾರ ಆದೇಶ ಹೊರಡಿಸಿದುದರಿಂದ ಉಂಟಾದ ವಿವಾದವನ್ನು ತಜ್ಞರ ಸಮಿತಿಗೆ ಒಪ್ಪಿಸಲು ನಿರ್ಧರಿಸಿ ಸಮಿತಿ ರಚಿಸಿ ಸರ್ಕಾರ ಕ್ರಮಸಂಖ್ಯೆ ಇಡಿ-113 ಎಸ್‌ಒಹೆಚ್ -79, ಬೆಂಗಳೂರು, ದಿನಾಂಕ 5ನೆ ಜುಲೈ 1980ರ ಆದೇಶ ಹೊರಡಿಸಿತು.

(1) ಡಾ॥ ವಿ. ಕೃ. ಗೋಕಾಕರು, ಅಧ್ಯಕ್ಷರು
525, ರಾಜಾಮಹಲ್ ವಿಲಾಸ ಬಡಾವಣೆ,
ಬೆಂಗಳೂರು-56.

(2) ಶ್ರೀ ಜೆ. ನಾರಾಯಣ, ಸದಸ್ಯರು
ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್,
3. 10ನೇ ಕ್ರಾಸ್, ಹನುಮಂತನಗರ,
ಬೆಂಗಳೂರು-19.

(3) ಶ್ರೀ ಎಸ್. ಕೆ. ರಾಮಚಂದ್ರರಾಯರು, ಸದಸ್ಯರು
305, 6ನೇ ಕ್ರಾಸ್, 1ನೇ ಬ್ಲಾಕ್,
ಜಯನಗರ, ಬೆಂಗಳೂರು-11.

(4) ಶ್ರೀ ತ. ಸು. ಶಾಮರಾಯರು, ಸದಸ್ಯರು
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಚಿದಂಬರ ಆಶ್ರಮ, ಗುಬ್ಬಿ ಪೋಸ್ಟ್,
ತುಮಕೂರು ಜಿಲ್ಲೆ.

(5) ಡಾ॥ ಕೆ. ಕೃಷ್ಣಮೂರ್ತಿ, ಸದಸ್ಯರು
ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ,
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾರ.

(6) ಡಾ॥ ಎಚ್. ಪಿ. ಮಲ್ಲೇದೇವರು, ಸದಸ್ಯರು
ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

(7) ಶ್ರೀ ಸಾ. ಮಂಚಯ್ಯ, ಸದಸ್ಯ–ಕಾರ್ಯದರ್ಶಿ
ಅಡಿಷನಲ್ ಕಾರ್ಯದರ್ಶಿ, ಶಿಕ್ಷಣ ಮತ್ತು
ಯೋಜನೆ ಸೇವಾ ಇಲಾಖೆ, ಕರ್ನಾಟಕ
ಸರ್ಕಾರ, ವಿಧಾನಸೌಧ, ಬೆಂಗಳೂರು.

ಸರ್ಕಾರಿ ಆದೇಶ

ವಿಷಯ : ಪ್ರೌಢಶಾಲೆಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸದ ಬಗ್ಗೆ-ಸಮಿತಿ ರಚನೆ.

ಓದಿದೆ : (1) ಸರ್ಕಾರಿ ಆದೇಶ ಕ್ರಮಾಂಕ ಇಡಿ 113 ಎಸ್‌ಎಎಚ್-79, ದಿನಾಂಕ 20ನೇ ಅಕ್ಟೋಬರ್ 1979

ಪ್ರಸ್ತಾವನೆ :

ಸ್ವಾತಂತ್ರ್ಯ ಪೂರ್ವದಿಂದಲೂ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಅಭ್ಯಸಿಸಲು ಪ್ರೌಢಶಾಲಾ ಪಠ್ಯವಸ್ತುವಿನಲ್ಲಿ ಅವಕಾಶವಿತ್ತು. ತ್ರಿಭಾಷಾಸೂತ್ರ ಒಪ್ಪಿಕೊಂಡಮೇಲೂ ಈ ವ್ಯವಸ್ಥೆ ಮುಂದುವರಿಯಿತು. ಆದರೆ ಮೇಲೆ ಉಲ್ಲೇಖಿಸಿರುವ ಸರ್ಕಾರಿ ಆದೇಶದಂತೆ ಸಂಸ್ಕೃತ ಭಾಷೆಯನ್ನು ಪ್ರಥಮಭಾಷೆಗಳ ಪಟ್ಟಿಯಿಂದ ತೆಗೆದು ಸಂಯೋಜಿತ ಭಾಷೆಯಾಗಿ ಅಂದರೆ, ಹಿಂದಿ, ಮರಾಠಿ, ತಮಿಳು ಮಂತ್ತು ತೆಲುಗು, ಭಾಷೆಗಳನ್ನು ಪ್ರಥಮಭಾಷೆಯಾಗಿ ಅಭ್ಯಸಿಸಲು ಅವಕಾಶ ಕಲ್ಪಿಸಿದೆ. ಈ ನೀತಿ ಸಂಸ್ಕೃತ ಪ್ರೇಮಿಗಳ ವಿರೋಧವನ್ನು ಎದುರಿಸಬೇಕಾಯಿತು. ಅನೇಕ ವಿದ್ವಾಂಸರು, ಶಿಕ್ಷಣ ತಜ್ಞರು ಸರ್ಕಾರಕ್ಕೆ ಮನವಿ ಸಲ್ಲಿಸಿ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಉಳಿಸಲು ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ಬಗ್ಗೆ ಸಾಕಷ್ಟು ವಿವಾದವೆದ್ದಿದೆ.

ಈ ವಿವಾದಾತ್ಮಕವಾದ ಸಮಸ್ಯೆಯನ್ನು ತಜ್ಞರ ಸಮಿತಿಯ ಪರಿಶೀಲನೆಗೆ ಪಡಿಸಲು ನಿರ್ಧರಿಸಿದೆ.

ಸರ್ಕಾರಿ ಆದೇಶ ಕ್ರಮಾಂಕ ಇಡಿ 113 ಎಸ್‌ಒಹೆಚ್ 79,
ಬೆಂಗಳೂರು ದಿನಾಂಕ 5ನೇ ಜುಲೈ 1980

ಮೇಲಿನ ನಿರ್ಧಾರದಂತೆ ಈ ಕೆಳಗೆ ಪೆಸರಿಸಿರುವವರನ್ನೊಳಗೊಂಡ ಸಮಿತಿಯನ್ನು ರಚಿಸಿದೆ.

1.	ಡಾ॥ ವಿ.ಕೃ. ಗೋಕಾಕ	...	ಅಧ್ಯಕ್ಷರು
2.	ಶ್ರೀ ಜಿ. ನಾರಾಯಣ	...	ಸದಸ್ಯರು
3.	ಪ್ರೊ. ಎಸ್.ಕೆ. ರಾಮಚಂದ್ರರಾವ್	...	ಸದಸ್ಯರು
4.	ಶ್ರೀ ತ.ಸು. ಶಾಮರಾಯರು	...	ಸದಸ್ಯರು
5.	ಡಾ॥ ಕೆ. ಕೃಷ್ಣಮೂರ್ತಿ	...	ಸದಸ್ಯರು
6.	ಪ್ರೊ. ಮಲ್ಲೇದೇವರು	...	ಸದಸ್ಯರು
7.	ಶ್ರೀ ಎಸ್. ಮಂಚಯ್ಯ	...	ಸದಸ್ಯ-ಕಾರ್ಯದರ್ಶಿ
	ಸರ್ಕಾರದ ಅಪರ ಕಾರ್ಯದರ್ಶಿಗಳು, ಶಿಕ್ಷಣ ಮತ್ತು ಯುವಜನ ಸೇವಾ ಇಲಾಖೆ.		

ಈ ಸಮಿತಿಯು ಕೆಳಕಂಡ ಪ್ಯಾರಾದಲ್ಲಿ ಉಕ್ತವಾಗಿರುವ ಸಮಸ್ಯೆಗಳನ್ನು ಪರಿಶೀಲಿಸಿ ಮೂರು ತಿಂಗಳೊಳಗೆ ಸರ್ಕಾರಕ್ಕೆ ವರದಿ ಒಪ್ಪಿಸಬೇಕೆಂದು ಕೋರಿದೆ.

1. ಸಂಸ್ಕೃತ ಶಾಲಾ ಪಠ್ಯವಸ್ತುವಿನಲ್ಲಿ ಅಭ್ಯಾಸ ವಿಷಯವಾಗಿ ಉಳಿಯಬೇಕೆ ?
2. ಉಳಿಯಬೇಕಾದರೆ, ಕನ್ನಡಕ್ಕೆ ಪರ್ಯಾಯ ಭಾಷೆಯಾಗದೆ ಉಳಿಸುವುದು ಹೇಗೆ?
3. ತ್ರಿಭಾಷಾ ಸೂತ್ರದಂತೆ ಕನ್ನಡ ಕಡ್ಡಾಯಮಾಡಿ ಉಳಿದೆರೆಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಬಿಡುವುದು ಸೂಕ್ತವೆ ?

ಮೇಲಿನ ವಿಷಯಗಳನ್ನು ಪರಿಶೀಲಿಸಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯ ವಸ್ತುವಿನಲ್ಲಿ ಭಾಷೆಗಳ ಸ್ಥಾನದ ಬಗ್ಗೆ ಉಚಿತವೂ, ಕಾರ್ಯರೂಪಕ್ಕೆ ತರುವಂತಹುದೂ ಆದ ನೀತಿಯನ್ನು ನಿರ್ಣಯಿಸಲು ಸಹಾಯಕವಾಗುವಂತೆ ಸಲಹೆಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಮೂರು ತಿಂಗಳ ಅವಧಿಯಲ್ಲಿ ಸಲ್ಲಿಸಬೇಕು.

ಮೇಲ್ಕಂಡ ಸಮಿತಿಯ ಅಧಿಕಾರೇತರ ಸದಸ್ಯರ ಪ್ರಯಾಣ ಮತ್ತು ದಿನಭತ್ಯದ ವೆಚ್ಚವನ್ನು " 277 ವಿದ್ಯಾಭ್ಯಾಸ–4–ಸಾಮಾನ್ಯ–8–ಇತರ ವೆಚ್ಚ–1–ಸಾಮಾನ್ಯ ಶಿಕ್ಷಣ ಸಮಿತಿಗಳು ಮತ್ತು ಮಂಡಳಿಗಳು" ಲೆಕ್ಕ ಶೀರ್ಷಿಕೆಯಲ್ಲಿ ಭರಿಸಬಹುದು. ಈ ಸದಸ್ಯರು ಪ್ರಯಾಣ ಮತ್ತು ದಿನಭತ್ಯಗಳ ಸಲುವಾಗಿ ಕರ್ನಾಟಕ ಸರ್ಕಾರ ಸೇವಾ ನಿಯಮಗಳ ಅನುಬಂಧ 'ಎ' ಆಡಿಯಲ್ಲಿ 'ಎ' ದರ್ಜೆಯವರೆಂದು ಪರಿಗಣಿಸಬೇಕು.

ಮೇಲ್ಕಂಡ ಆಜ್ಞೆಯು ಟಿಪ್ಪಣಿ ಸಂಖ್ಯೆ ಆ· ಕಾ. 2007 ದಿನಾಂಕ 23ನೇ ಜೂನ್ 1980ರಲ್ಲಿ ಉಕ್ತವಾಗಿರುವ ಆರ್ಥಿಕ ಇಲಾಖೆಯ ಒಪ್ಪಿಗೆಯ ಮೇರೆಗೆ ಹೊರಡಿಸಲ್ಪಟ್ಟಿದೆ.

ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಹಿ
(ಲೀಲಾ ಜಾರ್ಜ್)
ಪ್ರಭಾರ ಅಧೀನ ಕಾರ್ಯದರ್ಶಿ,
ಶಿಕ್ಷಣ ಮತ್ತು ಯುವಜನ ಸೇವಾ ಇಲಾಖೆ.

ಗೆ,
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
ಸಮಿತಿಯ ಎಲ್ಲಾ ಸದಸ್ಯರುಗಳಿಗೂ
'ಪ್ರತಿ'

ಸಮಿತಿಯ ಮೊದಲ ಮಾತು

ಭಾಷಾ ಶಿಕ್ಷಣವು ಶಿಕ್ಷಣದ ಉಳಿದ ಭಾಗಗಳಿಗಿಂತ ಒಂದು ದೃಷ್ಟಿಯಿಂದ ಹೆಚ್ಚು ಮಹತ್ವದ್ದಾಗಿದೆ. ಏಕೆಂದರೆ ಎಲ್ಲಾ ಜ್ಞಾನ ವಿಜ್ಞಾನದ ಬೋಧನೆಗೆ ಭಾಷೆಯೇ ಮಾಧ್ಯಮವಾಗಿದೆ. ಅಲ್ಲದೆ ಭಾಷೆಗಳನ್ನು ಹೇಗೆ ಕಲಿಸಬೇಕೆಂಬ ಒಂದು ಶಾಸ್ತ್ರವೇ ಪ್ರತ್ಯೇಕವಾಗಿದೆ. ಭಾರತದಲ್ಲಿಯ ಹಾಗೂ ಕರ್ನಾಟಕ ರಾಜ್ಯದಲ್ಲಿಯ ವಿಶೇಷ ಸ್ಥಿತಿಯನ್ನು ಅನುಲಕ್ಷಿಸಿ ಇಲ್ಲಿ ಶಿಕ್ಷಣದ ಇಂದಿನ ಆಗು-ಹೋಗುಗಳನ್ನು ವಿಮರ್ಶಿಸಿ, ಆ ಪರಿಸ್ಥಿತಿಯು ಹಿನ್ನೆಲೆಯಲ್ಲಿ ಇಂದಿನ ಭಾಷಾಶಿಕ್ಷಣದ ಗೊತ್ತುಗುರಿಗಳನ್ನು ನಿರ್ಣಯಿಸಬೇಕಾಗಿದೆ.

ಮಾಧ್ಯಮಿಕ ಹಂತದಲ್ಲಿಯ ಭಾಷಾಶಿಕ್ಷಣ ಕ್ರಮವು ಈಗೊಂದೆರಡು ವರ್ಷಗಳಿಂದ ತೀವ್ರ ಚರ್ಚೆಗೆ ಹಾಗೂ ವಾದಕ್ಕೆ ಗುರಿಯಾಗಿದೆ. ಈ ಸಮಸ್ಯೆಯು ಅಲ್ಲಲ್ಲಿ ಭಾವನಾವೇಶಕ್ಕೂ ಎಡೆಮಾಡಿಕೊಟ್ಟಿದೆ. ಸಮಾಜದಲ್ಲಿರಬಹುದಾದ ಸಂಕುಚಿತ ಭಾವನೆಗಳ ಪರಿಸ್ಫುರಣಕ್ಕೂ ಅದು ಆಗೀಗ ಕಾರಣವಾಗಿದೆ. ಮಂತ್ರಿಮಂಡಲದ ಕೆಲವು ಮಾನ್ಯ ಸದಸ್ಯರೂ ಕನ್ನಡ-ಸಂಸ್ಕೃತಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಸಾರ್ವಜನಿಕ ವೇದಿಕೆಗಳಿಂದ ವ್ಯಕ್ತಪಡಿಸಿದ್ದಾರೆ. ಸಮಾಜದಲ್ಲಿಯೂ ಕೆಲವೊಂದು ವೃತ್ತ-ಪಂಗಡಗಳಿಂದ ಅಭಿಪ್ರಾಯ-ವಿರೋಧ-ಎಚ್ಚರಿಕೆಗಳು ವ್ಯಕ್ತವಾಗಿವೆ. ಕನ್ನಡದ ಹಿತಕ್ಕೆ ವಿರೋಧವಾದ ಸಮಿತಿ ಇದೆಂದು ಒಂದು ಗುಂಪು ಸಾರಿದರೆ, ಸಂಸ್ಕೃತಕ್ಕೆ ವಿರೋಧವಾದ ಸಮಿತಿ ಇದೆಂದು ಇನ್ನೊಂದು ವೃತ್ತ ಎಚ್ಚರಿಕೆ ನೀಡಿದೆ. ಒಂದು ಶೈಕ್ಷಣಿಕ ಸಮಸ್ಯೆ ಭಾವನೆಗಳನ್ನು ಇಷ್ಟೊಂದು ಕೆರಳಿಸಿರಬೇಕಾದರೆ ಅದರಿಂದ ಎಷ್ಟು ತರಹದ ವಿವಿಧ ಸ್ಪಂದನಗಳು ಹೊರಟಿವೆಯೆಂಬುದೂ, ಅದು ಎಷ್ಟೊಂದು ಜೀವಂತ ಹಾಗೂ ಗಂಭೀರ ಪ್ರಶ್ನೆಯಾಗಿದೆಯೆಂಬುದೂ ತನಗೆ ತಾನೇ ಸ್ಪಷ್ಟವಾಗುತ್ತದೆ.

ಕೆಲವರು ಸಮಿತಿಯ ಜಟಿಲ ಕಾರ್ಯವನ್ನು ಕುರಿತು ಕರುಣಾಭಾವವನ್ನು ತಾಳಿದ್ದಾರೆ. ಹಲವರು ಸಮಿತಿಯು ಭಯಗೊಂಡಿದೆಯೆಂದು ಗ್ರಹಿಸಿ ಅದರ ವರದಿಯೂ ಒಂದು ಭಯಗ್ರಸ್ತ ವರದಿಯಾಗುವುದೆಂದು ನಂಬಿದ್ದಾರೆ. ಆದರೆ ಏನೆಂದು ಭಯಗೊಳ್ಳುವುದು? ಸಮಿತಿಯ ಸದಸ್ಯರಿಗೆ ಯಾವ ಆಸೆ-ಆಕಾಂಕ್ಷೆಗಳೂ ಇಲ್ಲ. ಅವರೆಲ್ಲ ತಮ್ಮ ತಮ್ಮ ಕಾರ್ಯಕ್ಷೇತ್ರಗಳನ್ನು ಎಂದೋ ಕಂಡುಕೊಂಡಿದ್ದು ತಾವು ಮಾಡಬೇಕಾದ ಕಾರ್ಯ ಯಾವುದೆಂಬುದನ್ನು ನಿರ್ದಿಷ್ಟಗೊಳಿಸಿ, ಆ ಕಾರ್ಯದಲ್ಲಿ ನಿರತರಾಗಿದ್ದಾರೆ. ಸಮಿತಿಗಾಗಿ ಕರೆಬಂದಾಗ ಇದೊಂದು ಜನತೆಯ ಸೇವೆಯೆಂದು ಅದನ್ನು ಸ್ವೀಕರಿಸಿದ್ದಾರೆ. ಅಲ್ಲದೆ ಅಲ್ಲಲ್ಲಿ ವ್ಯಕ್ತವಾದ ಒಂದು ಅಭಿಪ್ರಾಯ-ವಿರೋಧ-ಎಚ್ಚರಿಕೆಯನ್ನು ಇನ್ನೊಂದು ಅಭಿಪ್ರಾಯ-ವಿರೋಧ-ಎಚ್ಚರಿಕೆಯು ತನಗೆ ತಾನೇ ಎದಂರಿಸುವುದರಲ್ಲಿ ತೊಡಗಿದೆ. ಸಮಿತಿಯು ಯಾವ ಪೂರ್ವಗ್ರಹಗಳಿಲ್ಲದೆ ತನ್ನ ಕಾರ್ಯಕಲಾಪಗಳನ್ನು ಪ್ರಾರಂಭಿಸಿ ಕನ್ನಡ ಜನತೆಯ ಕಲ್ಯಾಣವೂ ಭಾಷಾಶಿಕ್ಷಣದ ಮೂಲತತ್ವಗಳೂ ತನ್ನ ಅಡಿಗಲ್ಲೆಂದು ಭದ್ರವಾಗಿ ಸ್ಥಿರಗೊಂಡಿದೆ. ಈ ಕಲ್ಯಾಣ ಹಾಗೂ ಈ ತತ್ವಗಳು ಸಮಿತಿಯ ಕಾರ್ಯವ್ಯಾಪ್ತಿಯ ಉತ್ತರ-ದಕ್ಷಿಣ ಧ್ರುವಗಳಾಗಿವೆ. ಅಲ್ಲದೆ ಈ ಎರಡೂ ಧ್ರುವಗಳೆಂದರೂ ಒಂದೇ ಧ್ರುವನಕ್ಷತ್ರ. ಏಕೆಂದರೆ ಎಲ್ಲ ಮೂಲ ತತ್ವಗಳ ಬೇರೂ ಜನತೆಯ ಕಲ್ಯಾಣದಲ್ಲಿದೆ. ಅದೇ ಎಲ್ಲ ತತ್ವದ ಉಗಮಸ್ಥಾನವೆಂದರೂ ಸಲ್ಲುವುದು. ಈ ವರದಿಯಲ್ಲಿ ಗುಣಗಳಿರಲಿ, ದೋಷಗಳಿರಲಿ, ಹೊರಗಿನ ಯಾವ ಅಭಿಪ್ರಾಯವಾಗಲಿ ವಿರೋಧವಾಗಲಿ ಅವುಗಳಿಗೆ ಕಾರಣವಾಗಿಲ್ಲ. ಆ ಗುಣ-ದೋಷಗಳ ಹೊಣೆ ನೇರವಾಗಿ ಸಮಿತಿಯ ತಲೆಯ ಮೇಲೆಯೇ ಇದೆ.

ಶಿಕ್ಷಣ ಪದ್ಧತಿಗೆ, ಪಠ್ಯಕ್ರಮ ಮತ್ತು ಪಠ್ಯವಸ್ತುವಿಗೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲಿಸಿ ಪ್ರಚಲಿತ ಕಾಲದ ಮೌಲ್ಯಗಳು, ಅವಶ್ಯಕತೆಗಳು ಮತ್ತು ಕಿರಿಯ ಪೀಳಿಗೆಯ ಭವಿಷ್ಯ—ಇವುಗಳನ್ನು ಗಮನಿಸಿ ಉದ್ವೇಗಕ್ಕೆ ಎಡೆಗೊಡದೆ ಸಮಾಧಾನವಾಗಿ ಆಲೋಚಿಸಿ ಸೂಕ್ತವೂ ಅಗತ್ಯವೂ ಆದ ನಿರ್ಣಯಗಳನ್ನು ಕೈಗೊಳ್ಳುವುದು ಅವಶ್ಯಕ. ಪೂರ್ವಗ್ರಹ ಪೀಡಿತ ದೃಷ್ಟಿಯಿಂದ ಯಾವುದೇ ನಿರ್ಣಯ ಕೈಗೊಂಡರೂ ಅದು ಉದ್ದೇಶಿತ ಗುರಿ ಮುಟ್ಟಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸುವುದು ಅನಾವಶ್ಯಕವೆಂದು ಭಾವಿಸುತ್ತೇವೆ.

ಸಂಸ್ಕೃತ ಪ್ರಥಮಭಾಷೆಯಾಗಿ ಉಳಿಯಬೇಕೆ ? ಇಲ್ಲವೇ ಅದು ಶಾಲಾ ಪಠ್ಯ ವಸ್ತುವಿನಿಂದಲೇ ಜಾರಿಹೋಗಬೇಕೆ ? ಎಂಬ ವಾದವನ್ನು ಈ ಹಿನ್ನೆಲೆಯಲ್ಲಿಯೇ ಪರಿಶೀಲಿಸ ಬೇಕಾಗುತ್ತದೆ. ಸಂಸ್ಕೃತ ಪ್ರಥಮಭಾಷೆಗಳ ಗುಂಪಿನಲ್ಲಿ ಉಳಿದುಕೊಂಡು ಬಂದುದು ಹೇಗೆ ಎಂಬುದರ ಅರಿವು ಬರಬೇಕಾದರೆ ಈ ಪರಿಸ್ಥಿತಿ ಹೇಗೆ ಉಂಟಾಯಿತು ಎಂಬುದನ್ನು ತಿಳಿಯುವುದು ಅವಶ್ಯ.

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾಥಮಿಕ ಐದನೆಯ ತರಗತಿಯಿಂದ ಎಂಟನೇ ತರಗತಿಯ ವರೆಗೆ ವಿಜ್ಞಾನ ಬೋಧನೆ ಇರಲಿಲ್ಲ. ಅದರ ಬದಲು ಶಾರೀರ ಶಾಸ್ತ್ರ ಅಭ್ಯಸಿಸುತ್ತಿದ್ದರು. ಇದೂ ಕಡ್ಡಾಯವಾಗಿರಲಿಲ್ಲ. ಈ ವಿಷಯಕ್ಕೆ ಬದಲಾಗಿ ಯಾವುದಾದರೂ ಒಂದು ವೃತ್ತಿ, ಇಲ್ಲವೇ ಸಂಸ್ಕೃತವನ್ನು ತೆಗೆದುಕೊಂಡು ಅಭ್ಯಾಸ ಮಾಡಲು ಅವಕಾಶವಿತ್ತು. ಈ ವ್ಯವಸ್ಥೆ ಹಳೇ ಮೈಸೂರಿನ ಪ್ರದೇಶದಲ್ಲಿ ಮಾತ್ರ ಇತ್ತು. ಹೀಗೆ ಮಾಧ್ಯಮಿಕ ಶಾಲೆಗಳಲ್ಲಿ ನಾಲ್ಕು ವರ್ಷಗಳ ಕಾಲ ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿ ಆಯ್ದುಕೊಂಡು ಕಲಿತವರು ಪ್ರೌಢ ಶಾಲೆಗಳಲ್ಲಿ ಸಂಸ್ಕೃತವನ್ನು ದ್ವಿತೀಯಭಾಷೆಯಾಗಿ ಅಭ್ಯಸಿಸಲು ಅವಕಾಶವಿತ್ತು. ಕನ್ನಡ, ಉರ್ದು, ತೆಲುಗು, ತಮಿಳು, ಮುಂತಾದ ದ್ವಿತೀಯಭಾಷೆಗಳ ಗುಂಪಿನಲ್ಲಿ ಸಂಸ್ಕೃತವೂ ಒಂದಾಗಿತ್ತು. ಈ ವ್ಯವಸ್ಥೆ ಪ್ರಾಥಮಿಕ ಶಾಲೆಗಳ ಪಠ್ಯವಸ್ತು ಪರಿಷ್ಕಾರಗೊಂಡು, ಸಾಮಾನ್ಯ ವಿಜ್ಞಾನ ಬೋಧನೆ ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯವಾಗುವವರೆಗೆ ಮುಂದುವರೆದು ಕೊಂಡು ಬಂದಿತು.

ಅಂದೂ ಕೂಡ ಸಂಸ್ಕೃತದ ಪಠ್ಯವಸ್ತುವಿನ ಮಟ್ಟ ಇತರ ದ್ವಿತೀಯ ಭಾಷೆಗಳ ಮಟ್ಟಕ್ಕೆ ಸರಿಸಮನಾಗಿರಲಿಲ್ಲ. ಎಂಟು ವರ್ಷಗಳ ಕಾಲ ತಮ್ಮ ಮಾತೃಭಾಷೆಯನ್ನು ದ್ವಿತೀಯ ಭಾಷೆಯಾಗಿ ಅಭ್ಯಸಿಸಿದವರ ಮಟ್ಟದಲ್ಲಿ ನಾಲ್ಕುವರ್ಷಗಳ ಕಾಲ ಸಂಸ್ಕೃತ ಅಭ್ಯಸಿಸಿದವರು ಪ್ರೌಢಶಾಲೆಗಳಲ್ಲಿ ಸಂಸ್ಕೃತ ಕಲಿಯುವುದು ಕಠಿಣವೆಂಬುದು ಆಗಲೂ ಸ್ಪಷ್ಟವಾಗಿತ್ತು.

ಮುಂಬಯಿ ರಾಜ್ಯದ ಕನ್ನಡ ಮಾತನಾಡುವ ಪ್ರದೇಶದಲ್ಲಿ ಬೇರೆ ವ್ಯವಸ್ಥೆಯೇ ಇತ್ತು. ಆ ಪ್ರದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಅನಂತರ ರಾಜ್ಯ ಪುನರ್ವಿಂಗಡಣೆಯವರೆಗೆ ಸಂಸ್ಕೃತವನ್ನು ಒಂದು ಪೂರ್ಣ ಸ್ವತಂತ್ರ ವಿಷಯವಾಗಿ ಅಭ್ಯಸಿಸಲು ಅವಕಾಶವಿತ್ತು. ಅಲ್ಲಿನ ವ್ಯವಸ್ಥೆಯಂತೆ ಪ್ರಾಥಮಿಕ ಶಿಕ್ಷಣದ ಅವಧಿ ನಾಲ್ಕು ವರ್ಷಗಳು. ಅನಂತರ

ಮಾಧ್ಯಮಿಂಕ ಶಿಕ್ಷಣ ಪ್ರಾರಂಭವಾಗುತ್ತಿತ್ತು. ಐದನೆಯ ತರಗತಿಯಿಂದ ಇಂಗ್ಲಿಷು ಕಲಿಸುವ ವ್ಯವಸ್ಥೆ ಇತ್ತು. ಸಂಸ್ಕೃತವನ್ನು ಮಾಧ್ಯಮಿಂಕ ಶಾಲೆಯ ನಾಲ್ಕನೆಯ ತರಗತಿಯಿಂದ ಪ್ರಾರಂಭಿಸಿ ಎಸ್.ಎಸ್.ಎಲ್.ಸಿ.ಯವರೆಗೆ ಅಂದರೆ ನಾಲ್ಕು ವರ್ಷಗಳು ಕಲಿಸುವ ಏರ್ಪಾಟಿತ್ತು. ಇಂಗ್ಲಿಷು, ಕನ್ನಡ ಮತ್ತು ಸಂಸ್ಕೃತಗಳಿಗೆ ಸಮಾನ ಸ್ಥಾನವಿದ್ದು ಮೂರಕ್ಕೂ ನೂರು ನೂರು ಅಂಕಗಳಿದ್ದುವು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಓರಿಯಂಟಲ್ ಶಾಲೆಗಳಿದ್ದುವು. ಈ ಶಾಲೆಗಳಲ್ಲಿ ಸಾಮಾನ್ಯ ಶಾಲೆಗಳಲ್ಲಿ ಕಲಿಸುವ ವಿಷಯಗಳ ಜೊತೆಗೆ ಸಂಸ್ಕೃತವನ್ನು ಉಚ್ಛಮಟ್ಟದಲ್ಲಿ ಕಲಿಸುವ ವ್ಯವಸ್ಥೆ ಇತ್ತು. ಈ ಶಾಲೆಗಳು ಇನ್ನೂ ಉಳಿದುಕೊಂಡಿವೆ. ಅವುಗಳಲ್ಲಿ ಸಂಸ್ಕೃತವನ್ನು ಒಂದು ಭಾಷೆಯಾಗಿ ಕಲಿಸುತ್ತಿದ್ದಾರೆ.

ಮೇಲೆ ತಿಳಿಸಿದ ವ್ಯವಸ್ಥೆ ರಾಜ್ಯಪುನರ್ವಿಂಗಡಣೆಗೆ ಮೊದಲು ಈಗ ಕರ್ನಾಟಕದಲ್ಲಿ ವಿಲೀನಗೊಂಡಿರುವ ಬೇರೆ ಬೇರೆ ಪ್ರದೇಶಗಳಲ್ಲಿ ಸಂಸ್ಕೃತ ಅಭ್ಯಾಸಕ್ಕೆ ಇದ್ದ ಅವಕಾಶಗಳು.

ಇಂದಿನ ವಿಶಾಲ ಕರ್ನಾಟಕ ಮುಂಬಯಿ ಪ್ರಾಂತದ ಕನ್ನಡ ಮಾತಾಡುವ ಪ್ರದೇಶಗಳು, ಹೈದರಾಬಾದ್ ರಾಜ್ಯದ ಕನ್ನಡ ಮಾತನಾಡುವ ಪ್ರದೇಶಗಳು, ಕೊಡಗು ಮತ್ತು ಮದರಾಸು ರಾಜ್ಯದಿಂದ ಬಳ್ಳಾರಿ ಜಿಲ್ಲೆ, ದಕ್ಷಿಣಕನ್ನಡ ಜಿಲ್ಲೆ ಮತ್ತು ಕೊಳ್ಳೆಗಾಲ ತಾಲ್ಲೂಕುಗಳನ್ನೊಳಗೊಂಡಿದೆ. 1956ರ ನವೆಂಬರ್ ಒಂದರಂದು ವಿಶಾಲ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಿತು.

ರಾಜ್ಯ ಪುನರ್ವಿಂಗಡಣೆ ಹಲವು ಹೊಸ ಸಮಸ್ಯೆಗಳನ್ನು ಉಂಟುಮಾಡಿತು. ಆಡಳಿತ ವ್ಯವಸ್ಥೆ, ಶಿಕ್ಷಣ ಪದ್ಧತಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿತ್ತು. ಈ ಎಲ್ಲಾ ಕ್ಷೇತ್ರಗಳಲ್ಲಿ ಏಕರೂಪತೆಯನ್ನು ಸಾಧಿಸುವುದು ಅವಶ್ಯಕವೂ, ಅನಿವಾರ್ಯವೂ ಆಗಿತ್ತು. ಆದುದರಿಂದ ಈ ಉದ್ದೇಶ ಸಾಧನೆಗಾಗಿ ಬೇರೆ ಬೇರೆ ಪ್ರದೇಶದಲ್ಲಿ ಅಂದು ಅಸ್ತಿತ್ವದಲ್ಲಿದ್ದ ಶಿಕ್ಷಣ ವ್ಯವಸ್ಥೆಯನ್ನು ಪರಿಶೀಲಿಸಿ ಏಕರೂಪವಾದ ಶಿಕ್ಷಣ ಪದ್ಧತಿಯನ್ನು ನಿರ್ಧರಿಸಲು ರಾಜ್ಯಮಟ್ಟದಲ್ಲಿ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ 'ಶಿಕ್ಷಣ ಏಕತಾ ಸಮಿತಿಯ' ರಚನೆಯಾಯಿತು. ರಾಜ್ಯದಲ್ಲಿ ಶಿಕ್ಷಣ ಪದ್ಧತಿಯಲ್ಲಿದ್ದ ಭಿನ್ನತೆಯನ್ನು ನಿವಾರಿಸಿ ಏಕತೆಯನ್ನು ರೂಪಿಸುವುದೇ ಸಮಿತಿಯ ಉದ್ದೇಶ.

ಶಿಕ್ಷಣ ಏಕತಾ ಸಮಿತಿಯು ರಾಜ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ಬೇರೆಬೇರೆ ಪ್ರಾಂತಗಳಿಂದ ಬಂದ ಪ್ರದೇಶಗಳಲ್ಲಿದ್ದ ಶಿಕ್ಷಣ ಪದ್ಧತಿಯನ್ನು ಪರಿಶೀಲಿಸಿ ಏಕರೂಪವಾದ ಶಿಕ್ಷಣ ಪದ್ಧತಿಯ ವ್ಯವಸ್ಥೆಯನ್ನು ಸೂಚಿಸಿ ಮಾಡಿತು. ಆ ಸೂಚನೆಗಳಲ್ಲಿ ಅತಿ ಮುಖ್ಯವಾದುದು ಭಾಷಾಭ್ಯಾಸಕ್ಕೆ ಸಂಬಂಧಿಸಿದುದು. ಈ ವಿಷಯದಲ್ಲಿ ವಿಪುಲವಾಗಿ ಚರ್ಚೆ ನಡೆದು ಸಂಸ್ಕೃತವನ್ನು ಎರಡು ಹಂತಗಳಲ್ಲಿ ಅಭ್ಯಾಸಮಾಡುವ ಅವಕಾಶ ಕಲ್ಪಿಸಿಕೊಡುವ ನಿರ್ಧಾರವಾಯಿತು. ಅದರಂತೆ ಸಂಸ್ಕೃತವನ್ನು ಪ್ರಥಮಭಾಷೆಗಳ ಪಟ್ಟಿಯಲ್ಲಿ ಸೇರಿಸಿದುದಲ್ಲದೆ ಸಂಯೋಜಿತ ಭಾಷೆಯಾಗಿ ಆಯ್ಕೆಮಾಡಿಕೊಂಡು ತಮ್ಮ ಮಾತೃಭಾಷೆಯ ಜೊತೆಗೆ ಅಭ್ಯಸಿಸಲೂ ಅವಕಾಶ ಕಲ್ಪಿಸಿದರು. ಈ ನಿರ್ಧಾರದಂತೆ ಕನ್ನಡ, ತೆಲುಗು, ಮರಾಠಿ, ಹಿಂದಿ, ತಮಿಳು ಮಾತೃಭಾಷೆಯಾಗಿರುವವರೂ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಅಭ್ಯಸಿಸುತ್ತಿದ್ದರು. ಹಾಗೆಯೇ ತಮ್ಮ ಮಾತೃಭಾಷೆಯನ್ನು ವಾರಕ್ಕೆ ಮೂರು ಅವಧಿಗಳು ಮತ್ತು ಸಂಸ್ಕೃತವನ್ನು ಎರಡು ಅವಧಿಗಳೂ ಅಭ್ಯಾಸಮಾಡಲು ಅವಕಾಶವಿತ್ತು.

ಮೇಲೆ ವಿವರಿಸಿದ ವ್ಯವಸ್ಥೆ 1963 ಮತ್ತು 1969ರಲ್ಲಿ ಪ್ರೌಢಶಾಲಾ ಪಠ್ಯಪುಸ್ತಕವನ್ನು ಪರಿಷ್ಕರಿಸಿದಾಗಲೂ ಉಳಿದುಕೊಂಡಿತು. ಪ್ರಾಥಮಿಕ ಶಾಲೆಯಲ್ಲಿ ಸಂಸ್ಕೃತ ಕಲಿಯಲು ಅವಕಾಶವಿಲ್ಲದೆ ಅದನ್ನು ಪ್ರೌಢಶಾಲೆಯಲ್ಲಿ ಪ್ರಥಮಭಾಷೆಯಾಗಿ ಆರಿಸಿಕೊಂಡ ವಿದ್ಯಾರ್ಥಿಗಳು ಅಕ್ಷರಾಭ್ಯಾಸದಿಂದ ಸಂಸ್ಕೃತದ ಅಭ್ಯಾಸವನ್ನು ಪ್ರಾರಂಭಿಸಬೇಕಾಗಿದ್ದರಿಂದ ಸಂಸ್ಕೃತದ ಪಠ್ಯವಸ್ತು ಬೇರೆ ಪ್ರಥಮಭಾಷೆಗಳ ಪಠ್ಯವಸ್ತುವಿಗೆ ಹೋಲಿಸಿದಾಗ ಅತಿ ಸುಲಭವಾಗಿತ್ತು. ಬೇರೆ ಭಾಷೆಗಳನ್ನು ಪ್ರಥಮಭಾಷೆಯಾಗಿ ಆರಿಸಿಕೊಂಡ ವಿದ್ಯಾರ್ಥಿಗಳಿಗೆ ಆಯಾ ಭಾಷೆಗಳ ಪಠ್ಯವಸ್ತು ಸಾಕಷ್ಟು ಕಠಿಣವಾಗಿದ್ದು ಅವರು ನಿರೀಕ್ಷಿತ ಗುರಿ ಮುಟ್ಟಬೇಕಾದರೆ ಸಾಕಷ್ಟು ಶ್ರಮಪಡಬೇಕಾಗಿತ್ತು. ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಆರಿಸಿಕೊಂಡವರು ಅಷ್ಟು ಶ್ರಮಪಡಬೇಕಾಗಿರಲಿಲ್ಲ. ಅಲ್ಲದೆ ಅವರು ಪರೀಕ್ಷೆಗಳಲ್ಲಿ ಸಂಸ್ಕೃತ ಭಾಷೆಯಲ್ಲಿ ಉತ್ತರ ಬರೆಯುವ ಪ್ರಮೇಯವೂ ಇರಲಿಲ್ಲ. ಉತ್ತರಗಳನ್ನು ತಪ್ಪಿ ಮಾತೃಭಾಷೆ ಇಲ್ಲವೆ ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದರು. ಈ ಕಾರಣಗಳಿಂದಾಗಿ ಸಂಸ್ಕೃತ ಆರಿಸಿಕೊಂಡವರು ಪರೀಕ್ಷೆಯಲ್ಲಿ ಇತರ ಭಾಷೆಗಳನ್ನು ಆಯ್ದುಕೊಂಡ ವಿದ್ಯಾರ್ಥಿಗಳಿಗಿಂತ ಹೆಚ್ಚು ಅಂಕಗಳನ್ನು ಗಳಿಸುವುದು ಸಾಧ್ಯ ಎಂಬ ಅಭಿಪ್ರಾಯ ಅಲ್ಲಲ್ಲಿ ಪ್ರಚಲಿತವಾಗಿತ್ತು. ಈ ವಿಷಯ ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಮತ್ತು ಶಿಕ್ಷಣ ತಜ್ಞರಲ್ಲಿ ಕಿರಿಕಿರಿಯನ್ನು ಉಂಟು ಮಾಡಿತು. ಸಂಸ್ಕೃತದ ಪಠ್ಯವಸ್ತು ಅತ್ಯಂತ ಸುಲಭವಾಗಿರುವುದರಿಂದಲೂ ಮತ್ತು ಆ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆಯುವ ಅವಕಾಶವಿರುವುದರಿಂದ ಕನ್ನಡ ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳು ಕನ್ನಡವನ್ನು ಮಾತೃಭಾಷೆಯಾಗಿ ಆಯ್ಕೆ ಮಾಡುವುದನ್ನು ಬಿಟ್ಟು ಅಧಿಕ ಸಂಖ್ಯೆಯಲ್ಲಿ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಆಯ್ಕೆ ಮಾಡುವುದರಿಂದ ಕನ್ನಡಕ್ಕೆ ಧಕ್ಕೆ ಬರುವುದೆಂಬ ಭೀತಿಯನ್ನು ವ್ಯಕ್ತಪಡಿಸಿದರು. ಅಲ್ಲದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸಿದವರಲ್ಲಿ ಹೆಚ್ಚು ಜನರು ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಆಯ್ಕೆಮಾಡಿಕೊಂಡು ಪರೀಕ್ಷೆಗೆ ಕುಳಿತವರೆ ಆಗಿದ್ದರು. ಕನ್ನಡ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಕೃತದ ಕಡೆಗೆ ಆಕರ್ಷಿತರಾಗಲು ಇದೂ ಒಂದು ಕಾರಣವೆಂದು ಭಾವಿಸಿದರು. ಅಲ್ಲಲ್ಲಿ ಇದರ ಬಗ್ಗೆ ಟೀಕೆ ಟಿಪ್ಪಣಿಗಳು ಪ್ರಾರಂಭವಾಗಿ 1976ರಲ್ಲಿ ಶಿವಮೊಗ್ಗದಲ್ಲಿ ನಡೆದ 49ನೆಯ ಸಾಹಿತ್ಯ ಸಮ್ಮೇಳನದಲ್ಲಿ ಈ ವಿಷಯ ಬಹಿರಂಗವಾಗಿ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೆ ಚರ್ಚೆಗೆ ಬಂದಿತು.

ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ಕೈಬಿಡಬೇಕೆಂದೂ, ಕನ್ನಡ ಭಾಷೆಯನ್ನು ಕನ್ನಡೇತರರ ಮಕ್ಕಳಿಗೆ ಕಡ್ಡಾಯ ಮಾಡಬೇಕೆಂದೂ ಠರಾವು ಮಂಡಿಸಿ ಆ ಠರಾವು ಅಂಗೀಕೃತವಾಯಿತು. ಆ ಠರಾವನ್ನು ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರಕ್ಕೆ ಕಳುಹಿಸಿ ಸಂಸ್ಕೃತವನ್ನು ಪ್ರಥಮಭಾಷೆಗಳ ಪಟ್ಟಿಯಿಂದ ಕೈಬಿಡಬೇಕೆಂದೂ, ಪ್ರಾದೇಶಿಕ ಭಾಷೆಯೂ, ಜಡಳಿತ ಭಾಷೆಯೂ ಆದ ಕನ್ನಡ ಅಭ್ಯಾಸವನ್ನು ಎಲ್ಲರಿಗೂ ಕಡ್ಡಾಯ ಮಾಡಬೇಕೆಂದೂ ಪ್ರಾರ್ಥಿಸಿತು.

ಸಂಸ್ಕೃತದ ಬಗ್ಗೆ ಮಾಡಿದ ಆರೋಪಗಳ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಸರ್ಕಾರ ಈ ವಿಷಯವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕಳುಹಿಸಿ ವರದಿ ಕೊಡುವಂತೆ ಕೇಳಿತು. ಮಂಡಳಿಯ ವರದಿಯೂ ಈ ಆರೋಪಗಳನ್ನು ಪುಷ್ಟೀಕರಿಸಿತು. ಈ ವರದಿ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ಮುಂದುವರಿಸಬಾರದೆಂಬ ವಾದಕ್ಕೆ ಮತ್ತಷ್ಟು ಪುಷ್ಟಿ ಕೊಟ್ಟಿತು. ಸಂಸ್ಕೃತದ ಪರ ಮತ್ತು ವಿರೋಧವಾದ ವಾದವಿವಾದಗಳು ಮುಂದುವರಿಯುತ್ತಲೇ ಇದ್ದುವು.

3

ಆಗಿದ್ದ ಶಿಕ್ಷಣ ವ್ಯವಸ್ಥೆಯಂತೆ ಯಾವ ಹಂತದಲ್ಲಿಯೂ ಭಾಷಾ ಅಲ್ಪಸಂಖ್ಯಾತರ ಮಕ್ಕಳು ಕನ್ನಡ ಕಲಿಯದೆ ಶಾಲಾಶಿಕ್ಷಣ ಮುಗಿಸಬಹುದಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡಿಗರು ಈ ವ್ಯವಸ್ಥೆಯನ್ನು ವಿರೋಧಿಸಿ ಎಲ್ಲರಿಗೂ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲು ಪ್ರಾರಂಭಿಸಿದರು. ರಾಜ್ಯ ಸರ್ಕಾರ ರಾಜ್ಯದಲ್ಲಿ ಎಲ್ಲಾ ಹಂತದಲ್ಲೂ ಕನ್ನಡ ಆಡಳಿತಭಾಷೆ ಆಗಬೇಕೆಂದು ಘೋಷಿಸಿದ ಮೇಲೆ ಈ ಒತ್ತಾಯಕ್ಕೆ ಮತ್ತಷ್ಟು ಚಾಲನೆ ದೊರಕಿತು. ಕನ್ನಡಿಗರ ಈ ಒತ್ತಾಯ ಅಸ್ವಾಭಾವಿಕವಲ್ಲವೆಂದು ಹೇಳಬೇಕಾಗಿಲ್ಲ. ಅದು ಸ್ವಯಂವಿದಿತ.

ಮೇಲಿನ ವಾದವಿವಾದಗಳು ಪ್ರಾರಂಭವಾದಾಗಲೇ ಸರ್ಕಾರ ಆದುವರೆಗೂ ಒಂದು ವರ್ಷದ ಅವಧಿಯದ್ದಿದ್ದ ಸ್ನಾತಕ ಪೂರ್ವ ಶಿಕ್ಷಣವನ್ನು ಪುನರ್‌ರಚಿಸಿ ಎರಡು ವರ್ಷಗಳ ಅವಧಿಯ ವ್ಯಾಸಂಗ ವ್ಯವಸ್ಥೆಯನ್ನು 1972 ರಲ್ಲಿ ಅನುಷ್ಠಾನಕ್ಕೆ ತಂದಿತು. ಈ ಬದಲಾವಣೆಯಿಂದ ಮತ್ತೊಮ್ಮೆ ಪ್ರೌಢಶಾಲಾ ಪಠ್ಯವಸ್ತುವಿನ್ನು ಪರಿಷ್ಕರಿಸುವುದು ಅಗತ್ಯವಾಯಿತು. ಆದರಂತೆ ಸರ್ಕಾರ ಪಠ್ಯವಸ್ತುರಚನಾಸಮಿತಿಯನ್ನು ರಚಿಸಿತು. ಸಮಿತಿ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯವರು ರಚಿಸಿದ್ದ ಪಠ್ಯವಸ್ತುವನ್ನು ಆಧಾರವಾಗಿಟ್ಟುಕೊಂಡು ಪಠ್ಯವಸ್ತುವಿನ ಪರಿಷ್ಕರಣ ಕಾರ್ಯ ಪ್ರಾರಂಭಿಸಿತು. ಇದರಿಂದ ಪ್ರೌಢಶಾಲೆಗಳಲ್ಲಿ ಅಭ್ಯಸಿಸಬೇಕಾದ ವಿಷಯಗಳ ಪಠ್ಯವಸ್ತುವಿನ ವ್ಯಾಪ್ತಿ ಹೆಚ್ಚಾಯಿತು.

ಹೀಗೆ ಪರಿಷ್ಕರಿಸಿದ ಪಠ್ಯವಸ್ತುವನ್ನು ಅನುಷ್ಠಾನಕ್ಕೆ ತರುವುದಕ್ಕೆ ಮೊದಲು ಅನುಮೋದನೆಗಾಗಿ ರಾಜ್ಯ ಶಿಕ್ಷಣ ಸಲಹಾಮಂಡಳಿಯ ಮುಂದೆ ತರಲಾಯಿತು. ಈ ಮಂಡಳಿ ಶಿಕ್ಷಣ ತಜ್ಞರಿಂದ ಕೂಡಿದೆ. ಸದಸ್ಯರು ಪ್ರತಿಯೊಂದು ಅಂಶವನ್ನು ಕೂಲಂಕುಷವಾಗಿ ಪರಿಶೀಲಿಸಿ ತಮ್ಮ ಅಭಿಪ್ರಾಯವ್ಯಕ್ತಪಡಿಸಿದರು. ಸಂಸ್ಕೃತದ ಬಗ್ಗೆ ಚರ್ಚೆ ಪ್ರಾರಂಭವಾದಾಗ ಪರ ಮತ್ತು ವಿರೋಧವಾಗಿ ಅಭಿಪ್ರಾಯಗಳು ವ್ಯಕ್ತಪಟ್ಟುವು. ಸಂಸ್ಕೃತವನ್ನು ಪ್ರಥಮಭಾಷೆಗಳ ಪಟ್ಟಿಯಿಂದ ಕೈಬಿಡಬೇಕೆಂಬುದು ಕೆಲವರ ವಾದವಾದರೆ ಅದು ಎಂದೂ ಕನ್ನಡದ ಬೆಳವಣಿಗೆಗೆ ಧಕ್ಕೆಯುಂಟು ಮಾಡುವುದಿಲ್ಲವಾದುದರಿಂದ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಉಳಿಯಬೇಕೆಂದು ಕೆಲವರು ವಾದಿಸಿದರು. ಪ್ರಥಮ ಘಟ್ಟದಲ್ಲಿ ಸಂಸ್ಕೃತವನ್ನು ಪ್ರಥಮಭಾಷೆಗಳ ಪಟ್ಟಿಯಿಂದ ಕೈಬಿಡಬೇಕೆಂದು ನಿರ್ಣಯ ಆಯಿತು. ಆದರೆ ಮರು ಚರ್ಚೆಯಾಗಿ ಆ ನಿರ್ಣಯ ಬದಲಾಗಿ ಸಂಸ್ಕೃತ ಹಿಂದಿನಂತೆಯೇ ಪ್ರಥಮ ಭಾಷೆಯಾಗಿ ಉಳಿಯಬೇಕೆಂದೂ, ಅದರ ಮಟ್ಟ ಉಳಿದ ಪ್ರಥಮಭಾಷೆಗಳ ಮಟ್ಟಕ್ಕೆ ಸರಿಸಮನಾಗಿರಬೇಕೆಂದೂ ನಿರ್ಣಯ ಆಯಿತು. ಪರಿಷ್ಕೃತ ಪಠ್ಯವಸ್ತು 1978-79ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಕ್ಕೆ ಬಂದಿತು.

ಮಂಡಳಿಯ ಸಲಹೆಯಂತೆ ಸಂಸ್ಕೃತದ ಪಠ್ಯವಸ್ತುವನ್ನು ಸಾಕಷ್ಟು ಕಠಿಣಮಾಡಿ ಇತರ ಪ್ರಥಮಭಾಷೆಗಳ ಮಟ್ಟಕ್ಕೆ ಸರಿಸಮನಾಗಿ ಮಾಡಲು ಪ್ರಯತ್ನಿಸಿದರೂ ಆ ಪ್ರಯತ್ನ ಸಫಲವಾಗಲಿಲ್ಲ. ಆದರೆ ಹಿಂದಿನ ಪಠ್ಯವಸ್ತುವಿಗಿಂತ ಪರಿಷ್ಕೃತ ಪಠ್ಯವಸ್ತು ಸ್ವಲ್ಪಮಟ್ಟಿಗೆ ಕಠಿಣವಾಯಿತು.

ಅಲ್ಲದೆ ಅಲ್ಲಿಯವರೆಗೂ ಅಸ್ತಿತ್ವದಲ್ಲಿಲ್ಲದ ಒಂದು ಹೊಸ ವ್ಯವಸ್ಥೆ ಪರಿಷ್ಕೃತ ಪಠ್ಯವಸ್ತುವಿನಲ್ಲಿ ಅಳವಡಿಸಲಾಯಿತು. 1978 ರವರೆಗೆ ತ್ರಿಭಾಷಾ ಸೂತ್ರವಂತೆ ಹಿಂದಿಯನ್ನು ತೃತೀಯ ಭಾಷೆಯಾಗಿ ಅಭ್ಯಸಿಸುತ್ತಿದ್ದರು. ಆದರೆ ಹಿಂದಿ ಭಾಷೆಯ ಅಭ್ಯಾಸ ಕಡ್ಡಾಯ

ವಾಗಿರಲಿಲ್ಲ ಮತ್ತು ವಿದ್ಯಾರ್ಥಿಗಳು ಆ ವಿಷಯದಲ್ಲಿ ಸ್ವಇಚ್ಛೆಯಿಂದ ಪರೀಕ್ಷೆಗೆ ಕೂಡಬಹುದಾಗಿತ್ತು. ಅಂತಹವರಿಗೆ ಕೆಲವು ರಿಯಾಯಿತಿ ದೊರೆಯುತ್ತಿತ್ತು. ಅವು ಯಾವುವೆಂದರೆ: ಯಾವುದೇ ವಿದ್ಯಾರ್ಥಿ ಸ್ವಇಚ್ಛೆಯಿಂದ ಹಿಂದಿಯಲ್ಲಿ ಪರೀಕ್ಷೆಗೆ ಕುಳಿತು ಆ ವಿಷಯದಲ್ಲಿ ಶೇಕಡ 25 ಅಂಕಗಳನ್ನು ಗಳಿಸಿದರೆ ಅಂತಹ ವಿದ್ಯಾರ್ಥಿ ಉಳಿದ ವಿಷಯಗಳಲ್ಲಿ ಪ್ರತಿ ವಿಷಯದಲ್ಲೂ ಶೇಕಡ 30 ಅಂಕಗಳಿಗಿಂತ ಕಡಮೆಯಿಲ್ಲದಂತೆ ಅಂಕಗಳನ್ನು ಗಳಿಸಿ ಎಲ್ಲಾ ವಿಷಯಗಳ ಅಂಕಗಳೂ ಒಟ್ಟಾಗಿ ಶೇಕಡ 75 ಅಂಕಗಳು ಸರಾಸರಿ ಬಂದಿದ್ದರೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅರ್ಹರಾಗುತ್ತಿದ್ದರು. ಹಿಂದಿಯಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳದ ವಿದ್ಯಾರ್ಥಿಗಳು ಉತ್ತೀರ್ಣರಾಗಲು ಪ್ರತಿ ವಿಷಯದಲ್ಲೂ ಶೇಕಡ 35 ಅಂಕಗಳನ್ನು ಪಡೆಯಬೇಕಾಗಿತ್ತು. ಹಿಂದೀ ವಿಷಯದಲ್ಲಿ ಪರೀಕ್ಷೆ ತೆಗೆದು ಕೊಂಡವರು ಆ ವಿಷಯದಲ್ಲಿ ನಿಗದಿಮಾಡಿದ ಅಂಕಗಳನ್ನು ಗಳಿಸದೆ ಉಳಿದ ವಿಷಯಗಳಲ್ಲಿ ಪ್ರತಿ ವಿಷಯದಲ್ಲೂ ಶೇಕಡ 35 ಅಂಕಗಳನ್ನು ಗಳಿಸಿದ್ದರೆ ಅವರೂ ಉತ್ತೀರ್ಣರಾಗಲು ಅರ್ಹರಾಗುತ್ತಿದ್ದರು. ಅಂದರೆ ಹಿಂದಿಯನ್ನು ತೃತೀಯ ಭಾಷೆಯಾಗಿ ಕಡ್ಡಾಯವಾಗಿ ಅಭ್ಯಾಸಮಾಡುವ ಅವಕಾಶವನ್ನು ಪಾಠಕ್ರಮದಲ್ಲಿ ಅಳವಡಿಸಿದ್ದರೂ ವಾಸ್ತವವಾಗಿ ಅದು ಪರೀಕ್ಷೆಗೆ ಕಡ್ಡಾಯದ ವಿಷಯವಾಗಿರಲಿಲ್ಲ. ಮಕ್ಕಳ ಭಾಷೆಯಲ್ಲಿ ಹೇಳುವುದಾದರೆ ಅದರ ಸ್ಥಿತಿ "ಆಟಕ್ಕುಂಟು, ಲೆಕ್ಕಕ್ಕಿಲ್ಲ" ಎಂಬಂತಿತ್ತು.

ಪರಿಷ್ಕೃತ ಪಠ್ಯಪದ್ಧತಿ 1978-79ನೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಕ್ಕೆ ಬಂದಾಗ ಮೇಲಿನ ಸೂತ್ರವನ್ನು ಕನ್ನಡಕ್ಕೂ ಅನ್ವಯಿಸಿ ಕನ್ನಡೇತರ ವಿದ್ಯಾರ್ಥಿಗಳು ಕನ್ನಡವನ್ನು ತೃತೀಯ ಭಾಷೆಯಾಗಿ ಅಭ್ಯಸಿಸಲು ಅವಕಾಶಮಾಡಿಕೊಟ್ಟಿದೆ. ಆದರೆ ಇದರಲ್ಲಿ ಕಡ್ಡಾಯವಿಲ್ಲ. ಸ್ವಇಚ್ಛೆಯಿಂದ ಅಭ್ಯಸಿಸಬಹುದು. ಇದೊಂದು ಕನ್ನಡಿಗರ ಕಣ್ಣೊರಸುವ ವ್ಯವಸ್ಥೆ. ಇದು ಈಗ ಅನುಷ್ಠಾನದಲ್ಲಿರುವ ವ್ಯವಸ್ಥೆ ಒಟ್ಟಿನಲ್ಲಿ ಕನ್ನಡೇತರರ ಮಕ್ಕಳಿಗೆ ಯಾವ ಸಂತದಲ್ಲೂ ಕನ್ನಡ ಕಡ್ಡಾಯದ ಅಭ್ಯಾಸದ ವಿಷಯವಾಗಿಲ್ಲ.

ಮೇಲಿನ ವ್ಯವಸ್ಥೆಗೆ ಕನ್ನಡಿಗರು ತೀವ್ರವಿರೋಧ ವ್ಯಕ್ತಪಡಿಸಿದುದಲ್ಲದೆ ಕನ್ನಡೇತರರ ಮಕ್ಕಳಿಗೆ ಕನ್ನಡ ಕಡ್ಡಾಯಮಾಡಬೇಕೆಂದು ಸಾರ್ವಜನಿಕ ವೇದಿಕೆಗಳಲ್ಲಿ, ಪತ್ರಿಕೆಗಳಲ್ಲಿ ಮತ್ತು ಮಾನವಿಗಳ ಮೂಲಕ ಸರ್ಕಾರವನ್ನು ಒತ್ತಾಯಿಸಲು ಪ್ರಾರಂಭಿಸಿದರು. ಕನ್ನಡ ಆಡಳಿತದ ಎಲ್ಲಾ ಹಂತದಲ್ಲೂ ಆಡಳಿತ ಭಾಷೆಯಾಗಬೇಕೆಂಬ ಸರ್ಕಾರದ ನಿಲುವು ಯಶಸ್ವಿಯಾಗ ಬೇಕಾದರೆ ವಿವಿಧ ಕ್ಷೇತ್ರಗಳಲ್ಲಿ, ವಿವಿಧ ಹಂತಗಳಲ್ಲಿ ಜವಾಬ್ದಾರಿ ನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿಗಳು ಶ್ರೀ ಸಾಮಾನ್ಯರ ಭಾಷೆಯಲ್ಲಿ ವ್ಯವಹರಿಸುವ ಶಕ್ತಿ ಪಡೆದಿರಬೇಕು. ಇಲ್ಲದಿದ್ದರೆ ಅವರ ಸಮಸ್ಯೆಗಳನ್ನು ಅರಿತುಕೊಳ್ಳುವುದು ಕಷ್ಟ. ಅಧಿಕಾರಿಗಳ ಮತ್ತು ಶ್ರೀಸಾಮಾನ್ಯರ ಸಂಬಂಧವನ್ನು ಮಧುರಗೊಳಿಸಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲು ಸಹಕಾರಿಯಾಗುವ ಸಾಧನ ಭಾಷೆ. ಈ ದೃಷ್ಟಿಯಿಂದ ಕನ್ನಡ ಎಲ್ಲರಿಗೂ ಕಡ್ಡಾಯವಾಗಬೇಕೆಂಬ ಕನ್ನಡಿಗರ ಒತ್ತಾಯ ಅಂದಾಭಿಮಾನದಿಂದ ಮೂಡಿಬಂದದ್ದಲ್ಲ ವೆಂದು ಸ್ಪಷ್ಟವಾಗುತ್ತದೆ. ಈ ಒತ್ತಾಯ ದಿನೇದಿನೇ ತೀಪ್ರರೂಪ ತಾಳುತ್ತಿದೆ.

ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ಕೈಬಿಡಬೇಕು ಮತ್ತು ಕನ್ನಡ ಭಾಷೆಯನ್ನು ಕನ್ನಡೇತರರು ಕಡ್ಡಾಯವಾಗಿ ಅಭ್ಯಾಸಮಾಡುವಂತೆ ವ್ಯವಸ್ಥೆಮಾಡಬೇಕೆಂಬ ಒತ್ತಾಯವನ್ನು ಸರ್ಕಾರ ಪರಿಶೀಲಿಸಿ 1979 ಅಕ್ಟೋಬರ್ ದಿನಾಂಕ ರಲ್ಲಿ ಒಂದು ಸರ್ಕಾರಿ ಆಜ್ಞೆ ಹೊರಡಿಸಿತು. ಆ ಆಜ್ಞೆಯಂತೆ ಸಂಸ್ಕೃತ ಪ್ರಥಮಭಾಷೆಗಳ ಪಟ್ಟಿಯಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡು ತೃತೀಯ ಭಾಷೆಯ ಸ್ಥಾನ ಪಡೆಯಿತು.

ಸರ್ಕಾರದ ಈ ಆಜ್ಞೆ ಮತ್ತೆ ಸಾರ್ವಜನಿಕ ಕ್ಷೇತ್ರದಲ್ಲಿ ವಾದವಿವಾದಗಳಿಗೆ ಎಡೆ ಗೊಟ್ಟು ಸಾಕಷ್ಟು ಧೂಳೆಬ್ಬಿಸಿತು. ವಿವಾದ ಉಚ್ಚ ನ್ಯಾಯಾಲಯದ ಮುಂದೆಯೂ ಹೋಯಿತು. ಸಂಸ್ಕೃತದ ಪರ ಮತ್ತು ವಿರೋಧವಾಗಿ ಸಾಕಷ್ಟು ಪ್ರತಿಕ್ರಿಯೆ ವ್ಯಕ್ತಪಟ್ಟಿದೆ. ರಾಜ್ಯದ ಎರಡೂ ಶಾಸನಸಭೆಗಳಲ್ಲಿ ಈ ವಿಷಯವಾಗಿ ಚರ್ಚೆ ನಡೆದು ಸರ್ಕಾರ ಈ ಸಮಸ್ಯೆಯನ್ನು ತಜ್ಞರ ಸಮಿತಿಗೆ ವಹಿಸಿ ಸಮಿತಿಯ ಸಲಹೆಯಂತೆ ನಿರ್ಣಯ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿ ಆದರಂತೆ ಸರ್ಕಾರಿ ಆಜ್ಞೆಯಂತೆ ಸಮಿತಿ ರಚನೆಯಾಯಿತು.

ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು

1.	ಡಾ : ವಿ. ಕೃ. ಗೋಕಾಕರವರು	....	ಅಧ್ಯಕ್ಷರು
2.	ಶ್ರೀ ಜಿ. ನಾರಾಯಣರವರು	....	ಸದಸ್ಯರು
3.	ಪ್ರೊ: ಎಸ್. ಕೆ. ರಾಮಚಂದ್ರರಾಯರು	....	ಸದಸ್ಯರು
4.	ಶ್ರೀ ತ. ಸು. ಶಾಮರಾಯರು	....	ಸದಸ್ಯರು
5.	ಡಾ: ಕೆ. ಕೃಷ್ಣಮೂರ್ತಿಯವರು	....	ಸದಸ್ಯರು
6.	ಡಾ: ಮಲ್ಲೇದೇವರು	....	ಸದಸ್ಯರು
7.	ಶ್ರೀ ಎಸ್. ಮಂಚಯ್ಯ, ಆಡಿಷನಲ್ ಕಾರ್ಯದರ್ಶಿ, ಶಿಕ್ಷಣ ಮತ್ತು ಯುವಜನ ಸೇವಾ ಇಲಾಖೆ, ಕರ್ನಾಟಕ ಸರ್ಕಾರ.	....	ಸದಸ್ಯ–ಕಾರ್ಯದರ್ಶಿ

ಸಮಿತಿಗೆ ಪರಿಶೀಲನೆಗಾಗಿ ವಹಿಸಿದ ವಿಷಯಗಳು :

1. ಸಂಸ್ಕೃತ ಶಾಲಾ ಪಠ್ಯವಸ್ತುವಿನಲ್ಲಿ ಅಭ್ಯಾಸದ ವಿಷಯವಾಗಿ ಉಳಿಯಬೇಕೆ ?
2. ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ ?
3. ತ್ರಿಭಾಷಾಸೂತ್ರದಂತೆ ಕನ್ನಡ ಕಡ್ಡಾಯ ಮಾಡಿ ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೆ ?

ಸಮಿತಿಯನ್ನು ರಚಿಸಿದ ಸರ್ಕಾರಿ ಆಜ್ಞೆಯಂತೆ ಸಮಿತಿ ಮೂರು ತಿಂಗಳ ಅವಧಿಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶ ನೀಡಲಾಗಿತ್ತು.

ಸಮಿತಿಯ ಪ್ರಥಮಸಭೆ ಅಧ್ಯಕ್ಷರಾದ ಡಾ: ವಿ. ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮಿತಿಯ ಕೋಣೆಯಲ್ಲಿ ದಿನಾಂಕ ರಲ್ಲಿ ನಡೆಯಿತು. ಅಂದು ಪ್ರಮುಖವಾಗಿ ಚರ್ಚೆಯಾದ ವಿಷಯ ಸಮಿತಿ ಅನುಸರಿಸಬೇಕಾದ ಕಾರ್ಯವಿಧಾನ ಸಮಸ್ಯೆಯ ಗಂಭೀರತೆಯ ಅರಿವಿದ್ದ ಅಧ್ಯಕ್ಷರು ಮತ್ತು ಸದಸ್ಯರು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗಿರುವ ಸ್ಥಾನಮಾನಗಳು—ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾದೇಶಿಕ ಭಾಷೆಗಳ ಮಂತ್ತು ಅಲ್ಪಸಂಖ್ಯಾತರ ಭಾಷೆಗಳ ಸ್ಥಾನ—ಇತರ ರಾಜ್ಯಗಳಲ್ಲಿರುವ ಕನ್ನಡಿಗರಿಗೆ ದೊರೆತಿರುವ ಸೌಲಭ್ಯಗಳು—ಭಾಷಾ ಅಲ್ಪಸಂಖ್ಯಾತರಿಗೆ ರಾಜ್ಯಾಂಗದತ್ತವಾಗಿರುವ ಸೌಲಭ್ಯಗಳು ಕನ್ನಡವನ್ನು ಆಡಳಿತಭಾಷೆಯೆಂದು ಘೋಷಿಸಿದ ಸರ್ಕಾರದ

ನಿಲುವು—ಕರ್ನಾಟಕದಲ್ಲಿ ಆಡಳಿತಗಾರರ, ಶಿಕ್ಷಣ ತಜ್ಞರ, ಶಿಕ್ಷಕರ, ಸಾಹಿತಿಗಳ, ಸಂಘ ಸಂಸ್ಥೆಗಳ—ಅಲ್ಪಸಂಖ್ಯಾತರ ಪ್ರತಿಕ್ರಿಯೆ—ಶ್ರೀಸಾಮಾನ್ಯರ ಅಭಿಪ್ರಾಯ—ಇವುಗಳನ್ನು ಅರಿತು, ಅವುಗಳನ್ನು ತೂಲನಮಾಡಿ ನಿರ್ಣಯ ತೆಗೆದುಕೊಳ್ಳಬೇಕೆಂದು ನಿರ್ಧರಿಸಿತು ಅದರಂತೆ ಮೈಸೂರು, ಮಂಗಳೂರು, ಬೆಂಗಳೂರು, ಧಾರವಾಡ ಮತ್ತು ಬೆಳಗಾಂವಿಗಳಲ್ಲಿ ಸಂದರ್ಶನ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಯಿತು. ಬಿಜಾಪುರದಲ್ಲಿ ಸಂದರ್ಶನಕ್ಕೆ ಪರಿಸ್ಥಿತಿ ಅನುಕೂಲವಾಗಿಲ್ಲವೆಂದರಿಂದ ಅಲ್ಲಿಂದ ಮುಂದಿನ ಪ್ರವಾಸವನ್ನು ರದ್ದುಪಡಿಸಿ ಅಲ್ಲಿಯವರೆಗೆ ಸಂಗ್ರಹಿಸಿದ್ದ ಅಭಿಪ್ರಾಯಗಳ ಆಧಾರದ ಮೇಲೆ ಶೈಕ್ಷಣಿಕ ತತ್ವವನ್ನೆ ಪ್ರಧಾನವಾಗಿಟ್ಟುಕೊಂಡು ಸಮಿತಿ ವರದಿಯನ್ನು ತಯಾರಿಸಿದೆ. ಅಧ್ಯಕ್ಷರು ವರದಿಯ "ಮೊದಲ ಮಾತು" ಎಂಬಲ್ಲಿ ಸಮಿತಿಯ ಧೋರಣವ ಬಗ್ಗೆ ಸ್ಪಷ್ಟವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಂದಿನ ಭಾಷಾ ಶಿಕ್ಷಣ ಸಮಸ್ಯೆ : ಭಾಷೆಗಳು ಹಾಗೂ ಭಾಷಾ ಶಿಕ್ಷಣತತ್ವಗಳು

(1) ಸಮಸ್ಯೆಯ ರೂಪರೇಷೆ :

ಭಾಷೆಗಳನ್ನು ಕಲಿಸುವುದರ ಉದ್ದೇಶವೇನು? ರಾಜ್ಯದ ಲಕ್ಷೋಪಲಕ್ಷ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಜ್ಞಾನವನ್ನು ಸಾಧ್ಯವಿದ್ದಷ್ಟು ಸುಲಭವಾಗಿ ಒದಗಿಸಿಕೊಡುವ ಕ್ರಮ ಇದ್ದರೆ ಅದು ಯಾವುದು? ಕರ್ನಾಟಕ ರಾಜ್ಯದಲ್ಲಿ ಈಗಿನ ಹಾಗೂ ಮುಂಬರುವ ಪೀಳಿಗೆಗೆ ಜ್ಞಾನಾರ್ಜನೆಯ ಏರ್ಪಾಟೇನು? ಭಾಷಾಭ್ಯಾಸ ಉಳಿದ ವಿಷಯಗಳ ವ್ಯಾಸಂಗದೊಡನೆ ಹೇಗೆ ಹವಣಾಗಿ ಹೊಂದಿಕೊಂಡೀತು? ನಮ್ಮ ರಾಷ್ಟ್ರದ ಹಾಗೂ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಈ ಪಥ್ಯ ಕ್ರಮಕ್ಕೆ ಯಾವ ಗುರಿಗಳಿರಬೇಕು? ಪ್ರಾಥಮಿಕ ಶಿಕ್ಷಣದ ಹಂತವನ್ನು ಲಕ್ಷ್ಯದಲ್ಲಿಟ್ಟು ಇವೇ ಮೊದಲಾದ ಪ್ರಶ್ನೆಗಳನ್ನು ಇಲ್ಲಿ ಪರಿಶೀಲಿಸಬೇಕಾಗಿದೆ. ರಾಜ್ಯದ ಮಕ್ಕಳನ್ನು ಕಣ್ಣಮುಂದಿರಿಸಿಕೊಂಡು ಈ ಕ್ರಮವನ್ನು ನಾವು ರೂಪಿಸಬೇಕಾಗುವುದು. ಕೆಲವರು ಸುವಿಶಾಲ ಮಕ್ಕಳು ಹುಟ್ಟಿದ ಹಲವಾರು ತಿಂಗಳುಗಳಲ್ಲಿಯೇ 'ಪಪ್ಪಾ' 'ಮಮ್ಮಾ' ಎಂದು ಬಾಯ್ತೆರೆಯಬಹುದು. ಒಂದು ಕಠಿಣ ಪರಂಪರೆಯ ಪರಿಸರದಲ್ಲಿ ಬೆಳೆದ ಮಕ್ಕಳ ಅಭ್ಯಾಸ ಸಂಸ್ಕೃತ ಶಬ್ದಗಳಿಂದ ಪ್ರಾರಂಭವಾಗಬಹುದು. ಆದರೆ ಭಾಷೆಯ ತಳಹದಿಯ ಮೇಲೆ ರಚಿಸಿದ ರಾಜ್ಯದಲ್ಲಿಯ ಬಹುಸಂಖ್ಯಾತರ ಮಕ್ಕಳು ತಮ್ಮ ಮಾತೃಭಾಷೆಯ (ಎಂದರೆ ಮಾತೃಭಾಷೆ ಎಂದೇ ರಾಜ್ಯ ಭಾಷೆಯಾಗಿರುವ ಭಾಷೆಯ) ಶಬ್ದಗಳನ್ನು ಕಲಿತು ಮಾತನಾಡುತ್ತವೆ. ಆ ರಾಜ್ಯದಲ್ಲಿಯ ಅಲ್ಪಸಂಖ್ಯಾತರ ಮಾತೃ ಭಾಷೆಗಳಲ್ಲಿ ಬಾಯ್ದೆರೆದು ಮಕ್ಕಳು ಅವನ್ನು ಕಲಿತು, ತಮ್ಮ ಸುತ್ತಣ ಪರಿಸರದಲ್ಲಿ ಸಹಜವಾಗಿ ವ್ಯಾಪಿಸಿರುವ ರಾಜ್ಯಭಾಷೆಯನ್ನೂ ಅನಾಯಾಸವಾಗಿ ಕಲಿಯುತ್ತವೆ.

ಇವೆರಡನ್ನೂ ಮೀರಿ ಉಚ್ಚ ಶಿಕ್ಷಣಕ್ಕಾಗಿ ಹಾಗೂ ಉದ್ಯೋಗಕ್ಕೋಸ್ಕರ ಮಕ್ಕಳು ಬೇರೆ ಭಾಷೆಗಳನ್ನು ಕಲಿತುಕೊಳ್ಳಬೇಕಾದೀತು. ಯಾವ ದಿಕ್ಕನ್ನು ಹಿಡಿದು ಅವರು ಮುಂದುವರಿಯುವರೆಂಬುದರ ಮೇಲೆ ಈ ಬೇರೆ ಭಾಷೆ ಇಲ್ಲವೆ ಭಾಷೆಗಳ ನಿರ್ಣಯವಾಗಬಹುದು. ಅಧಿಕೃತ ಅಂತರರಾಜ್ಯ ಸಂಪರ್ಕ ಭಾಷೆಯಾದ ಹಿಂದಿ ಸಹಸಂಪರ್ಕ ಭಾಷೆ ಹಾಗೂ ಆಧುನಿಕ ಪ್ರಪಂಚ ವಿಜ್ಞಾನದ ಭಾಷೆ ಮತ್ತು ಅಂತರ್ ರಾಷ್ಟ್ರೀಯ ಸಂಪರ್ಕ ಭಾಷೆಯಾದ ಇಂಗ್ಲಿಷು. ನೆಲಸಬೇಕೆಂದು ನಿರೀಕ್ಷಿಸಿರುವ ನೆರೆಹೊರೆಯ ರಾಜ್ಯ ಇಲ್ಲವೆ ಭಾರತದ ಯಾವ ದೊಂದು ರಾಜ್ಯದಲ್ಲಿಯ ಭಾಷೆ. ಉದ್ಯೋಗದ ದೃಷ್ಟಿಯಿಂದ ಅತ್ಯಂತ ಸೀಮಿತವಾದ

ಅಂದರೆ ಪ್ರಾಚೀನ ಸಂಸ್ಕೃತಿ ಸಾಹಿತ್ಯಗಳ ಅಭ್ಯಾಸದ ದೃಷ್ಟಿಯಿಂದ ಅಮೂಲ್ಯವಾದ ಸಂಸ್ಕೃತ, ಫ್ರೆಂಚ್ ಇಲ್ಲವೆ ಜರ್ಮನ್‌ದಂತಹ ವಿದೇಶೀಯ ಭಾಷೆ—ಹೀಗೆ ಅನೇಕ ಭಾಷೆಗಳಲ್ಲಿ ಒಂದನ್ನು ಆಯ್ದುಕೊಳ್ಳಲು ವಿದ್ಯಾರ್ಥಿಯು ಇಚ್ಛಿಸಬಹುದು. ಆತನಿಗೆ ತನ್ನ ಮಾತೃ ಭಾಷೆಯ ಅಭ್ಯಾಸವನ್ನು ಮುಂದುವರಿಸುವ ಲವಲವಿಕೆಯೂ ಇರಬಹುದು.

ಇಂದಿನ ಶಿಕ್ಷಣ ಪರಿಸ್ಥಿತಿಯ ಬೆಳಕಿನಲ್ಲಿ ಈ ಭಾಷೆಗಳನ್ನು ಒಂದಕ್ಕೊಂದು ಹೋಲಿಸಿ ತೂಗಿ ನೋಡುವುದು ಪ್ರಯೋಜನಕರವಾದೀತು. ಹೀಗೆ ಮಾಡುವುದರಿಂದ ಇಂದಿನ ವಿದ್ಯಾರ್ಥಿಗಳ ಶಿಕ್ಷಣದ ದೃಷ್ಟಿಯಿಂದ ಈ ಭಾಷೆಗಳ ಹೆಚ್ಚು—ಕಡಿಮೆ ಇಲ್ಲವೆ ತರತಮ ಮಹತ್ವದ ಅರಿವಾದೀತು.

(2) ಪ್ರಾದೇಶಿಕ ಭಾಷೆ (ರಾಜ್ಯಭಾಷೆ) :

ಭಾಷಾ ತತ್ವದ ಮೇಲೆ ಭಾರತ ದೇಶವನ್ನು ರಾಜ್ಯಗಳನ್ನಾಗಿ ಆಡಳಿತದ ಸಲುವಾಗಿ ವಿಂಗಡಿಸಲಾಗಿದೆ. ಒಂದು ಭಾಷೆಯನ್ನಾಡುವ ಜನ ಏಕಮೇವವಾದ ರಾಜ್ಯದ ಆಡಳಿತಕ್ಕೆ ಒಳಪಟ್ಟಾಗ ಆಡಳಿತ ಸುಗಮ ಹಾಗೂ ಪ್ರಗತಿಪರವಾಗಿ ಆದರಲ್ಲಿ ತುಂಬ ಹೊಂದಾಣಿಕೆಯಿರುತ್ತದೆಂಬುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಈ ಹೊಂದಾಣಿಕೆಯನ್ನು ಇನ್ನಿಷ್ಟು ಪ್ರಬಲವಾಗಿಸಲು ಆ ಜನದ ಒಂದೇ ಆಡಳಿತದಲ್ಲಿ ಅಂತರ್ಗತವಾಗಿರುವ ಸಂಸ್ಕೃತಿ, ಸಾಹಿತ್ಯ ಹಾಗೂ ಇತಿಹಾಸಗಳು ಬಹಳ ಸಹಾಯಕವಾಗುತ್ತವೆ. ಹಿಂದಿನ ಪ್ರಾದೇಶಿಕ ವಿಭಾಗಗಳಿಗೆ ಒಂದು ಸುಸ್ಪಷ್ಟ ರೂಪವಿರಲಿಲ್ಲ. ಇಂದಿನ ಭಾಷಾ ರಾಜ್ಯಗಳಿಗೆ ಒಂದು ವ್ಯಕ್ತಿತ್ವವಿದೆ.

ಈ ಜನದೊಡನೆ ಉಳಿದ ಭಾಷೆಗಳನ್ನು ಮಾತನಾಡುವ ಭಾರತೀಯರು ಬಾಳುತ್ತಾರೆ, ಬಾಳಬೇಕಾಗುತ್ತದೆ. ತಮ್ಮ ತಮ್ಮ ಭಾಷಾ ರಾಜ್ಯಗಳಲ್ಲಿ ಪ್ರಭುತ್ವವನ್ನು ಹೊಂದಿದ ಭಾಷೆಗಳು ಇಲ್ಲಿ ಅಲ್ಪಸಂಖ್ಯಾತವಾಗುತ್ತವೆ. ಒಂದು ರಾಜ್ಯದಲ್ಲಿ ಅಲ್ಪಸಂಖ್ಯಾತ ಭಾಷೆಗಳನ್ನು ಮಾತನಾಡುವ ಜನರ ಮಾರ್ಗದರ್ಶನಕ್ಕಾಗಿ ಕೆಲವು ನಿಯಮಗಳಿವೆ. ಉದಾಹರಣಾರ್ಥ— ವಿದ್ಯಾರ್ಥಿಗಳು ಇಂಥಾ ಒಂದು ಭಾಷೆಯನ್ನು ಮಾತನಾಡುವವರಿದ್ದರೆ ಅವರಿಗೆ ಆಗತ್ಯವಾದ ಶಿಕ್ಷಣ ಸೌಲಭ್ಯಗಳನ್ನು ಅವರ ಮಾತೃಭಾಷೆಯಲ್ಲಿ ರಾಜ್ಯ ಸರ್ಕಾರ ಒದಗಿಸಬೇಕು. 1969 ಜುಲೈ ತಿಂಗಳು ದಿನಾಂಕ ಏಳರ ಸರ್ಕಾರದ ಆದೇಶದಂತೆ ಪ್ರತಿ ತರಗತಿಯಲ್ಲಿ ಭಾಷಾ ಅಲ್ಪ ಸಂಖ್ಯಾತರ ಮಕ್ಕಳು 10 ಮಂದಿ ಇದ್ದು ಒಂದನೆಂದ ನಾಲ್ಕನೆ ತರಗತಿಯವರೆಗಿನ ಒಟ್ಟು ಮಕ್ಕಳ ಸಂಖ್ಯೆ 30 ಇದ್ದರೆ ಅವರ ಮಾತೃಭಾಷೆಯ ಮೂಲ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿಕೊಡಬೇಕು. ಈ ಅನುಕೂಲ ಇದೇ ನಿಬಂಧನೆಯ ಮೇಲೆ 5, 6 ಮತ್ತು 7ನೇ ತರಗತಿಯ ಮಕ್ಕಳಿಗೂ ದೊರಕಬೇಕು.

ಮೇಲಿನ ಸರ್ಕಾರಿ ಆಜ್ಞೆಯಂತೆ ಪ್ರೌಢಶಾಲೆಗಳಲ್ಲಿಯೂ ಭಾಷಾ ಅಲ್ಪ ಸಂಖ್ಯಾತರ ಮಕ್ಕಳ ಸಂಖ್ಯೆ ಪ್ರತಿ ತರಗತಿಯಲ್ಲಿ 15 ಇದ್ದು ಮೂರೂ ತರಗತಿಗಳಿಂದ ಒಟ್ಟು 45 ವಿದ್ಯಾರ್ಥಿಗಳಿದ್ದರೆ ಅವರಿಗೆ ಅವರ ಮಾತೃಭಾಷಾ ಮಾಧ್ಯಮದ ಮೂಲಕ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿಕೊಡಬೇಕು.

ಆದರೆ ಈ ಅಲ್ಪಸಂಖ್ಯಾತರು ತಾವು ನೆಲಸಿದ ರಾಜ್ಯದ ಜನದೊಡನೆ ಒಂದಾಗಬೇಕಲ್ಲ? ಇದಕ್ಕಾಗಿಯೂ ನಿಯಮಗಳಿವೆ. ಪ್ರಾಥಮಿಕ ಮೂರನೆಯ ಇಯತ್ತೆಯಿಂದ ಪ್ರಾರಂಭಿಸಿ 7ನೇ ಇಯತ್ತೆಯವರೆಗೆ ಅಲ್ಪಸಂಖ್ಯಾತರ ಶಾಲೆಯಲ್ಲಿ ರಾಜ್ಯಭಾಷೆಯನ್ನು ಕಡ್ಡಾಯವಾಗಿ

ಕಲಿಸಬೇಕು. ಇದಾದ ಮೇಲೆ ಹೈಸ್ಕೂಲಿನಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿಯು ರಾಜ್ಯಭಾಷೆಯನ್ನು ತನ್ನ ಮಾಧ್ಯಮವನ್ನಾಗಿ ಸ್ವೀಕರಿಸುವುದಲ್ಲದೆ ರಾಜ್ಯಭಾಷೆಯನ್ನು ಕಡ್ಡಾಯವಾಗಿ ಕಲಿಯುತ್ತ ಎಸ್.ಎಸ್.ಎಲ್.ಸಿ. ಮುಗಿಸಿ ರಾಜ್ಯದ ವಾಣಿಜ್ಯ-ಉದ್ಯೋಗ ಸೇವಾವಕಾಶಗಳಲ್ಲಿ ಪ್ರಯೋಜನ ಪಡೆಯಬಹುದು.

ಅಲ್ಪಸಂಖ್ಯಾತರು ಈ ತತ್ವಗಳನ್ನು ಪಾಲಿಸದೆ ಒಂದು ದ್ವೀಪದಂತೆ ಕನ್ನಡ ಜಲಾಶಯದಲ್ಲಿ ಇರಲು ಬಯಸಿದಾಗ ವಿರಸವೇಳುತ್ತದೆ ; ಇದರಿಂದ ರಾಜ್ಯದ ಸಹಜೀವನದ ಹಾಗೂ ಭಾವೈಕ್ಯತೆಯ ಬಲವು ಕುಗ್ಗುತ್ತದೆ. ರಾಷ್ಟ್ರದ ದೃಷ್ಟಿಯಿಂದ ಏಕತೆಯನ್ನು ಹೆಚ್ಚು ಸುಗಮವಾಗಿ ಸಾಧಿಸಲೆಂದೇ ಭಾರತದಲ್ಲಿ ಭಾಷಾ ರಾಜ್ಯಗಳ ನಿರ್ಮಾಣವಾಗಿದೆ. ತಮ್ಮದೇ ಆದ ಭಾಷೆ, ಸಂಸ್ಕೃತಿಯ ಪರಂಪರೆ. ಇತಿಹಾಸದ ಅನನ್ಯತೆ—ಹೀಗೆ ಪ್ರತಿಯೊಂದು ಭಾಷಾ ರಾಜ್ಯವೂ ತನ್ನದೇ ಆದ ವ್ಯಕ್ತಿತ್ವವನ್ನು ಪಡೆದಿದೆ. ಇಂತಹ ಅನೇಕ ವ್ಯಕ್ತಿತ್ವಗಳು, ವಿವಿಧ ರಾಗಗಳು ಮೇಳನ ಸಂಗೀತದಲ್ಲಿ ಮಿಲಿತವಾಗುವಂತೆ ಭಾರತೀಯ ರಾಷ್ಟ್ರ ಪುರುಷನ ವ್ಯಕ್ತಿತ್ವದಲ್ಲಿ ಒಂದು ಸಮೃದ್ಧ ಏಕತೆಯನ್ನು ಪಡೆಯುತ್ತವೆ. ಆ ವ್ಯಕ್ತಿತ್ವವು ಅನನ್ಯವಾಗದೆ ರಾಷ್ಟ್ರದ ಏಕತೆಯೂ ಸಮೃದ್ಧವಾಗಲಾರದು. ಈ ಸಮೃದ್ಧಿಯಲ್ಲಿಯೇ ಭಾಷಾರಾಜ್ಯಗಳ ಶ್ರೇಯಸ್ಸು ಹಾಗೂ ಸಫಲತೆ ಇದೆ. ಪ್ರಾಂತೀಯತೆಯ ಹೆಸರಿನಲ್ಲಿ ನಾವು ರಾಷ್ಟ್ರೀಯತೆಯನ್ನು ಸಂಕುಚಿತಗೊಳಿಸಿರಬಾರದು. ಆದೇ ರೀತಿಯಲ್ಲಿ ಭಾಷಾ ರಾಜ್ಯದ ವ್ಯಕ್ತಿತ್ವವನ್ನೊಡೆದು ರಾಷ್ಟ್ರೀಯತೆಯ ಕಲ್ಪನೆಗೆ ಒಂದು ಕೃತ್ರಿಮ ವಿಶಾಲತೆಯನ್ನು ತಂದೊಡ್ಡುವೆನೆಂದು ತಿಳಿಯಬಾರದು. ಈ ದಿಕ್ಕಿನಲ್ಲಿ ಕನ್ನಡಿಗರು ತಾವು ಹೋದಲ್ಲೆಲ್ಲ ತಮ್ಮ ಹಕ್ಕುಗಳನ್ನು ಸಹ ಇದುವರೆಗೆ ಚೆನ್ನಾಗಿ ಸಾಧಿಸಿಲ್ಲ. ಕರ್ನಾಟಕದಲ್ಲಿ ಬಂದು ನೆಲೆಸಿದ ಕೆಲವು ಅಲ್ಪಸಂಖ್ಯಾತರು ಇದಕ್ಕೆ ತೀರ ವಿರುದ್ಧವಾಗಿ ಇನ್ನೂ ತಾವು ತಮ್ಮ ಭಾಷಾರಾಜ್ಯದಲ್ಲಿಯೇ ಇರುವಂತೆ ವ್ಯವಹರಿಸುತ್ತಾರೆ. ಇದು ಉಭಯತ್ರರಿಗೂ ಕ್ಷೇಮಕರವಲ್ಲ.

ರಾಜ್ಯದಲ್ಲಿ ನೆಲೆಸಿದ ಎಲ್ಲ ಜನಕ್ಕೆ ರಾಜ್ಯಭಾಷೆಯು ಕಡ್ಡಾಯದ ಭಾಷೆಯಾಗಿ ಪಠ್ಯಕ್ರಮದಲ್ಲಿರುವುದಂ ಯುಕ್ತವೂ, ನ್ಯಾಯವೂ ಆಗಿದೆ. ಆಡಳಿತದ ಭಾಷೆ, ಸಾರ್ವಜನಿಕ ಸೇವಾ ಆಯೋಗದ ಭಾಷೆ, ಉಚ್ಚ ಶಿಕ್ಷಣದ ಮಾಧ್ಯಮ—ಹೀಗೆ ಕರ್ನಾಟಕದಲ್ಲಿ ನಾಳೆಗಿಂತ ಇಂದೇ ಕನ್ನಡವಾಗಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ನೆಲೆಸಿದವರು—ಅವರು ಎಲ್ಲಿಂದಲೇ ಬಂದಿರಲಿ—ಕನ್ನಡಿಗರಾಗುವುದು ಅವರ ಹಿತದೃಷ್ಟಿಯಿಂದಲೇ ಅವಶ್ಯವಾಗಿದೆ. ಆಸ್ತಿಪಾಸ್ತಿ, ಮನೆಮಠ, ಉದ್ಯೋಗ, ನೌಕರಿ—ಇವೆಲ್ಲ ವಿಷಯದಲ್ಲೂ ಅವರು ಕನ್ನಡವನ್ನು ಬಳಸಬೇಕಾಗುತ್ತದೆ. ಹತ್ತುವರ್ಷಗಳಿಗಿಂತ ಹೆಚ್ಚು ಕಾಲ ರಾಜ್ಯದಲ್ಲಿ ನೆಲೆಸಿದವರು ಕನ್ನಡಿಗರೆಂದೇ ಅರ್ಥ. ಅವರ ಭವಿಷ್ಯವೂ ಕನ್ನಡಿಗರ ಭವಿಷ್ಯವೇ ಆಗುತ್ತದೆ. ಇಂಥವರ ಮಕ್ಕಳುಮರಿ ಕನ್ನಡವನ್ನು ಕಡ್ಡಾಯವಾಗಿ ಪ್ರಾಥಮಿಕ – ಮಾಧ್ಯಮಿಕ ಹಂತಗಳಲ್ಲಿ ಕಲಿಯುವುದರಿಂದ ಮಾತ್ರ ಅವರ ಸಮಸ್ಯೆಗೆ ಯೋಗ್ಯಪರಿಹಾರ ದೊರೆಯುತ್ತದೆ. ಕೇಂದ್ರ ಸರ್ಕಾರ ದೇಶದ ಬೇರೆಬೇರೆ ಭಾಗಗಳಲ್ಲಿ ತನ್ನ ನೌಕರರಿಗಾಗಿ ಕೇಂದ್ರೀಯ ವಿದ್ಯಾಶಾಲೆಗಳನ್ನು ತೆರೆದಿದೆ. ಇಂಥವರಲ್ಲಿ ಅಲ್ಲಲ್ಲಿ ಒಬ್ಬರಿಬ್ಬರು ಆ ಶಾಲೆಗಳಲ್ಲಿ ಪ್ರವೇಶಮೊರೆಯದೆ ಉಳಿದರೆ ಅವರು ತಕ್ಕ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಕರ್ನಾಟಕದಲ್ಲಿಯೇ ನೆಲೆಸಿದ ವರ್ತಕರೂ, ಉದ್ಯೋಗಸ್ಥರೂ ಕನ್ನಡಿಗರಾಗಿಯೇ ಮುಂದುವರಿಯುತ್ತಾರೆ. ಉಳಿದವರು—ಅಂದರೆ ತಾತ್ಕಾಲಿಕವಾಗಿ ಬಂದವರು—ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಒಟ್ಟಾರೆ ಈ ವಿಷಯದಲ್ಲಿ ನಾವು ಅನುಸರಿಸಬೇಕಾದ ಧೋರಣವಿಷ್ಟು : ನಡು ನಡುವೆ ಎತ್ತರದ ಗೋಡೆಗಳೆದ್ದು ದೇಶದ ಏಕತೆಗೆ ಭಂಗ ತಂದಿರಬಾರದು, ಅವರ ಜೊತೆಗೆ ಒಂದಿಲ್ಲೊಂದು ನೆವದಿಂದ ಒಂದು ರಾಜ್ಯದಭದ್ರತೆಗೆ ಘಾತುಕವಾಗುವ ಧೋರಣೆಗಳಾಗಲಿ, ವರ್ಗಗಳಾಗಲಿ ತಲೆಯೆತ್ತಿರಬಾರದು.

ಕನ್ನಡವು ಆಡಳಿತದ ಭಾಷೆಯಾಗಿದೆ. ಅದು ಏಕೈಕ ರಾಜ್ಯಭಾಷೆಯಾಗುವ ದಿನ ಕರ್ನಾಟಕದಲ್ಲಿ ಸಮೀಪಿಸಿದೆ. ಸಾರ್ವಜನಿಕ ಸೇವಾ ಆಯೋಗ (ಪಬ್ಲಿಕ್ ಸರ್ವಿಸ್ ಕಮಿಷನ್)ದಲ್ಲಿ ಇದರ ಅರಿವು ಇನ್ನೂ ಮೂಡಿ ಅದರ ಪಾಲನೆಯಾಗಬೇಕಾಗಿದೆ. ವಿಶ್ವ ವಿದ್ಯಾನಿಲಯಗಳಲ್ಲಿ ಕನ್ನಡ ಮಾಧ್ಯಮದ ಅವಶ್ಯಕತೆಯೂ ಪ್ರಯೋಜನವೂ ವಿದ್ಯಾರ್ಥಿಗಳಿಗೂ ಅವರ ಪಾಲಕರಿಗೂ ಮನದಟ್ಟಾಗಬೇಕಾಗಿದೆ. ಇಂಗ್ಲಿಷಿನ ಭಾಷಾನೈಪುಣ್ಯವನ್ನು ಅದನ್ನೊಂದು ಭಾಷೆಯೆಂದಭ್ಯಸಿಸಿ ಪಡೆಯಬೇಕು. ಬರೀ ಮಾಧ್ಯಮವಾಗಿ ಉಳಿಸಿಕೊಂಡರೆ ಶಿಕ್ಷಣಕ್ಕೆ ಧಕ್ಕೆ ಬಂದು ಇಂಗ್ಲಿಷಿನ ಜ್ಞಾನ ಸೊನ್ನೆಯಾಗುತ್ತದೆಂಬ ದಾರುಣ ಸತ್ಯವನ್ನು ಅವರು ಕಂಡುಕೊಳ್ಳಬೇಕಾಗಿದೆ. ಮಾಧ್ಯಮಿಕ ಶಿಕ್ಷಣದ ಹಂತವಲ್ಲಿ ಮಾತ್ರ ಕನ್ನಡ ಮಾಧ್ಯಮವಾಗಿದೆ.

ರಾಜ್ಯ ಭಾಷೆಗೆ ರಾಜ್ಯದಲ್ಲಿ ಪ್ರಭುತ್ವವನ್ನು ಕಲ್ಪಿಸಿ ಒಂದು ರಾಜ್ಯದ ವ್ಯಕ್ತಿತ್ವವನ್ನು ಪೋಷಿಸಿದಂತೆ ದೇಶಕ್ಕೆ ಹಿಂದಿಯನ್ನು ಅಂತರ್ ರಾಜ್ಯ ಸಂಪರ್ಕಭಾಷೆಯನ್ನಾಗಿ ಮಾಡಿ ಮತ್ತು ಇಂಗ್ಲಿಷನ್ನು ಸಹ ಸಂಪರ್ಕಭಾಷೆಯನ್ನಾಗಿ ಮಾಡಿ ಕೇಂದ್ರ ಸರ್ಕಾರವು ದೇಶದ ಏಕಮೇವತೆಯನ್ನು ರಕ್ಷಿಸುವ ಪ್ರಯತ್ನದಲ್ಲಿದೆ.

ಕರ್ನಾಟಕ ರಾಜ್ಯ ನಿರ್ಮಾಣವಾಗಿ ಇಪ್ಪತ್ತನಾಲ್ಕು ವರ್ಷಗಳಾಗಿ ಹೋಗಿವೆ. ಉಳಿದ ಭಾಷಾ ರಾಜ್ಯಗಳು ಪ್ರಗತಿಯ ಪಥದಲ್ಲಿ ಮುಂದುವರಿಯುತ್ತಿದೆ. ಆದರೆ ದುರ್ದೈವದಿಂದ ಕರ್ನಾಟಕವು ಮಾತ್ರ ಇನ್ನೂ ತನ್ನನ್ನೇ ತಾನು ರೂಪಿಸಿಕೊಳ್ಳುವುದಿರಲಿ, ಅರಿತುಕೊಂಡಿಲ್ಲ ಸಹ. ಆ ಸ್ವಯಂನಿಯಂತ್ರಣದ ದಿನಗಳಿಗಾಗಿ ನಾವಿನ್ನೂ ಕಾಯಬೇಕಾಗಿದೆ.

(3) ಅಲ್ಪಸಂಖ್ಯಾತರ ಭಾಷೆಗಳು

ಒಂದು ರಾಜ್ಯದಲ್ಲಿಯ ಅಲ್ಪಸಂಖ್ಯಾತರ ಮಾತೃಭಾಷೆಗಳೂ ಬೆಳೆಯುವ ಭಾಷೆಗಳಾಗಿವೆ. ಅವು ದೇಶದ ಒಂದಿಲ್ಲೊಂದು ರಾಜ್ಯದಲ್ಲಿ ವಾಡಿಕೆಯಾಗಿ ಆಡಳಿತದ ಭಾಷೆ ಹಾಗೂ ಶಿಕ್ಷಣದ ಮಾಧ್ಯಮಗಳಾಗಿವೆ. ಬಹುತೇಕ ಎಲ್ಲಾ ಆರ್ವಾಚೀನ ಭಾಷೆಗಳಲ್ಲಿ ಪ್ರಾಚೀನ ಹಾಗೂ ಆರ್ವಾಚೀನ ನಾಗರೀಕತೆಯ ಉಜ್ವಲ ಸಾಹಿತ್ಯವಿದೆ. ಚಿಕ್ಕಮಕ್ಕಳ ಶಿಕ್ಷಣವು ಮಾತೃಭಾಷೆಯಲ್ಲಿ ಪ್ರಾರಂಭವಾಗಬೇಕೆಂಬುದು ಇಂದಿಗೆ ಸರ್ವಮಾನ್ಯ ತತ್ವವಾಗಿದೆ. ಹುಟ್ಟಿದಾರಭ್ಯ ಆ ಭಾಷೆಯ ವಾತಾವರಣದಲ್ಲಿ ಮಗು ಬೆಳೆಯುತ್ತದೆ. ಆ ಮಗುವಿನ ಜ್ಞಾನ ಬೆಳೆಯಬೇಕಾದರೆ ಮಾತೃ ಭಾಷೆಯ ದ್ವಾರಾ ಅದು ಸಹಜವಾಗಿ ಬೆಳೆಯಬಲ್ಲದು. ಮೇಲಿನ ವರ್ಗದ ಮಕ್ಕಳು ಇಂಗ್ಲಿಷು ಮಾಧ್ಯಮವಿದ್ದ ಶಾಲೆಗಳಿಗೆ ಹೋಗುವುದನ್ನು ನಾವು ನೋಡುತ್ತೇವೆ. ಇಂಗ್ಲಿಷ್ ಮಗುವಿನ ಮಾತೃಭಾಷೆಯಾಗಿದ್ದರೆ ಇದು ಸಹಜ; ಇಲ್ಲದಿದ್ದರೆ ಶಿಕ್ಷಣವೇ ಕೃತಕವಾಗಿ ಆ ಮಗುವಿನ ಸಂಸ್ಕೃತಿಯಲ್ಲಿ ಇರಬೇಕಾದ ಕೆಲವಂಶಗಳು ಇಲ್ಲವಾಗುತ್ತವೆ. ರಾಜ್ಯದಿಂದ ರಾಜ್ಯಕ್ಕೆ ವರ್ಗವಾಗುವ ಇಲ್ಲವೆ ಸ್ಥಳಾಂತರಿಸುವ ಅಧಿಕಾರಿಗಳಿಗೆ ಇಲ್ಲವೆ ವರ್ತಕರಿಗೆ ಇದು ಅನಿವಾರ್ಯವಾಗಬಹುದು. ಆದರೆ ರಾಜ್ಯಭಾಷೆಯು ಮಾಧ್ಯಮವಿದ್ದ ಶಾಲೆಗಳಲ್ಲಿಯಂ ಶಿಕ್ಷಣ ಕ್ರಮವನ್ನೇ ಉಚ್ಚಮಟ್ಟಕ್ಕೇರಿಸುವುದು ರಾಜ್ಯ ನಿವಾಸಿಗಳ ಹಿತದ ದೃಷ್ಟಿಯಿಂದ ಈ ಸಮಸ್ಯೆಗೆ ಪರಿಹಾರವಾಗಿದೆ. ಆಗ ರಾಜ್ಯದ ಮಕ್ಕಳಿಗೆ ನೈಜಶಿಕ್ಷಣ ದೊರೆಯುತ್ತದೆ.

ಸಾಮಾನ್ಯವಾಗಿ ಸಮ್ಮ ದೇಶದ ಪ್ರತಿಯೊಂದು ರಾಜ್ಯದಲ್ಲಿ ಅಲ್ಪಸಂಖ್ಯಾತ ಜನಗಳಿಗಾಗಿ ಕೆಲವೊಂದು ನಿಯಮಗಳನ್ನು ಅನುಸರಿಸಿ ಪ್ರಾಥಮಿಕ ಹಂತದಲ್ಲಿ ಒಂದರಿಂದ ನಾಲ್ಕನೆ

ತರಗತಿಗಳಲ್ಲಿ ಪ್ರತಿ ತರಗತಿಯಲ್ಲೂ 10 ವಿದ್ಯಾರ್ಥಿಗಳಿದ್ದು ನಾಲ್ಕೂ ತರಗತಿಗಳಿಂದ ಒಟ್ಟು 30 ವಿದ್ಯಾರ್ಥಿಗಳಿದ್ದರೆ ಆಯಾ ಜನಗಳ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಒದಗಿಸುವ ಶಾಲೆಗಳಿವೆ. ಆದರೆ ರಾಷ್ಟ್ರದಲ್ಲಿ ಪ್ರಚಲಿತವಿರುವ ಯೋಜನೆಯ ಪ್ರಕಾರ ರಾಜ್ಯ ಭಾಷೆಯನ್ನು ಇಂತಹ ಶಾಲೆಗಳಲ್ಲಿ ದ್ವಿತೀಯ ಭಾಷೆಯಾಗಿ ಕಲಿಸುವ ವ್ಯವಸ್ಥೆ ಎಲ್ಲ ಕಡೆಗೆ ಜಾರಿಯಲ್ಲಿಲ್ಲವೆಂಬುದು ವಿಷಾದಕರ. ಉದಾಹರಣೆಗೆ ಕರ್ನಾಟಕದಲ್ಲಿರುವ ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಹಲವಾರೆಡೆಗೆ ಕನ್ನಡವನ್ನು ಕಲಿಸುವ ವ್ಯವಸ್ಥೆಯೇ ಇಲ್ಲವೆಂದು ಒರ್ವ ಉರ್ದು ಶಾಲಾ ಸಂಸ್ಥೆಯ ಸಂಚಾಲಕರು ಸಾಕ್ಷಿ ಇತ್ತರು. ಇದು ವಿಷಾದಕರ ಈ ಪರಿಸ್ಥಿತಿಯನ್ನು ಬೇಗನೆ ಹೋಗಲಾಡಿಸುವುದು ಅವಶ್ಯವಾಗಿದೆ.

ಅಲ್ಪಸಂಖ್ಯಾತ ಜನಗಳ ಭಾಷೆಯನ್ನಾಡುವ ವಂಗು ತನ್ನ ಪ್ರಾಥಮಿಕ ಹಾಗೂ ಉಚ್ಚ ಶಿಕ್ಷಣವನ್ನು ತಾನಿದ್ದ ರಾಜ್ಯದಲ್ಲಿಯೇ ಪಡೆಯಬೇಕಾಗುತ್ತದೆ. ತಾನು ಹೋದಲ್ಲೆಲ್ಲ ಕಿವಿಗೆ ಬೀಳುತ್ತಿರುವ ಪ್ರಾದೇಶಿಕ ಭಾಷೆಯನ್ನು ಆ ಮಗುವಿನ ದ್ವಿತೀಯ ಭಾಷೆಯಾಗಿ ಈ ಹಂತದಲ್ಲಿ ಅಭ್ಯಸಿಸಿದರೆ ಮುಂದೆ ರಾಜ್ಯದ ಪ್ರಾದೇಶಿಕ ಭಾಷೆಯಲ್ಲಿ ತನ್ನ ಮಾಧ್ಯಮಿಕ ಶಿಕ್ಷಣವನ್ನು ಮುಂದುವರಿಸಬಹುದು. ಪ್ರಾದೇಶಿಕ ಭಾಷೆಯ ಈ ವಿಶೇಷ ಜ್ಞಾನ ಅತ್ಯಗತ್ಯವಾಗಿದೆ ಏಕೆಂದರೆ ಅದು ರಾಜ್ಯಭಾಷೆ, ಆಡಳಿತದ ಭಾಷೆ ಹಾಗೂ ರಾಜ್ಯದಲ್ಲಿಯ ವ್ಯವಹಾರದ ಭಾಷೆಯಾಗಿದೆ. ಪ್ರಾಥಮಿಕ ಹಂತದಲ್ಲಿ ಅದನ್ನು ದ್ವಿತೀಯ ಭಾಷೆಯಾಗಿ ಕಲಿತರೆ ಮುಂದೆ ಅದನ್ನು ಶಿಕ್ಷಣ ಮಾಧ್ಯಮವಾಗಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಅಲ್ಪಸಂಖ್ಯಾತರ ಮಾತೃಭಾಷೆಗಳನ್ನೂ ಹಾಗೂ ಮಾಧ್ಯಮಿಕ ಹಂತದ ಶಿಕ್ಷಣ ಮಾಧ್ಯಮವನ್ನೂ ಕುರಿತು ಸರ್ಕಾರವು ಒಂದು ನಿರ್ದಿಷ್ಟ ಧೋರಣೆಯನ್ನು ಜಾಹೀರುಪಡಿಸುವುದು ಅಗತ್ಯವಾಗಿದೆ. ಈ ವಿಷಯದಲ್ಲಿ ಕೆಳಗಣ ಅಭಿಪ್ರಾಯಗಳನ್ನು ಸಮಿತಿಯು ವ್ಯಕ್ತಪಡಿಸಬಯಸುತ್ತದೆ.

(ಅ) ಅಲ್ಪಸಂಖ್ಯಾತರ ಮಾತೃಭಾಷೆಗಳು ಮಾಧ್ಯಮವಾಗಿದ್ದ ಪ್ರಾಥಮಿಕ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಯನ್ನು ದ್ವಿತೀಯ ಭಾಷೆಯಾಗಿ (3 ರಿಂದ 7 ನೆಯ ವರ್ಗಗಳಲ್ಲಿ) ಕಲಿಸುವುದು ಸರ್ವಮಾನ್ಯ ತತ್ವವಿದೆ. ಇದನ್ನು ಇಂತಹ ಎಲ್ಲ ಶಾಲೆಗಳಲ್ಲಿಯೂ ಕೂಡಲೆ ಜಾರಿಯಲ್ಲಿ ತರಬೇಕು.

(ಆ) ಕರ್ನಾಟಕ ರಾಜ್ಯದ ಧೋರಣೆ ಈ ವಿಷಯದಲ್ಲಿ ತುಂಬ ಉದಾರವಾಗಿದೆ. ಔದಾರ್ಯವು ಒಳ್ಳೆಯ ಗುಣವೇ. ಆದೆ ಈ ಗುಣದಲ್ಲಿ ಅನೇಕ ಸಲ ಅಜ್ಞಾನವು ಬೆರೆತಿರುತ್ತದೆ. ಒಪ್ಪೊಮ್ಮೆ ನೆರೆಹೊರೆಯ ರಾಜ್ಯಗಳಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳಿಗೆ ಗ್ರಾಂಟ್ ಅಂತೂ ಹೋಗಲಿ, ಪ್ರತ್ಯಕ್ಷ ಪರಿಪಾಠದಲ್ಲಿ ಮನ್ನಣೆ ಸಹ ದೊರೆತಿಲ್ಲವೆಂದೂ ಅಲ್ಲಿನ ಅಲ್ಪ ಸಂಖ್ಯಾತರಾದ ಕನ್ನಡಿಗರು ಪತ್ರಿಕೆಗಳಲ್ಲಿ ಬರೆಯುತ್ತಿರುತ್ತಾರೆ. ಆದರೆ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರಿಗೆ ಮಾಧ್ಯಮಿಕ ಹಂತದಲ್ಲಿಯೂ ಅವರ ಭಾಷೆ ಮಾಧ್ಯಮವಾದ ಮಾಧ್ಯಮಿಕ ಶಾಲೆಗಳನ್ನು ತನ್ನ ವೆಚ್ಚದಿಂದ ಕೆಲವೆಡೆ ನಡೆಸುತ್ತಿರುವುದೂ ಉಂಟು. ಈ ತರಹದ ಔದಾರ್ಯ ಅನಿಷ್ಟವೆಂದು ಬೇರೆ ಹೇಳಬೇಕಾಗಿಲ್ಲ.

(ಇ) ಕನ್ನಡ ಜನತೆಯ ಮಕ್ಕಳಿಗೇ ಎಲ್ಲೆಡೆ ಇನ್ನೂ ಪ್ರಾಥಮಿಕ ಶಾಲೆಗಳನ್ನು ರಾಜ್ಯದಲ್ಲಿ ಸ್ಥಾಪಿಸದೆ ಇರುವಾಗ ಅಲ್ಪಸಂಖ್ಯಾತರಿಗಾಗಿ ಅವರ ಭಾಷಾ ಮಾಧ್ಯಮದ ಹೈಸ್ಕೂಲುಗಳನ್ನು ಸ್ಥಾಪಿಸುವುದು ಎಂತಹ ಔದಾರ್ಯ. ಆಧುನಿಕ ಭಾರತೀಯ ಭಾಷೆಯೊಂದನ್ನು ಮಾಧ್ಯಮವೆಂದು ಬಳಸಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅಲ್ಪ

ಸಂಖ್ಯಾತರ ವರ್ಗವೊಂದು ಮುಂದು ಬಂದರೆ ಅವರ ಭಾಷೆ ರಾಜ್ಯ ಭಾಷೆಯಾದ ರಾಜ್ಯದಲ್ಲಿ ಕನ್ನಡಕ್ಕಾಗಿ ಈ ಅವಕಾಶವನ್ನು ಆ ಸರ್ಕಾರ ಕಲ್ಪಿಸಿಕೊಟ್ಟಿದ್ದರೆ ನಾವೂ ಅವಶ್ಯವಾಗಿ ಕರ್ನಾಟಕದಲ್ಲಿ ಹಾಗೆ ಮಾಡಬಹುದು. ಸ್ಥಿತಿ ಇದಕ್ಕೆ ವಿಪರೀತವಾಗಿದ್ದರೆ ನಾವೂ ಬಿಗಿಯಾಗಿ ಇರಬೇಕು. ಕನ್ನಡ ಜನತೆಯ ಶೈಕ್ಷಣಿಕ ಕೊರತೆಗಳು ದೂರಾಗುವವರೆಗೆ ಕರ್ನಾಟಕ ಸರ್ಕಾರ ಈ ಸೌಲಭ್ಯವನ್ನು ಕೊಡಲೇ ಬಾರದು.

ಆದರೆ ಉಳಿದ ರಾಜ್ಯ ಭಾಷೆಗಳೂ ಕನ್ನಡದಂತೆ ವಿಕಸನ ಪೂರ್ಣ ಭಾಷೆಗಳು. ಕರ್ನಾಟಕದಲ್ಲಿಲ್ಲದಿದ್ದರೂ ತಮ್ಮ ತಮ್ಮ ರಾಜ್ಯಗಳಲ್ಲಿ ಅವು ರಾಜ್ಯ ಭಾಷೆಗಳಾಗಿವೆ. ತಮಿಳು ಹಾಗೂ ಕನ್ನಡದಷ್ಟು ಪ್ರಾಚೀನವಲ್ಲದಿದ್ದರೂ ಈ ಉಳಿದ ಭಾಷೆಗಳಲ್ಲಿಯಂ ಸಾಹಿತ್ಯೇತಿಹಾಸ ಸಾವಿರ ವರ್ಷಗಳ ಅಚೆಗೀಚೆಗೆ ಹೋಗುತ್ತದೆ. ವಿವಿಧ ಕಾರಣಗಳ ಮೂಲಕ ಬೇರ ಬೇರೆ ರಾಜ್ಯಗಳಿಗೆ ಉದ್ಯೋಗಕ್ಕಾಗಿ ಹಲವು ಕನ್ನಡಿಗರು ಹೋಗುವ ಪ್ರಸಂಗ ಉಂಟಾಗಬಹುದು. ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಭಾಷೆಯಾದ ಭಾಷೆಯೇ ಅಲ್ಲಿ ರಾಜ್ಯ ಭಾಷೆಯಾಗಿರಬಹುದು. ಅದನ್ನು ವಿವರವಾಗಿ ಅಭ್ಯಸಿಸುವುದರಿಂದ ಆದು ಮಾತೃ ಭಾಷೆಯಾಗಿದ್ದ ಅಲ್ಪಸಂಖ್ಯಾತರಿಗೂ ಹಲವಾರು ಕನ್ನಡಿಗರಿಗೂ ಅನುಕೂಲವಾಗ ಬಹುದು. ಹೀಗಾಗಿ ನಿರ್ದಿಷ್ಟ ಸಂಖ್ಯೆಯಲ್ಲಿ ಮಕ್ಕಳು ಕಲಿಯಬೇಕೆನಿಸಿದ ಆಧುನಿಕ ಭಾರತೀಯ ಭಾಷೆಯ ಅಭ್ಯಾಸಕ್ಕಾಗಿ ನಮ್ಮ ಹೈಸ್ಕೂಲುಗಳಲ್ಲಿ ವ್ಯವಸ್ಥೆ ಇರಬೇಕು. 30 ವಿದ್ಯಾರ್ಥಿಗಳು ಒಂದು ಹೈಸ್ಕೂಲಿನಲ್ಲಿ ತಮ್ಮ ಮಾತೃ ಭಾಷೆಯನ್ನು ಒಂದು ವಿಷಯವಾಗಿ ಕಲಿಯುವ ಇಚ್ಛೆ ವ್ಯಕ್ತ ಪಡಿಸಿದರೆ ಅದು ಅವರಿಗೆ ಈಗಿನಂತೆ ಸಾಧ್ಯವಾಗಬೇಕು. ಈ ಸೌಲಭ್ಯವನ್ನು ಒದಗಿಸುವುದಕ್ಕೆ ಮುಂಚಿತವಾಗಿ ಆ ಭಾಷೆಯಂ ರಾಜ್ಯದಲ್ಲಿ ಕನ್ನಡ ವಿದ್ಯಾರ್ಥಿಗಳಿಗೂ ಅಂಥ ಸೌಲಭ್ಯ ದೊರೆತಿರುವುದೇ ಎಂದು ನಾವು ತಿಳಿದುಕೊಂಡಿರಬೇಕು.

ಸಾಹಿತ್ಯಗಳ ತುಲನಾತ್ಮಕ ಅಭ್ಯಾಸ ಮಾಡಬೇಕೆಂದವರಿಗೆ ಮಾಧ್ಯಮಿಕ ಹಂತದಿಂದ ಆಯಾ ಸಾಹಿತ್ಯಗಳ ಹಾಗೂ ಭಾಷೆಗಳ ಅಭ್ಯಾಸವನ್ನು ಪ್ರಾರಂಭಿಸುವುದು ಒಳ್ಳೆಯದು. ಆಗ ಉಚ್ಚ ಶಿಕ್ಷಣದಲ್ಲಿ ಇದು ಕಠಿಣವಾಗಿ ಪರಿಣಮಿಸುವುದಿಲ್ಲ. ತೆಲುಗಂ, ತಮಿಳು, ಮರಾಠಿ, ಮಲಯಾಳಂ, ಉರ್ದು ಮೊದಲಾದ ಭಾಷೆಗಳನ್ನು ಈ ದೃಷ್ಟಿಯಿಂದ ಕಾಣುವುದು ಅವಶ್ಯವಿದೆ. ಉರ್ದುವಿನಲ್ಲಿ ಹಾಗೆ ನೋಡಿದರೆ ಕಲ್ಬುರ್ಗಿಯೇ ಸಾಹಿತ್ಯದ ಉಗಮ ಸ್ಥಾನ. ಪ್ರಾರಂಭದ ಉರ್ದು ಸಾಹಿತ್ಯದಲ್ಲಿ (ದಖನಿ ಉರ್ದು) ಕನ್ನಡ ಹಾಗೂ ತೆಲುಗು ಶಬ್ದಗಳೂ ಕನ್ನಡ ಆಂಧ್ರ ರಾಜ್ಯಗಳ ವರ್ಣನೆಗಳೂ ಹೇರಳವಾಗಿವೆ. ಇವೆಲ್ಲ ಇನ್ನೂ ಕನ್ನಡಕ್ಕೆ ಬರಬೇಕಾಗಿದೆ. ಉಳಿದ ಭಾಷೆಗಳನ್ನು ಕುರಿತು ಕೆಲಸ ನಡೆದಿದೆಯಾದರೂ ಮಾಡುವುದು ಬೇಕಾದಷ್ಟಿದೆ. ಈ ಕ್ಷೇತ್ರದಲ್ಲಿ ದುಡಿಯಬಯಸುವವರು ತಮ್ಮ ಆಯ್ಕೆಯ ಭಾಷೆಯನ್ನು ಮಾಧ್ಯಮಿಕ ಹಂತದಿಂದಲೇ ಅಭ್ಯಸಿಸಬೇಕಾಗುವುದು.

ರಾಜ್ಯದ ಗಡಿನಾಡಿನ ಅಂಚಿನಲ್ಲಿದ್ದುಕೊಂಡು ಎರಡು ಭಾಷಾ ರಾಜ್ಯಗಳ ನಡುವೆ ವಾದವಿವಾದಕ್ಕೆ ಆಸ್ಪದ ಕೊಟ್ಟ ಚಿಕ್ಕ ಚಿಕ್ಕ ಪ್ರದೇಶಗಳೂ ಇವೆ. ಇವರ ಬಗ್ಗೆ ಇನ್ನೂ ವಾದವಿವಾದ ನಡೆಯುತ್ತಿದೆ. ಇಲ್ಲಿಯ ಭಾಷಾ ಶಿಕ್ಷಣದ ಬಗ್ಗೆ ಸರ್ಕಾರ ಒಂದಂ ಧೋರಣವನ್ನು ಸ್ವೀಕರಿಸಿ ಅದರಂತೆ ನಡೆದುಕೊಂಡು ಬಂದಿದೆ.

(4) ಅಂತರ್ ರಾಜ್ಯ ಸಂಪರ್ಕ ಭಾಷೆಗಳು

ದೇಶದ ಏಕತೆಯನ್ನೂ ರಾಷ್ಟ್ರಾದ್ಯಂತದ ವ್ಯವಹಾರವನ್ನು ಸುಗಮವಾಗಿಸಲೆಂದೂ ಕೇಂದ್ರ ಸರ್ಕಾರವು ಎರಡು ಭಾಷೆಗಳನ್ನು ಹೆಸರಿಸಿದೆ. ಒಂದು, ಅಧಿಕೃತ ಸಂಪರ್ಕ

ಭಾಷೆಯಾದ ಹಿಂದೀ. ಇನ್ನೊಂದು, ಸಹ ಸಂಪರ್ಕಭಾಷೆಯಾದ ಇಂಗ್ಲಿಷು. ಈ ಸಹ ಸಂಪರ್ಕಭಾಷೆ ಅಂತರ್ ರಾಷ್ಟ್ರೀಯ ಸಂಪರ್ಕಭಾಷೆಯೂ ಆಗಿದೆಯಲ್ಲದೆ ಪ್ರಪಂಚ ಉಚ್ಚ ವಿಜ್ಞಾನದ ಮಾಧ್ಯಮವೂ ಆಗಿದೆ. ಬೇಕಾದರೆ ಇವುಗಳಲ್ಲಿ ಒಂದನ್ನು ವಿದ್ಯಾರ್ಥಿಯು ಅಭ್ಯಸಿಸಬಹುದು. ಇವುಗಳಿಗಿಂತ ಇನ್ನೊಂದು ಆಧುನಿಕ ಭಾರತೀಯ, ಇಲ್ಲವೆ ಅರ್ವಾಚೀನ ಪಾಶ್ಚಾತ್ಯ ಭಾಷೆಯ ಅಭ್ಯಾಸ ಅಗತ್ಯವೆನಿಸಿದರೆ ಹಾಗೆ ಮಾಡಬಹುದು.

ಈ ಸಂಪರ್ಕಭಾಷೆಗಳ ಸ್ವರೂಪ ಹಾಗೂ ಪ್ರಯೋಜನವನ್ನು ಸರಿಯಾಗಿ ತಿಳಿದುಕೊಳ್ಳಲು ಇಲ್ಲಿ ಕೆಲವು ಮಾತುಗಳನ್ನು ಹೇಳುವುದು ಅಗತ್ಯವಾಗಬಹುದು. ನಮಗೀಗಿದ್ದ ಕೇಂದ್ರಾಧಿಕೃತ ಭಾಷೆಗಳು ಎರಡು : ಇಂಗ್ಲಿಷು ಹಾಗೂ ಹಿಂದೀ. ದಕ್ಷಿಣ ಭಾರತ ಒಪ್ಪುವ ತನಕ ಈ ಸೂತ್ರ ಮುಂದುವರಿಯಬೇಕೆಂದು ಗೊತ್ತಾಗಿದೆ. ಹಿಂದೀ ಮಾತೃಭಾಷೆಯಾದ ವರನ್ನು ಈ ಸಮಸ್ಯೆ ಎದುರಿಸುವುದಿಲ್ಲ. ಅವರು ಹಿಂದಿಯನ್ನೂ ಹಾಗೂ ಇಂಗ್ಲಿಷನ್ನೂ ಪ್ರಾಥಮಿಕ ಹಂತದಿಂದ ಸಹ ಹಾಗೆ ಮನಸ್ಸು ಮಾಡಿದಲ್ಲಿ ಸ್ವೀಕರಿಸಬಹುದು. ಸಾಮಾನ್ಯವಾಗಿ ದಕ್ಷಿಣ ಭಾರತದ ಒಂದು ಭಾಷೆಯನ್ನು ಭಾರತದ ಏಕ್ಯದ ದೃಷ್ಟಿಯಿಂದ ಅವರು ಕಲಿಯಬೇಕೆಂಬ ನಿರೀಕ್ಷೆ ಇದೆ. ಆದರೆ ಇದು ವ್ಯಾವಹಾರಿಕವಾಗಿ ಫಲಿಸುತ್ತಿಲ್ಲ. ಸಂಸ್ಕೃತ ಇಲ್ಲವೆ ಉರ್ದು ಅವರಿಗೆ ಇನ್ನೊಂದು ಭಾಷೆಯಾಗುತ್ತದೆ. ಏಕೆಂದರೆ ಸಂಸ್ಕೃತವು ಗೌಡೀಯ ಭಾಷೆಗಳ, ಅಂತೆಯೇ ಹಿಂದಿಯ—ತಾಯಿ. ಉರ್ದುವಿನ ಶಬ್ದಕೋಶ ಎಷ್ಟೋಮಟ್ಟಿಗೆ ಹಿಂದಿಗಿಂತ ಬೇರೆಯಾಗಿದೆಯೆಂಬುದು ನಿಜ. ಆದರೆ ಎರಡೂ ಭಾಷೆಗಳ ವ್ಯೆಕಟ್ಟು ವ್ಯಾಕರಣಗಳು ಒಂದಕ್ಕೊಂದು ಸಮೀಪವಾಗಿವೆ.

ನಮ್ಮ ದೇಶದಲ್ಲಿ ಭಾಷಾಶಿಕ್ಷಣದ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದೆ. ಕೇಂದ್ರದ ಸಾಹಿತ್ಯ ಅಕಾಡಮಿಯು ಭಾರತದಲ್ಲಿ 22 ಭಾಷೆಗಳಿಗೆ ಸಾಹಿತ್ಯಸಂಪನ್ನವೆಂದು ಮನ್ನಣೆ ಇತ್ತಿದೆ. ಒಟ್ಟಾರೆ ಭಾರತದಲ್ಲಿ ಭಾಷೆ, ಉಪಭಾಷೆ—ಬರಿ ಬಳಕೆ ಮಾತಿನ ಭಾಷೆಗಳು ಸೇರಿ ಸುಮಾರು 180 ಇವೆಯೆಂದು ತಜ್ಞರು ಹೇಳುತ್ತಾರೆ. ಇಂಥ ಭಾಷಾ ವೈವಿಧ್ಯವಿರುವಾಗ ಈ ದೇಶದಲ್ಲಿ ಸಾಧ್ಯವಿದ್ದಷ್ಟು ಭಾಷೆಗಳನ್ನು ಪರಿಸ್ಥಿತಿ ಸಂದರ್ಭ ಒಲವುಗಳ ಪ್ರಕಾರ ತಿಳಿದುಕೊಳ್ಳುವುದು ಸ್ಪೃಹಣೀಯವೇ ಸರಿ.

ಆದರೆ ಎರಡು ಅಧಿಕೃತ ಅಂತರ ರಾಜ್ಯ ಸಂಪರ್ಕಭಾಷೆಗಳು ಇರುವವರೆಗಂತೂ ಅವುಗಳಲ್ಲಿ ಒಂದನ್ನು ಆಯ್ದುಕೊಂಡು ಅಭ್ಯಸಿಸುವ ಹಕ್ಕೂ ಇದೆ. ಹೀಗಾಗಿ ಕನ್ನಡವನ್ನುಳಿದು ಇನ್ನೊಂದು ಭಾಷೆಯನ್ನು ವ್ಯಾಸಂಗಕ್ಕೆ ಆಯ್ದುಕೊಳ್ಳುವಾಗ ವಿದ್ಯಾರ್ಜನೆಯ ಪ್ರಯೋಜನದ ಹಾಗೂ ವ್ಯಕ್ತಿ ವ್ಯಕ್ತಿಯ ಅಭಿರುಚಿ—ಅವಶ್ಯಕತೆ—ಪರಿಸ್ಥಿತಿಗಳ ದೃಷ್ಟಿಯಿಂದ ನಾವು ಪರಿಶೀಲಿಸಬೇಕಾಗುತ್ತದೆ. ಒರ್ವ ವಿದ್ಯಾರ್ಥಿಗೆ ಭಾರತದ ಉತ್ತರ ಭಾಗದಲ್ಲಿಯೇ ಉದ್ಯೋಗವನ್ನು ಅರಸುವ ಸಂದರ್ಭ ಬಂದರೆ ಪಠ್ಯಭಾಷೆಯಾಗಿ ಆತ ಹಿಂದೀಯನು ಆಯು ಕೊಳ್ಳಬೇಕಾಗಬಹುದು. ಅಂಥದೇ ಕಾರಣಕ್ಕಾಗಿ ಇನ್ನೊಬ್ಬ ವಿದ್ಯಾರ್ಥಿಯು ತೆಲುಗು, ತಮಿಳು, ಮಲೆಯಾಳಂ, ಮರಾಠಿ ಇಲ್ಲವೆ ಗುಜರಾತಿ ಕಲಿಯಬೇಕಾಗಬಹುದು. ಈ ಭಾಷೆಗಳಲ್ಲಿ ಒಂದನ್ನು ಸಾಹಿತ್ಯಕ ಇಲ್ಲವೆ ಸಾಂಸ್ಕೃತಿಕ ಕಾರಣಗಳಿಗಾಗಿಯೂ ವಿದ್ಯಾರ್ಥಿಗಳು ಕಲಿಯಬಯಸಬಹುದು.

ಬರೀ ಕೇಂದ್ರದ ಒಂದು ಅಧಿಕೃತಭಾಷೆಯಾಗಿದೆಯೆಂದು ಹಿಂದೀಗೆ ಮಹತ್ವ ಬಂದಿಲ್ಲ. ಅದರ ಮಹತ್ವ ದಿನದಿನಕ್ಕೆ ಬೆಳೆಯುತ್ತಲಿದೆ. ಅದು ಅಧಿಕೃತ ಭಾಷೆಯಾದ ದಿನದಿಂದ

ಕೇಂದ್ರ ಸರ್ಕಾರ ಕೋಟ್ಯಾವಧಿ ರೂಪಾಯಿಗಳನ್ನು ಅದರ ಬೆಳವಣಿಗೆಗಾಗಿ ಖರ್ಚು ಮಾಡುತ್ತಾ ಬಂದಿದೆ. ಒಂದು ವಿಶೇಷ ಶಾಖೆಯೇ ಕೇಂದ್ರದ ಕಚೇರಿಯಲ್ಲಿ ಏರ್ಪಟ್ಟು ಕೃತ್ರಿಮವೇ ಆಗಲಿ, ಹಿಂದೀಯಲ್ಲಿಯ ವೈಜ್ಞಾನಿಕ ಶಬ್ದಕೋಶವು ವಿವಿಧ ಆಧುನಿಕತಮ ವಿಜ್ಞಾನಗಳನ್ನು ಒಳಗೊಂಡಿದೆ. ಆಗ್ರಾದಲ್ಲಿ ಒಂದು ಕೇಂದ್ರೀಯ ಹಿಂದೀ ಸಂಸ್ಥೆ ಈ ಎಲ್ಲ ಸಂಬಂಧಿತ ವಿಷಯಗಳಿಗಾಗಿ ಸ್ಥಾಪಿತವಾಗಿದೆ. ದೇಶದ ಅನೇಕಾನೇಕ ವಿಶ್ವವಿದ್ಯಾನಿಲಯಂ ಗಳಲ್ಲಿ ಹಿಂದೀ ಇಲಾಖೆ ಇದೆ. ಪಿ. ಎಚ್. ಡಿ. (ಸ್ನಾತಕೋತ್ತರ) ಸಂಶೋಧನೆ ನಡೆಯುಂ ತ್ತಿದೆ. ಜ್ಞಾನಪೀಠ ಮೊದಲಾದ ಸಂಸ್ಥೆಗಳ ಪ್ರಕಾಶನಗಳು ಸಕಲ ಭಾರತೀಯ ಸಾಹಿತ್ಯ ಗಳನ್ನು ಹಿಂದೀಯಲ್ಲಿ ದೊರೆಯುವಂತೆ ಮಾಡಿವೆ. ಹೀಗೆ ಸಾಹಿತ್ಯಕವಾಗಿಯೂ, ವೈಜ್ಞಾನಿಕ ವಾಗಿಯೂ ಹಿಂದೀಗೆ ಉಳಿದ ಭಾಷೆಗಳಿಗಿಂತ ಉಜ್ವಲತರ ಭವಿಷ್ಯವಿದೆ. ಅದನ್ನು ಮಾತನಾಡುವವರ ಸಂಖ್ಯೆಯೂ ಬಹಳ ಹೆಚ್ಚಾಗಿದೆ. ಅಧಿಕೃತವೆಂಬ ಗೌರವವೂ ಅದಕ್ಕೆ ಸಲ್ಲುತ್ತದೆ. ಹೀಗೆ ವಿದ್ಯಾರ್ಥಿಗಳಿಂದ ಆಯ್ಕೆಯಲ್ಲಿ ಹಿಂದೀಗೆ ಮಹತ್ವದ ಸ್ಥಾನ ಪ್ರಾಪ್ತ ವಾಗಿದೆ.

(5) ಇಂಗ್ಲಿಷಿನ ಸ್ವರೂಪ—ಸಾಧ್ಯತೆಗಳು.

ಪೂರ್ವದ ಯಾವ ಭಾಷೆಯೂ ಇನ್ನೂ ಇಂಗ್ಲಿಷಿನಂತೆ ಆಧುನಿಕ ಜ್ಞಾನಭಂಡಾರದ ಸಕಲ ಸಂಪತ್ತಿಗೆ ಬೀಗದ ಕೈ ಆಗಿಲ್ಲ. ಜಪಾನೀ ಭಾಷೆ ಮಾತ್ರ ಆ ಸ್ಥಾನಮಾನವನ್ನು ಸವಿೂಪಿಸುತ್ತಿರಬಹುದು. ಇಂಗ್ಲಿಷ್‌ನಿಂದ ಭಾಷಾಂತರವಾಗಿ ನಮ್ಮ ಭಾಷೆಗಳಲ್ಲಿ ಹಲವಾರು ಆಧುನಿಕ ಜ್ಞಾನಕ್ಷೇತ್ರಗಳು ಬೆಳಕು ಕಂಡಿವೆ. ಕ್ರಮೇಣ 'ಕೊಡು-ಕೊಳ್ಳುವ' ವ್ಯವಹಾರ ಹೆಚ್ಚುತ್ತಾ ಹೋಗುವುದು. ಒಂದು ದಿನ ನಮ್ಮ ದೇಶದ ಕ್ಷಿಪಣಿಗಳಲ್ಲಿಯೇ ನಾವು ಚಂದ್ರಲೋಕಕ್ಕೆ ಯಾತ್ರೆಗೆಯ್ಯಬಹುದು. ವಿಜ್ಞಾನವು ಇನ್ನೂ ಗೂಢವೆಂದು ತಿಳಿದ ಲೋಕಗಳ ರಹಸ್ಯವನ್ನು ನಮ್ಮ ವಿಜ್ಞಾನಿಗಳು ನಮ್ಮ ಭಾಷೆಗಳಲ್ಲಿಯೇ ಅಭಿವ್ಯಕ್ತಿಸಬಹುದು. ಆಗ ಜಗತ್ತಿನ ಉಳಿದ ಭಾಷೆಗಳಿಗೆ ಈ ವಿಷಯಂ ನಮ್ಮ ಭಾಷೆಗಳಿಂದಲೇ ತರ್ಜುಮೆಯಾಗಿ ಹೋಗಬೇಕಾಗಬಹುದು. ಉಳಿದ ಜ್ಞಾನಕ್ಷೇತ್ರಗಳಿಗೂ ಈ ಮಾತು ಅನ್ವಯಿಸುತ್ತದೆ. ಇದು ಸಂಭವಿಸಿದಾಗ ನಮ್ಮ ಭಾಷೆಗಳು ಪ್ರೌಢವಾಗಂತ್ತವೆ. ಅವೇ ಭಾಷೆಗಳಾಗಂತ್ತವೆ.

ಇಂಗ್ಲಿಷು ಕೇಂದ್ರಾಧಿಕೃತ ಭಾಷೆಯಾಗಿ ಅನಿರ್ದಿಷ್ಟವಾಗಿ ಮುಂದುವರಿಯಬೇಕು. ಅದು ವಿಶ್ವವಿದ್ಯಾನಿಲಯಗಳ ಮಾಧ್ಯಮವಾಗಿ ಮುಂದುವರಿಯಬೇಕೆಂದು ಯಾರೂ ಹೇಳ ಲಾರರು. ನಿಜವಾಗಿ ಈಗಿಂದೀಗ ಇಂಗ್ಲಿಷಿನಿಂದ ರಾಜ್ಯಭಾಷೆಗೆ ಮಾಧ್ಯಮ ಪಲ್ಲಟ ಗೊಳ್ಳುವುದು ಶಿಕ್ಷಣದ ಹಿತದೃಷ್ಟಿಯಿಂದಲೂ ಅತ್ಯಗತ್ಯವಾಗಿದೆ. ಏಕೆಂದರೆ ಇಂಗ್ಲಿಷಿನಲ್ಲಿ ದೋಷರಹಿತವಾಗಿ ಬರೆಯುವವರು ಇಂದು ಬಹಳವಾದರೆ ಶೇಕಡ 5 ವಿದ್ಯಾರ್ಥಿಗಳೆಂದು ಹೇಳಬಹುದು.

ಹೊರಗಿನಿಂದ ಬಂದವರಿಗಾಗಿ ಒಂದೋ ಎರಡೋ ಕಾಲೇಜುಗಳನ್ನು ಮಾಸ ಲಾಗಿಟ್ಟು ವಿಶ್ವವಿದ್ಯಾನಿಲಯಗಳ ಮಾಧ್ಯಮವು ರಾಜ್ಯದಲ್ಲಿ ಎಂದೋ ಕನ್ನಡವಾಗ ಬೇಕಾಗಿತ್ತು. ಅಷ್ಟೊಂದಾಗಿ ಕನ್ನಡ ಇಂದು ಬೆಳೆದಿದೆಯಲ್ಲದೆ ಇನ್ನೂ ಅವಕಾಶವಿದ್ದರೆ ವ್ಯಾಧ್ಯಾಪಕರು ಕಲಿಸಿದಂತೆಲ್ಲ ಅದರ ಬಳಕೆ ಹೆಚ್ಚಾಗಿ ಹೆಚ್ಚು ಸಹಜವಾದ, ಸಮಂಜಸವಾದ ಅಭಿವ್ಯಕ್ತಿಗೆ ದಾರಿಯಾಗುತ್ತದೆ. ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದು ಹಾಗೂ ಅದನ್ನು ಮಾಧ್ಯಮವಾಗಿ ಬಳಸುವುದೂ ಭಿನ್ನ ಭಿನ್ನ ವಿಷಯಗಳಾಗಿವೆ.

ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಇಂಗ್ಲಿಷು–ಮಾಧ್ಯಮ ಶಾಲೆಗಳು ಆತಿಯಾಗಿ ಬೆಳೆದದ್ದು ಒಂದು ವಿಶಿಷ್ಟ ಲಕ್ಷಣವಾಗಿದೆ. ತಮ್ಮ ಮಕ್ಕಳು ಇಂಗ್ಲಿಷು ಚೆನ್ನಾಗಿ ಕಲಿಯ ಬೇಕೆಂಬ ಸದಿಚ್ಛೆಯಿಂದ ನಾಗರೀಕರು ಈ ಪ್ರಾದುರ್ಭಾವವನ್ನು ಸ್ವಾಗತಿಸಿದ್ದಾರೆ. ಆದರೆ ಇದು ಅಜ್ಞಾನದ ಫಲವೆಂದು ನಾವು ಹೇಳದಿರಲಾರವು. ಅಂತರ ಪ್ರಾಂತೀಯ ಅಗತ್ಯ ಗಳಿದ್ದಲ್ಲಿ ಇದು ಅನಿರ್ವಾಹಪಕ್ಷದ ಮಾತಾಗಬಹುದು. ಆದರೆ ಇಂಗ್ಲಿಷನ್ನು ಪ್ರಾಥಮಿಕ ಹಂತದಿಂದ ಮಾಧ್ಯಮವನ್ನಾಗಿ ಮಾಡಿದರೆ ಇಂಗ್ಲಿಷು ಭಾಷೆ ಮಕ್ಕಳಿಗೆ ಚೆನ್ನಾಗಿ ಬರುವುದೆಂದು ತಿಳಿಯುವುದು ಕೇವಲ ಭ್ರಮೆ. ಇಂದು ಕಾಲೇಜುಗಳಲ್ಲಿ ಇಂಗ್ಲಿಷು ಮಾಧ್ಯಮವಿದೆ. ಆದರೆ ಇಂದಿನ ಅನೇಕಾನೇಕ ಪದವೀಧರರಿಗೆ ಇಂಗ್ಲಿಷಿನಲ್ಲಿ ದೋಷರಹಿತವಾಗಿ ಒಂದು ವಾಕ್ಯವನ್ನೂ ಸಹ ಬರೆಯುವುದಾಗುವುದಿಲ್ಲವೆಂದು ಸಾರ್ವಜನಿಕ ಆರೋಪಣೆ ಇದೆ. ಕಾರಣವಿಷ್ಟೆ— ಒಂದು ಭಾಷೆಯಾಗಿ ಮಾತ್ರ (ಮಾಧ್ಯಮವಲ್ಲ) ಇಂಗ್ಲಿಷನ್ನು ಕಲಿಸಬೇಕು, ಕಲಿಸುವಾ ಕಲಿಸಿದಷ್ಟು ಇಂಗ್ಲಿಷು ಶುದ್ಧವಾಗಿರುವಂತೆ ಶಿಕ್ಷಕ, ಪಠ್ಯಪುಸ್ತಕ, ಕಲಿಸುವ ಪದ್ಧತಿ ಎಲ್ಲೆಡೆ ಬದಲಾವಣೆಯಾಗಿದೆಯೆಂದು ಖಾತ್ರಿ ಮಾಡಿಕೊಳ್ಳಬೇಕು. ಅಲ್ಲದೆ ಇಂದಿನ ಬದಲಾ ವಾತಾವರಣದಲ್ಲಿ ಮೊದಲಿನಂತೆ ಇಂಗ್ಲಿಷು ಕಲಿಸುವುದು ಸಾಧ್ಯವಿಲ್ಲ : ನಮ್ಮ ವಿಷಯ ವನ್ನು ಆಳವಾಗಿ ತಿಳಿದುಕೊಳ್ಳಲು ಓದಬೇಕಾದ ವಾಙ್ಮಯದ ಅರ್ಥಗ್ರಹಣಕ್ಕಾಗಿ (ಕಾಂಪ್ರಹೆನ್ಷನ್) ಅದು ಇದೆಯೆಂಬುದನ್ನು ತಿಳಿದು ಅದನ್ನೇ ನಮ್ಮ ಇಂಗ್ಲಿಷು ಪಠ್ಯಕ್ರಮದ ಮುಖ್ಯ ಗುರಿಯೆಂದಾಗಿ ಮಾಡಬೇಕು. ಬಳಕೆ ಮಾತಿನ ಇಂಗ್ಲಿಷು (ಸ್ಪೋಕನ್ ಇಂಗ್ಲಿಷು) ಬರವಣಿಗೆಯ ಇಂಗ್ಲಿಷು (ರಿಟನ್ ಇಂಗ್ಲಿಷ್)—ಇವುಗಳಿಗಾಗಿ ಬೇರೆ ಸರ್ಟಿಫಿಕೇಟ್ ಅಭ್ಯಾಸ ಕ್ರಮಗಳನ್ನು ವಿರ್ಪಡಿಸಬೇಕು.

ಇಂಗ್ಲಿಷಿನ ಮಹತ್ವವೇನು? ಇಂದಿಗೆ ಇಂಗ್ಲಿಷು ಇಡೀ ಜಗತ್ತಿನ ಭಾಷೆಯಾಗಿದೆ. ಇಂಗ್ಲಿಷ್ ಬಲ್ಲವ ಲೋಕವನ್ನೆಲ್ಲ ಸಂಚರಿಸಿ ಬರಬಲ್ಲ, ಪರದೇಶಗಳೊಡನೆ ಸಲೀಸಾಗಿ ತನ್ನ ವ್ಯಪಹಾರ ಸಾಗಿಸಬಲ್ಲ. ಜಗತ್ತಿನ ವಾಙ್ಮಯವೆಲ್ಲ—ವಿಜ್ಞಾನ ಸಂಶೋಧನೆಗಳೆಲ್ಲ— ಇಂಗ್ಲಿಷ್‌ನಲ್ಲಿ ಉಪಲಬ್ಧವಾಗಿವೆ. ಇಂಗ್ಲಿಷಿನಲ್ಲಿ ಪತ್ರಿಕಾಸಾಹಿತ್ಯವನ್ನೋದಿ ದಿನದಿನಕ್ಕೆ ತನ್ನ ವಿಶಿಷ್ಟ ಕ್ಷೇತ್ರದಲ್ಲಿ ಅದು ಉದ್ಯಮವಿರಲಿ, ವಾಣಿಜ್ಯವಿರಲಿ, ವಿಜ್ಞಾನವಿರಲಿ, ಸಾಹಿತ್ಯವಿರಲಿ— ಏನು ನಡೆದಿದೆಯೆಂಬುದನ್ನು ವ್ಯಕ್ತಿ ತಿಳಿದುಕೊಳ್ಳಬಹುದು. ಒಮ್ಮೊಮ್ಮೆ ರಷ್ಯನ್, ಜರ್ಮನ್—ಫ್ರೆಂಚ್ ಭಾಷೆಗಳ ಜ್ಞಾನವಿದ್ದರೆ ಚೆನ್ನಾಗಿತ್ತೆಂದು ಅನಿಸುವುದುಂಟು. ಆದರೆ ನೂರಕ್ಕೆ ನೂರರಷ್ಟಲ್ಲದಿದ್ದರೂ ನೂರಕ್ಕೆ ಎಂಭತ್ತರಷ್ಟಾದರೂ ಪೂರ್ಣ ಹಾಗೂ ಆಧುನಿಕ ಜ್ಞಾನವನ್ನು ಸಂಪಾದಿಸಬಲ್ಲೆನೆಂಬ ಭರವಸೆ ಇಂಗ್ಲಿಷು ಬಲ್ಲವನಿಗೆ ಇರುತ್ತದೆ.

ಎರಡನೆಯದಾಗಿ, ನಮ್ಮ ದೇಶದಲ್ಲಿಯೇ ಇಂಗ್ಲಿಷಿಲ್ಲದೆ ಇಲ್ಲಿಯ ಉದ್ಯಮ— ವ್ಯಪಹಾರ ಕ್ಷೇತ್ರಗಳಲ್ಲಿ ಪ್ರವೇಶ ದುರ್ಗಮ ಬಹುತೇಕ ಅಸಾಧ್ಯವೆಂದು ಹೇಳಬಹುದು. ಅಂತರರಾಜ್ಯ ಜೀವನ ಇಂಗ್ಲಿಷಿಲ್ಲದೆ ಕಠಿಣವಾಗುತ್ತದೆ. ಬೆಂಗಳೂರಿನಲ್ಲಿಯೇ ಇಂಗ್ಲಿಷು ಬಾರದಿದ್ದರೆ ಅನೇಕ ಉದ್ಯೋಗವೃತ್ತಗಳಲ್ಲಿ ಪ್ರವೇಶ ದೊರೆಯುವುದಿಲ್ಲ.

ನಮ್ಮ ವಿಶ್ವವಿದ್ಯಾನಿಲಯಂಗಳಲ್ಲಿ ಸಹ ಇಂಗ್ಲಿಷಿನ ವಿಕೃತರೂಪ ಉಳಿದುಂಕೊಂಡಿದೆ. ಅದು ಎಂಥ ಇಂಗ್ಲಿಷೆಂಬುದನ್ನು ನಾವು ಕೇಳುವುದು ಬೇಡ.

ಮೂರನೆಯದಾಗಿ, ಇಂಗ್ಲಿಷು ಎರಡು ಕೇಂದ್ರಾಧಿಕೃತ ಭಾಷೆಗಳಲ್ಲಿ ಒಂದಾಗಿದೆ. ವಿಶೇಷತಃ ದಕ್ಷಿಣ ಹಿಂದೂಸ್ಥಾನದಲ್ಲಿ ಸಂಪರ್ಕಭಾಷೆಯೆಂದು ಇದು ಪ್ರಚಲಿತವಾಗಿವೆ. ಕೇಂದ್ರಸರ್ಕಾರದ ಸೇವಾಶಾಖೆಗಳಲ್ಲಿ ಒಂದನ್ನು ಸೇರಲಿಚ್ಛಿಸುವವರಿಗೆ ಇಂಗ್ಲಿಷು ಬಾರದಿದ್ದರೆ

ನಡೆಯುವುದಿಲ್ಲ. ಕೇಂದ್ರಸರ್ಕಾರ ಸ್ಥಾಪಿಸಿದ ಸ್ವಾಯತ್ತತೆಯುಳ್ಳ ಸಂಸ್ಥೆಗಳಲ್ಲಿಯೂ, ಕಾರ್ಖಾನೆಗಳಲ್ಲಿಯೂ ಇಂಗ್ಲಿಷೇ. ದಕ್ಷಿಣ ಹಿಂದೂಸ್ಥಾನದಲ್ಲಿ ಇಂಗ್ಲಿಷೇ ವ್ಯವಹಾರದ—ಪತ್ರವ್ಯವಹಾರದ ಭಾಷೆಯಾಗಿದೆ. ಉತ್ತರದಲ್ಲಿ ಹಿಂದಿಗೂ ಆಸ್ಪದವಿದೆ.

'ದಕ್ಷಿಣ' ಎಂದು ಹೇಳಿದಾಗ 'ಪೂರ್ವ' ಹಿಂದೂಸ್ಥಾನದ ಕೆಲವು ಭಾಗಗಳಿಗೂ—ಬಂಗಾಳ, ಒರಿಸ್ಸಾ, ಅಸ್ಸಾಂ ರಾಜ್ಯಗಳಿಗಾದರೂ—ಈ ಮಾತು ಅನ್ವಯಿಸುತ್ತದೆಂದು ತಿಳಿಯಬಹುದು. ಪಶ್ಚಿಮ ಹಿಂದೂಸ್ಥಾನ್ (ಗುಜರಾತ್, ಮಹಾರಾಷ್ಟ್ರ) ಹಿಂದೀಗೆ ಸಮೀಪ ವಿರುವ ಭಾಷೆಗಳನ್ನು ಹೊಂದಿರುವುದರಿಂದ ಅಲ್ಲಿ ಹಿಂದಿಯೂ ಆಗಬಹುದು, ಇಂಗ್ಲಿಷೂ ಆಗಬಹುದು. ಅದು ವೈಯಕ್ತಿಕ ಅಭಿರುಚಿಯನ್ನು ಅವಲಂಬಿಸಿರುತ್ತದೆ. ಆದರೆ ದಕ್ಷಿಣ ಹಿಂದೂಸ್ಥಾನದ ಭಾಷೆಗಳ ಲಿಂಗ-ವ್ಯಾಕರಣ ಇಂಗ್ಲಿಷಿನಂತೆಯೇ ಇದೆ, ಹಿಂದೀಯಂತಲ್ಲ, ಉದಾಹರಣಾರ್ಥ ಇಂಗ್ಲಿಷಿನಲ್ಲಿಯೂ ದ್ರಾವಿಡಭಾಷೆಗಳಲ್ಲಿಯೂ ಪ್ರತಿಯೊಂದು ಶಬ್ದಕ್ಕೆ ಅದರ ಲಿಂಗವಿರುವುದಿಲ್ಲ. (He) ಇದು ಪುರುಷರಿಗೆ, (She) ಎಂಬುದು ಮಹಿಳೆಯರಿಗೆ ಹಾಗೂ (It) ಎಂಬುದು ನಿರ್ಜೀವ ವಸ್ತುಗಳಿಗೆಂದು ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತದೆ.

ಮಧ್ಯ ಹಿಂದೂಸ್ಥಾನದಲ್ಲಿ ಹಿಂದಿಯೇ ಮುಖ್ಯವಾಗಿದೆ. ರಾಜಾಸ್ಥಾನಿಯು ಮೈಥಿಲಿಯಂತೆ ಬೇರೆ ಭಾಷೆಯೆಂದು ಗಣನೆಯಾಗಿದ್ದರೂ ಇವೆಲ್ಲಾ ಹಿಂದಿಯ ಉಪಭಾಷೆಗಳೇ ಆಗಿವೆ.

'ಏನೇ ಇರಲಿ, ಹಲವಾರು ಮಹತ್ವದ ಕಾರಣಗಳಿಗೋಸ್ಕರ, ವಿಶೇಷತಃ ಜಾಗತಿಕ ಭಾಷೆ ಹಾಗೂ ಜಾಗತಿಕ ಜ್ಞಾನ—ವಿಜ್ಞಾನವ ಮಾಧ್ಯಮವೆಂದೂ ಇಂಗ್ಲಿಷು ಪ್ರಮುಖ ಭಾಷೆಯಾಗಿದೆ. ವಿದ್ಯಾರ್ಥಿಗಳು ಇಂಗ್ಲಿಷನ್ನು ಕಲಿಯಂಲಿಚ್ಛಿಸುವುದು ಸಹಜವಾಗಿದೆ. ಆದರೆ ಅದರ ಅಭ್ಯಾಸವನ್ನು ಶಾಖೋಪಶಾಖೆಯಾಗಿ ಮಾಡಿ ಅರ್ಥಗ್ರಹಣ, ಬಳಕೆಮಾತಿನ ಇಂಗ್ಲಿಷು ಬರವಣಿಗೆಯ ಇಂಗ್ಲಿಷು ಎಂದು ಅದನ್ನು ಭಾಗಶಃ ಅಭ್ಯಸಿಸುವ ಮಾರ್ಗವನ್ನು ಅನುಸರಿಸಬೇಕು. ಮಾಧ್ಯಮಿಕ ಶಾಲೆಗಳಲ್ಲಿ ಅರ್ಥಗ್ರಹಣಕ್ಕಾಗಿ ಪಾತ್ರ ಇಂಗ್ಲಿಷನ್ನು ಚೆನ್ನಾಗಿ ಕಲಿಯಬಹುದು.

(6) ಸಂಸ್ಕೃತದ ಸ್ಥಾನ

ಸಂಸ್ಕೃತದ ಉಲ್ಲೇಖ ಇನ್ನೂವರೆಗೆ ಈ ವರದಿಯಲ್ಲಿ ಆಗಿಲ್ಲ. ಸಂಸ್ಕೃತದ ಸ್ಥಾನ ಮಾಧ್ಯಮಿಕ ಪಠ್ಯಕ್ರಮದಲ್ಲಿ ವಿವಾದಾಸ್ಪದ ವಿಷಯವಾಗಿದ್ದರಿಂದ ಈ ಸಮಿತಿಯಂ ಅಸ್ತಿತ್ವದಲ್ಲಿ ಬಂದಿದೆ. ಇಲ್ಲಿಯವರೆಗೆ ಸಿದ್ಧಗೊಳಿಸಿದ ಹಿನ್ನೆಲೆಯಲ್ಲಿ ನಾವು ಸಂಸ್ಕೃತದ ಸ್ಥಾನವನ್ನು ಕುರಿತು ವಿಶ್ಲೇಷಿಸಬಹುದು.

ಸಂಸ್ಕೃತವು ಎಲ್ಲ ಭಾರತೀಯರಿಗೂ ಅಭಿಮಾನಾಸ್ಪದವಿರಬೇಕಾದ ಭಾಷೆ. ಋಗ್ವೇದವು ವಿಶ್ವವಾಙ್ಮಯದ ಇತಿಹಾಸದಲ್ಲಿಯೇ ಪ್ರಪ್ರಥಮವಾಗಿ ರೂಪಗೊಂಡಿರುವ ಹಾಗೂ ಉಳಿದು ಬಂದಿರುವ ಕಾವ್ಯಸಂಗ್ರಹವಾಗಿದೆ. ಸಂಸ್ಕೃತದ ಪ್ರಾಚೀನತೆಯಂ ಕನಿಷ್ಠ ಪಕ್ಷಕ್ಕೆ 5000 ವರ್ಷಗಳನ್ನು ಮೀರಿದೆ. ಈ ಅವಧಿಯಲ್ಲೆಲ್ಲ—ನಡು ನಡುವೆ ಬಹು ದೊಡ್ಡ ಆತಂಕಗಳೂ ಬಂದರೂ—ಸಂಸ್ಕೃತವು ಸಾಹಿತ್ಯಭಾಷೆಯಾಗಿ ಮುಂದುವರೆಯಿತು. ಗ್ರಾಂಥಿಕಭಾಷೆಗೂ ಬಳಕೆಮಾತಿಗೂ ಭೇದ ಬಹಳವಾದಾಗ ವ್ಯಾವಹಾರಿಕ ಭಾಷೆಗಳು (ಪಾಲಿ, ಅರ್ಧ ಮಾಗಧಿ) ಬುದ್ಧ ಹಾಗೂ ಮಹಾವೀರರ ಕಾಲದಲ್ಲಿ ಧಾರ್ಮಿಕ ಸಾಹಿತ್ಯದ ಭಾಷೆ

ಗಳಾದುವು. ಕ್ರಮೇಣ ಸಂಸ್ಕೃತ ಜನ್ಯ ಪ್ರಾಕೃತಗಳಿಂದ ಹಿಂದೀ, ಬಂಗಾಲಿ, ಮೊದಲಾದ ಭಾಷೆಗಳು ತಲೆಯೆತ್ತಿ ತಾವೇ ಸಾಹಿತ್ಯದ ವಾಹಕಗಳಾದುವು. ಆದರೆ ಭಾರತದ ತುಂಬಿಲ್ಲ ಸಾಹಿತ್ಯಕ್ಕೂ ಪಂಡಿತರ ಸಭೆಗಳಿಗೂ, ಶಾಸನಗಳಿಗೂ ಸರ್ವಸಾಮಾನ್ಯಭಾಷೆಯಾಗಿ ಅನೇಕಾನೇಕ ಶತಮಾನಗಳವರೆಗೆ ಸಂಸ್ಕೃತವು ನಡೆದುಕೊಂಡು ಬಂದಿತು. ಫಾರ್ಸಿ ಹಾಗೂ ಮಂದೆ ಇಂಗ್ಲಿಷು ಮತ್ತು ಪ್ರಾದೇಶಿಕ ಭಾಷೆಗಳು ಅದರ ಸ್ಥಾನವನ್ನು ಆಕ್ರಮಿಸಿದಂತೆ ಸಂಸ್ಕೃತವು ವಿಶೇಷತಃ ಧಾರ್ಮಿಕ ಹಾಗೂ ಶಾಸ್ತ್ರೀಯ ಸಾಹಿತ್ಯದ (ಅಲಂಕಾರ ಶಾಸ್ತ್ರ, ಆಯುರ್ವೇದ, ವ್ಯಾಕರಣ, ದರ್ಶನ, ಇತ್ಯಾದಿ) ಭಾಷೆಯಾಗಿ ಹಾಗೂ ಪಂಡಿತರ ಸಭೆಗಳ ಮಾಧ್ಯಮವಾಗಿ ಉಳಿದುಕೊಂಡಿತು.

ಸಂಸ್ಕೃತವು ಒಂದು ಗ್ರಾಂಥಿಕಸ್ತರಕ್ಕೆ ಒಂದು ಆ ಸ್ತರದ ಶೈಲಿ, ಅಲಂಕಾರ, ವ್ಯಾಕರಣ ಮುಂತಾದ ಲಕ್ಷಣಗಳು ಇನ್ನೂ ಹಾಗೆಯೇ ಉಳಿದುಕೊಂಡಿರುವಾಗ, ಪ್ರಾಕೃತ ಹಾಗೂ ಮುಂದೆ ಪ್ರಾದೇಶಿಕ ಭಾಷೆಗಳು ಜನತೆಯ ಸಾಹಿತ್ಯದ ಭಾಷೆಗಳಾಗುತ್ತಾ ಬೆಳೆದುವು. ಆಗ ಒಂದು ಸ್ಥಿರ, ಮಾರ್ಗೀಯ, ಗ್ರಾಂಥಿಕ ಇಲ್ಲವೆ ಕ್ಲಾಸಿಕಲ್ ಪ್ರಾದರಿಯಲ್ಲಿ ಹಾಗೆಯೇ ಉಳಿದುಕೊಂಡಿದ್ದ ಗ್ರಾಂಥಿಕ ಸಂಸ್ಕೃತವು ಆಳಿಯಲೂ ಇಲ್ಲ, ಬೆಳೆಯಲೂ ಇಲ್ಲ, ಅದು ಪರಿವರ್ತನಾತೀತವಾಯಿತು. ಇದೇ ಗ್ರಾಂಥಿಕ ರೂಪದಲ್ಲಿಯೇ ಅದು ಪಂಡಿತರ ಬಳಕೆಯಂ ಮಾತ್ರ ಆಯಿತು. ಸಂಸ್ಕೃತದ ಈ 'ಸ್ಥಿರ' ಭಾಷಾ ರೂಪವೇ 'ಮೃತ' ವೆಂದಿರುವ ಭಾಷೆಯಲ್ಲಿಯ ಜೀವಂತ ಅಂಶವೆಂದು ಎತ್ತಿ ತೋರಿಸಬಹುದು. ಅಲ್ಲದೆ 'ಜೀವಂತ' ಭಾಷೆಗಳಲ್ಲಿಯೂ 'ಮೃತ' ಅಂಶಗಳಿರುತ್ತವೆಂಬುದನ್ನು ನಾವು ಮರೆಯುವಹಾಗಿಲ್ಲ. ಇಂಗ್ಲಿಷ್‌ನಲ್ಲಿ ಬಳಸುವ ಅನೇಕ ಶಬ್ದಗಳಿಗೆ ಹಾಗೂ ಔಷಧದ ಹೆಸರುಗಳಿಗೆ ಎಂ.ಬಿ.ಬಿ.ಎಸ್. ಡಾಕ್ಟರರ ಭಾಷೆಯಲ್ಲಿ ಮಾತ್ರ 'ಅಸ್ತಿತ್ವ'ವಿದೆ. ಉಳಿದವರಿಗೆ ಆ ಶಬ್ದಗಳ ಅರ್ಥ ಸುಲಭವಾಗಿ ಆಗುವುದಿಲ್ಲ. ಇದೇ ರೀತಿಯಾಗಿ ಪ್ರತಿಯೊಂದು ವೈಜ್ಞಾನಿಕ ಕ್ಷೇತ್ರದಲ್ಲಿಯೂ ಅದರ ಪಾರಿಭಾಷಿಕ ಶಬ್ದಗಳಿವೆ. ಪ್ರಾಚೀನ ಹಾಗೂ ಅರ್ವಾಚೀನ ಭಾಷೆಗಳನ್ನು 'ಮೃತ' ಹಾಗೂ 'ಜೀವಂತ' ಎಂದು ವರ್ಣಿಸುವುದು ಸಾಧುವಾಗಲಾರದು. ಏಕೆಂದರೆ, ಮೇಲೆ ಚರ್ಚಿಸಿದಂತೆ ಪ್ರಾಚೀನ ಭಾಷೆಯಲ್ಲಿ 'ಜೀವಂತ' ಅಂಶಗಳೂ ಹಾಗೂ ಅರ್ವಾಚೀನ ಭಾಷೆಗಳಲ್ಲಿ 'ಮೃತ' ಅಂಶಗಳೂ ದೊರೆಯುವುದುಂಟು.

ಆದರೆ ಅರ್ವಾಚೀನ ಭಾಷೆಗಳಂತೆ ಒಂದು 'ಸ್ಥಿರ' ಭಾಷೆಯು ಸೃಜನಶೀಲತೆಯನ್ನು ಹೊಂದಿದೆಯೆಂದು ಹೇಳಲು ಬರುವುದಿಲ್ಲ. ಅವುಗಳಂತೆ ಅದು ಎದೆ ಹಾಲಿನ ಭಾಷೆಯಾಗುವುದಿಲ್ಲ. ಪ್ರತಿಯೊರ್ವ ತಾಯಿ ಮಗುವಿಗೆ ಆ ಭಾಷೆಯಲ್ಲಿ ಗುಟುಕು ಕೊಡುತ್ತಿಲ್ಲ. ಪೀಳಿಗೆಯಿಂದ ಪೀಳಿಗೆಗೆ ಅದು ಬೆಳೆದು, ಮಾರ್ಪಟ್ಟು, ಅದರ ವ್ಯಾಕರಣದಲ್ಲಿ–ವಾಕ್ಯರಚನೆಯಲ್ಲಿ ಸಹ ಗೊತ್ತಿಲ್ಲದೆ–ಬದಲಾವಣೆಗಳಾಗಿ ಚತುರ್ವೇದ ಸಂಹಿತೆಗಳ ಸಂಸ್ಕೃತ ಔಪನಿಷದ ಸಂಸ್ಕೃತವಾದಂತೆ, ಔಪನಿಷದ ಸಂಸ್ಕೃತ ಪೌರಾಣಿಕ ಸಂಸ್ಕೃತವಾದಂತೆ. ನಮಗೆ ಗೊತ್ತಿದ್ದ 'ಸ್ಥಿರ', ಮಾರ್ಗೀಯ ಸಂಸ್ಕೃತ ವಿಕಸನ ಪೂರ್ಣವಾಗುತ್ತಿಲ್ಲ. ಂಗ್ಲೀಷಿನ ಪ್ರಭಾವದ ಮೂಲಕ ಅಲ್ಲಲ್ಲಿ ಅಂತಹದು ಅನುಕರಣಗಳು ಕಂಡರೂ ಅವು ಕೃತ್ರಿಮ ಭಾಷಾರೂಪದಲ್ಲಿ ಮಾತ್ರ ಕಂಡು ಬರುವ ವಿಕಾಸ. ಹುಡುಗರು ಗೋಲಿಗುಂಡನ್ನಾಡುವಾಗ, ಜನ ಓಣಿಯಲ್ಲಿ ಜಗಳ ಮಾಡುವಾಗ, ಗಂಡ–ಹೆಂಡಿರು ಒಬ್ಬರಿಗೊಬ್ಬರು ಬಯ್ದಾಡುವಾಗ, ಮಗು ಒಂದೇ ಮೂಲೆಯಲ್ಲಿ ಕುಳಿತುಕೊಂಡು ತನ್ನಷ್ಟಕೆ ತಾನೆ ಮಾತನಾಡುತ್ತಿರುವಾಗ, ದನಗಾಹಿ ಹೆಸರಂ ಗೊಂಡಂ—ಒಮ್ಮೊಮ್ಮೆ ವಿಶಿಷ್ಟ ಅಲಂಕಾರಿಕ ಹೆಸರುಗಳನ್ನು ಕೊಟ್ಟು ತನ್ನ ದನವನ್ನು ಕರೆದು ಒಟ್ಟುಗೂಡಿಸುವಾಗ—ಹೀಗೆ ಇನ್ನೂ ಅನೇಕ ವಿಧದಲ್ಲಿ ಸಹಜವಾಗಿ ಹುಟ್ಟಿಕೊಳ್ಳುವ ಭಾಷೆ ಮಾರ್ಗೀಯ ಸಂಸ್ಕೃತವಲ್ಲ. ಹಿಂದೆ ಆ ಮಾತೃ ಪದವಿಯನ್ನು ಅನುಭವಿಸಿ

ಸಂಸ್ಕೃತವು ಪ್ರಾಕೃತ ಹಾಗೂ ಉತ್ತರದ ಪ್ರಾದೇಶಿಕ ಭಾಷೆಗಳ ತಾಯಿಯಾಯಿತು. ದ್ರಾವಿಡ ಭಾಷೆಗಳ ಸಾಕಂತಾಯಿಯಾಯಿತು. ಸಂಸ್ಕೃತದ ಒಂದು ಮಾರ್ಗೀಯ ರೂಪಕ್ಕೆ ಒದಗಿದ ಸ್ಥೈರ್ಯ ಮತ್ತೆ ಆಂಥ ಮಾತೃತ್ವವನ್ನು ಗಳಿಸಬಹುದು. ಆದರೆ ಅದಕ್ಕಾಗಿ ಅತ್ಯಂತ ಅಪರೂಪವಾದ ಪರಿಸ್ಥಿತಿಯ ವೈಚಿತ್ರ್ಯ ಅಸ್ತಿತ್ವದಲ್ಲಿ ಬರಬೇಕಾಗುತ್ತದೆ.

ಅಂತೂ ಇವತ್ತು ಸಂಸ್ಕೃತವು ಶ್ರೀ ಸಾಮಾನ್ಯನ ಭಾಷೆಯಾಗಿಲ್ಲ. ಮೂರು ಕೋಟಿ ಕನ್ನಡಿಗರಲ್ಲಿ ಎಷ್ಟು ಜನರಿಗೆ ಸಂಸ್ಕೃತದಲ್ಲಿ ಪ್ರವೇಶ ಸಾಧ್ಯ? ಸಂಮಾರು ನೂರಕ್ಕೆ ಎಪ್ಪತ್ತು ಜನ ಕನ್ನಡಿಗರು ನಿರಕ್ಷರಿಗಳಿರುವಾಗ ಸಂಸ್ಕೃತಿಯ ಬೀಜಗಳನ್ನು ಅವರ ಮನದಲ್ಲಿ ಬಿತ್ತುವದಕ್ಕೋಸ್ಕರ ಪ್ರಾದೇಶಿಕ ಭಾಷೆಯಾದ ಕನ್ನಡವೊಂದೇ ಉಚಿತ ಮಾಧ್ಯಮವಾಗ ಬಲ್ಲದು. ಅಕ್ಷರಿಗಳಾಗಲಿ, ನಿರಕ್ಷರಿಗಳಾಗಲಿ. ಎಲ್ಲರಿಗೂ ಅದು ಗ್ರಾಹ್ಯವಾಗುವುದು. ಆತೆಯೇ ಕನ್ನಡದ ಸಾಹಿತ್ಯೇತಿಹಾಸದ ಉದ್ದಕ್ಕೂ ರಾಮಾಯಣ—ಮಹಾಭಾರತ ಕಾವ್ಯ ಗಳನ್ನು ಕನ್ನಡದಲ್ಲಿ ಪುನರ್‌ಸೃಷ್ಟಿಸುವ ಸಾಹಸ ನಡೆಯಿತು. ಜೈನಧರ್ಮವು ಕನ್ನಡ ಕಾವ್ಯ ಗಳಲ್ಲಿ ರೂಪಗೊಂಡಿತು. 'ವಚನಗಳು' ಕನ್ನಡ ಉಪನಿಷತ್ತುಗಳಾದವು. ''ಸಂಸ್ಕೃತ—ದೊಳಿನ್ನೇನು?" ಎಂಬ ಪ್ರಶ್ನೆಯಂನ್ನು ಕನ್ನಡ ಜನ ಕೇಳುವಂತಾಯಿತು. ಬರಿ ಇಂದಿಗೇ ಅಲ್ಲ : ಈ ಸೊಂದು ಸಾವಿರ ವರ್ಷಗಳಿಂದ ಕನ್ನಡವು ಜನತೆಯ ಪ್ರಥಮ ಭಾಷೆಯಾಗಿದೆ.

ಸಂಸ್ಕೃತದಲ್ಲಿ ಇನ್ನೂ ಒಂದು ಕೊರತೆಯಿದೆ. ಅದರಲ್ಲಿ ಆಧುನಿಕ ಜಗತ್ತಿನ ವಾಙ್ಮಯವಿಲ್ಲ. ಸುಮಾರು 16ನೆಯ ಶತಮಾನದ ತರುವಾಯ ಭಾರತ ದೇಶದ ಜ್ಞಾನ ಪ್ರಪಂಚದಲ್ಲಿ ಸಹ ತನಗಿದ್ದ ಪ್ರಾಮುಖ್ಯವನ್ನು ಕಡೆದುಕೊಳ್ಳ ಹತ್ತಿತು. ಯುರೋಪಿಯನ್ ರಿನೇಸಾನ್ಸ್ ಇಲ್ಲಿವೆ, ಪುನರುಜ್ಜೀವನದ ಕ್ರಾಂತಿಯು ಈ ಕ್ಷೇತ್ರದಲ್ಲಿಯು ನಾಯಕತ್ವವನ್ನು ಯುರೋಪಿಗೆ ದೊರೆಯುವಂತೆ ಮಾಡಿತು. ಕಳೆದ ನಾಲ್ಕು ಶತಮಾನಗಳಲ್ಲಿ ಪ್ರಪಂಚ ದಲ್ಲಿಯೂ ಜ್ಞಾನ ಪ್ರಪಂಚದಲ್ಲಿಯೂ ಆದ ಅದ್ಭುತ ಬದಲಾವಣೆಗಳನ್ನೂ, ಸಂಶೋಧನೆ ಗಳನ್ನೂ ಗಮನಿಸದಿದ್ದ ನಾಗರಿಕನು ಸುಸಂಸ್ಕೃತನೆಂದು ಹೇಳಲು ಬರುವುದಿಲ್ಲ. ಕಳೆದ ನಾಲ್ಕು ಶತಮಾನಗಳ ಸಂಸ್ಕೃತ ಸಾಹಿತ್ಯವನ್ನು ಆಂಗ್ಲ ಸಾಹಿತ್ಯದೊಡನೆ ಹೋಲಿಸಿ ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. ಏಳನೆಯ ಶತಮಾನದ ಸಾಹಿತ್ಯದ ಪೂರ್ವದಲ್ಲಿ ಇಂಗ್ಲಿಷಿನಲ್ಲಿ ಅಲ್ಪಸ್ವಲ್ಪ ಬರವಣಿಗೆ ಇದ್ದಿರಬಹುದು. ಆದರೆ ಇದಕ್ಕೂ ಪೂರ್ವದಲ್ಲಿ ಅಸ್ತಿತ್ವಕ್ಕೆ ಬಂದ ಸಾಹಿತ್ಯದ ಮೂಲಕ ಸಂಸ್ಕೃತವು ಇಂದಿಗೂ ಜಗತ್ತಿನಲ್ಲೆಯ ಅದ್ವಿತೀಯ ಸಾಹಿತ್ಯವಾಗಿ (ಕೆಲವೊಂದು ದಿಕ್ಕಿನಲ್ಲಿ) ಉಳಿದುಕೊಂಡಿದೆ. ಏಳನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಬಂದ ಸಂಸ್ಕೃತ ಸಾಹಿತ್ಯವು ಇಂಗ್ಲಿಷಿಗಿಂತ ಎಷ್ಟೋ ಹೆಚ್ಚಾಗಿ ಶ್ರೀಮಂತ ವಾಗಿದೆ. ಆದರೆ ಇಲ್ಲಿಂದ ಮುಂದೆ, ಒಮ್ಮಿಂದೊಮ್ಮೆ, ಪುನರುಜ್ಜೀವನ ಕ್ರಾಂತಿಯ ಮೂಲಕ ಇಂಗ್ಲಿಷ್ ವಾಙ್ಮಯಕ್ಕೆ ಅಗಾಧ ವಿಸ್ತಾರವು ಆಧುನಿಕತೆಯೂ ಬರುತ್ತವೆ. ಅದು ಚಮತ್ಕಾರಿಕ ವೇಗದಿಂದ ಅತ್ಯದ್ಭುತವಾಗಿ ಬೆಳೆಯುತ್ತದೆ. ಇಂಗ್ಲಿಷು 19ನೆಯ ಶತಮಾನದ ಕೊನೆಗೆ ಜಾಗತಿಕ ಭಾಷೆಯಾಗಿ ಅವರ ಸಾಹಿತ್ಯವು ಆಧುನಿಕ ಪ್ರಪಂಚದ ಜ್ಞಾನವನ್ನೆಲ್ಲ ಒಳಗೊಂಡ ಸಾಹಿತ್ಯವಾಗುತ್ತದೆ. ಇಂಗ್ಲಿಷಿನಲ್ಲಿ ದಿನ ದಿನಕ್ಕೆ ಎಲ್ಲ ಕ್ಷೇತ್ರಗಳಲ್ಲಿಯೂ ನಡೆಯುವ ಸಂಶೋಧನೆಗಳು ಉಪಲಬ್ಧವಾಗುತ್ತವೆ. ಈ ಸಂಶೋಧನೆಗಳನ್ನು ನಾವು ತಿಳಿಯದೆ ಹೋದರೆ ಆಧುನಿಕ ಪ್ರಪಂಚವನ್ನು ನೋಡಲು ನಮಗಿದ್ದ ಕಣ್ಣನ್ನು ನಾವೇ ಕಳೆದುಕೊಂಡಂತಾಗುತ್ತದೆ. 20ನೆಯ ಶತಮಾನದ ಸುಸಂಸ್ಕೃತ ನಾಗರಿಕರಾಗಿ ಬಾಳಬೇಕಾದ ಕನ್ನಡಿಗರಿಗೆ ಈ ಮಾತನ್ನು ನೆನೆಯದೆ ಗತಿಯಿಲ್ಲ. ಯಾವ ದಿಕ್ಕಿನಿಂದಾದರೂ ಬಂದಿರಲಿ, ಜ್ಞಾನವು ಪವಿತ್ರವಾದುದೇ. ಅದೇ ರೀತಿಯಾಗಿ ಕೆಲವೊಂದು ಶಾಶ್ವತ ಮೌಲ್ಯಗಳನು

ಕೊಡಲು ಕೈಯೆತ್ತಿ ನಿಂತ ಸಂಸ್ಕೃತ-ಪಾಲಿ-ಅರ್ಧ ಮಾಗಧಿಗಳಿಡೆಗೆ ಇಡೀ ಜಗತ್ತೇ ಧಾವಿಸುತ್ತದೆ. ಇದೂ ನಮ್ಮ ಚಿರಸ್ಮರಣೆಯಲ್ಲಿರಬೇಕಾದ ಸಂಗತಿಯಾಗಿದೆ.

ಕಳೆದ ನಾಲ್ಕು ಶತಮಾನಗಳ ಸಂಸ್ಕೃತ ಸಾಹಿತ್ಯದಲ್ಲಿ ನೈಜ ಕಾವ್ಯವಿದೆ. ಹೆಚ್ಚಾಗಿ ಪರಂಪರೆಯ ಅನುಕರಣವೇ ಇದೆ. ಇತ್ತೀಚೆಗೆ ಆಂಗ್ಲ ಕಾವ್ಯದ ಪ್ರಭಾವವು ಅಲ್ಲಲ್ಲಿ ಕಂಡು ಬರುತ್ತದೆ. ಆದರೆ ಆಧುನಿಕ ಪ್ರಪಂಚದ ಜ್ಞಾನ-ವಿಜ್ಞಾನಗಳು ಅಲ್ಲಿ ಮೂಡಿ ಬಂದಿಲ್ಲ. ಸಂಸ್ಕೃತದಲ್ಲಿ ಅವುಗಳನ್ನು ಇಂಗ್ಲಿಷಿನಿಂದ ಭಾಷಾಂತರಿಸಿ ತಂದರೂ, ಇಂಗ್ಲಿಷಿಗಿಂತ ಕದಾಚಿತ ಹೆಚ್ಚು ಅವು ಸಂಸ್ಕೃತದಲ್ಲಿ ಅಗಮ್ಯವಾಗುವುವು. ಸಂಸ್ಕೃತದಲ್ಲಿಯೇ ಹಿಂದಿನಿಂದ ಬೆಳೆದು ಬಂದ ವಿಜ್ಞಾನವು ಇನ್ನೂ ಬಹುಮಟ್ಟಿಗೆ ಸಂಶೋಧನದ ವಿಷಯವಾಗಿಯೇ ಉಳಿದಿದೆ. ಆದರೆ ಕನ್ನಡದಲ್ಲಿ ಇಂದಿಲ್ಲ ನಾಳೆ ಇಂದಿನ ಪ್ರಪಂಚದ ವಿಜ್ಞಾನವೆಲ್ಲ ಪಡಿಮೂಡುವುದು. ಹೀಗೆ ಅದನ್ನು ಕನ್ನಡಿಗರು ಸುಲಭವಾಗಿ ತಿಳಿದುಕೊಳ್ಳಬಹುದು.

ಸಂಸ್ಕೃತಕ್ಕೆ ಒಂದು ವ್ಯಾವಹಾರಿಕ ಆಸ್ತಿತ್ವವಿದೆಯೆಂಬುದು ನಿಜ. ಘಟನಾ ಸಭೆಯ ಹಲವಾರು ಸದಸ್ಯರು ಹಿಂದೆ ಸಂಸ್ಕೃತವು ಅಧಿಕೃತ ಅಂತರ್ ರಾಜ್ಯ ಸಂಪರ್ಕ ಭಾಷೆಯಾಗಿರ ಬೇಕೆಂದು ವಾದಿಸಿದ್ದರು. ಈಚೆಗೆ ದಿನದ ವಾರ್ತೆಗಳು ಪ್ರತಿನಿತ್ಯ ರೇಡಿಯೋದ ಮೇಲೆ ಸಂಸ್ಕೃತದಲ್ಲಿಯೂ ಪ್ರಸಾರವಾಗುತ್ತಿವೆ. ಕೆಲವು ನಿಯತಕಾಲಿಕಗಳೂ ಸಂಸ್ಕೃತದಲ್ಲಿ ಪ್ರಕಟವಾಗುತ್ತಿವೆ. ಹೀಗೆ ಹಿಂದಿನ ನಾಗರಿಕತೆಯ ಉದ್ದೇಶಗಳಿಗೂ ಸಂಸ್ಕೃತವು ಬಳಕೆಯಾಗುತ್ತಿದೆ. ಅಲ್ಲದೆ ಪಂಡಿತರ ಭಾಷೆಯಾಗಿ, ಸಂವಾದ ಪ್ರವಚನಗಳ ಸಲುವಾಗಿ, ಸಂಸ್ಕೃತವು ಬಳಕೆಯಲ್ಲಿದೆ.

ಆದರೆ ಈ ಎಲ್ಲ ಚಟುವಟಿಕೆಗಳು ಸಂಸ್ಕೃತ ಭಾಷೆಯು ಒಂದು ಆಧುನಿಕ ಭಾಷೆಯೆಂಬ ವರ್ಣನೆಗೆ ಆಧಾರವಾಗಲಾರವು. ಇವು ಕುತೂಹಲವನ್ನು ಕೆರಳಿಸುತ್ತವೆ. "ಸಂಸ್ಕೃತದಲ್ಲಿಯೂ ಹೀಗೆ ಮಾಡುವುದು ಸಾಧ್ಯ" ಎಂದು ನಮ್ಮನ್ನು ಬೆರಗುಗೊಳಿಸುತ್ತವೆ. ಮೂರು ಕೋಟಿ ಜನರ ಬಳಕೆ ನುಡಿಗಳ ಸಹಜ ಓಘ್‌ದಂತೆ ಇದೊಂದು ನೈಸರ್ಗಿಕ ಕ್ರಿಯೆಯಲ್ಲ.

ಸಂಸ್ಕೃತದ ಪ್ರಯೋಜನವು ಇನ್ನೊಂದು ರೀತಿಯಲ್ಲಿ ಸ್ಪುಟವಾಗುತ್ತದೆ. ಕನ್ನಡದ ಜೀವಜೀವಾಳದಲ್ಲಿಯೇ ಸಂಸ್ಕೃತವು ಹಾಸು ಹೊಕ್ಕಾಗಿದೆ. ಗೌಡೀಯ ಭಾಷೆಗಳೆಲ್ಲ ಸಂಸ್ಕೃತದಿಂದ ಹುಟ್ಟಿದವಲ್ಲದೆ ದ್ರಾವಿಡ ಭಾಷೆಗಳೂ ತಮ್ಮ ಶಬ್ದ ಸಂಪತ್ತಿನ ಎಷ್ಟೋ ಭಾಗವನ್ನು ಸಂಸ್ಕೃತದಿಂದ ಆಯ್ದುಕೊಂಡವು. ಯುರೋಪಿನಲ್ಲಿ ಜರ್ಮನ್ ಭಾಷೆಯ ಹಾಗೆ ಈ ವಿಷಯದಲ್ಲಿ ತಮಿಳಿನ ಒಲವು ಕೂಕಡ ತರುವ ಧೋರಣದ್ದಲ್ಲ. ಆದರೆ ವೈಜ್ಞಾನಿಕ ಶಬ್ದಕೋಶವನ್ನು ದಿನ ದಿನಕ್ಕೆ ಹಿಗ್ಗಿಸುವ ಒತ್ತಡ ಬಂದಾಗ ತಮಿಳೂ ಸಹ ಇದೇ ದಾರಿಯನ್ನು ತುಳಿಯಬೇಕಾಗಬಹುದು. ಹೀಗೆ ಕನ್ನಡದ ಪ್ರತಿಭೆಯನ್ನು ತಿಳಿಯಲು ಸಹ ನಾವು ಸಂಸ್ಕೃತವನ್ನು ಅಭ್ಯಸಿಸುವದು ಅವಶ್ಯವಾಗುತ್ತದೆ. ಹಳಗನ್ನಡ ಹಾಗೂ ನಡುಗನ್ನಡ ಸಾಹಿತ್ಯಗಳ ಅಭ್ಯಾಸಿಗಳಿಗಂತೂ ಸಂಸ್ಕೃತದ ಅಧ್ಯಯನ ಅತ್ಯಗತ್ಯವಾಗಿದೆ. ಏಕೆಂದರೆ ಸಂಸ್ಕೃತದಲ್ಲಿಯೂ ಮಹಾಕಾವ್ಯಗಳು ಕನ್ನಡ ಸಾಹಿತ್ಯದ ಇತಿಹಾಸದ ತುಂಬೆಲ್ಲ ಬೆಳಕು ಚೆಲ್ಲಿವೆ. ಗೀತೋಪನಿಷದ್ ವಾಕ್ಯಗಳೂ ಹಾಗೆಯೇ. ಅಲಂಕಾರ ಶಾಸ್ತ್ರ, ಪಂಚತಂತ್ರ, ಒಂದಲ್ಲ, ಎರಡಲ್ಲ ಆ ಗಣಿಯಿಂದ ಕನ್ನಡವು ಅನೇಕ ವಿಷಯಗಳನ್ನು ಆಗೆದೂ ತಂದಿದೆ. ಹೀಗೆ ಸಂಸ್ಕೃತವನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಂಡಷ್ಟೂ ಕನ್ನಡ ಭಾಷೆ ಹಾಗೂ ಸಾಹಿತ್ಯಗಳು ನವಂಗೆ ಇನ್ನಿಷ್ಟು ನಿಚ್ಚಳವಾಗುತ್ತ ನಡೆಯುತ್ತವೆ. ಕನ್ನಡ ಭಾಷೆ-ಸಾಹಿತ್ಯಗಳ ಅಭ್ಯಾಸಕ್ಕೆ ಸಂಸ್ಕೃತದ ಅಭ್ಯಾಸ ಈ ದೃಷ್ಟಿಯಿಂದ ಪೋಷಕವಾಗಿದೆ.

(7) ಉಳಿದ ಪ್ರಾಚೀನ ಭಾಷೆಗಳು

ಸಂಸ್ಕೃತದ ಸ್ಥಾನವನ್ನು ಕುರಿತು ಮೇಲೆ ವಿವರವಾಗಿ ಚರ್ಚಿಸಲಾಗಿದೆ. ಆದರೆ ಈ ಸಂದರ್ಭದಲ್ಲಿ ನಾವು ಇನ್ನೊಂದಂ ಮಾತನ್ನು ನೆನೆಯಂವುದಂ ಅಗತ್ಯ. ಸಾಂಸ್ಕೃತಿಕ—ಧಾರ್ಮಿಕ ಭಾಷೆಯಾಗಿ ಅನೇಕರು ಸಂಸ್ಕೃತವನ್ನು ಅಭ್ಯಸಿಸಿದಂತೆ ಕೆಲವರು ಫಾರಸಿ ಅರೇಬಿಕ್ ಭಾಷೆಗಳನ್ನೂ ಹಲವರು ಗ್ರೀಕ್–ಲ್ಯಾಟಿನ್, ಹೀಬ್ರೂ ಭಾಷೆಗಳನ್ನು ಕಲಿಯಲು ಇಚ್ಛಿಪಡಬಹುದು. ಈ ಮೊದಲಂ ವಿಂಗಡಿಸಿ ಕಂಡುಕೊಂಡಂತೆ ವ್ಯಾವಹಾರಿಕ ಇಲ್ಲವೆ ಸಾಂಸ್ಕೃತಿಕ ಕಾರಣಗಳಿಂದಾಗಿ ಕೆಲವರು ಹಿಂದಿ–ತೆಲುಗು–ತಮಿಳು–ಮಲೆಯಾಳಂ–ಮರಾಠಿ ಮೊದಲಾದ ಭಾಷೆಗಳಲ್ಲಿ ಒಂದಂ ಭಾಷೆಯನ್ನು ಕಲಿಯಲಂ ಇಚ್ಛಿ ಪಡಬಹುದು. ನಮ್ಮ ವಿಶಾಲ ದೇಶದಲ್ಲಿ ಇದೆಲ್ಲ ವೈವಿಧ್ಯಕ್ಕೂ ಅವಕಾಶವಿರಬೇಕಂ. ಸಂಸ್ಕೃತವು ಪಾಲಿ, ಅರ್ಧ ಮಾಗಧಿ, ಮುಂದೆ ಹಿಂದೀ, ಬಂಗಾಲಿ ಮೊದಲಾದ ಭಾಷೆಗಳ ರೂಪಗಳನ್ನು ತಳೆದಂತೆ ಲ್ಯಾಟಿನ್ ಭಾಷೆಯು ಇಟ್ಯಾಲಿಯನ್ ಆಗಿ, ಹಾಗೂ ಪ್ರಾಚೀನ ಅರೇಬಿಕ್ ಭಾಷೆಯಂ ಆಧುನಿಕ ಅರೇಬಿಕ್ ಆಗಿ, ಪ್ರಾಚೀನ ಫಾರಸಿ ಭಾಷೆಯು ಪರ್ಸಿಯನ್ ಆಗಿ ವಿಕಾಸಗೊಂಡಿದೆ. ಆದರೆ ಸಂಸ್ಕೃತದ ಒಂದು ಗ್ರಾಂಥಿಕ ರೂಪಕ್ಕೆ ಸ್ಥಿರತೆ ಬಂದಂತೆ ಮಧ್ಯಕಾಲೀನ ಲ್ಯಾಟಿನ್ ಹಾಗೂ ಫಾರಸಿ ಭಾಷೆಗಳಿಗೂ ಒಂದು ಗ್ರಾಂಥಿಕ ಪರಂಪರೆಯ ಸ್ಥಿರತೆ ಬಂದಿದೆ. ಲ್ಯಾಟಿನ್–ಅರೇಬಿಕ್ ಭಾಷೆಗಳಲ್ಲಿಯ ಹಲವಾರಂ ನಿರ್ದಿಷ್ಟ, ಪ್ರಾರ್ಥನೆಗಳಿಂ ಇನ್ನೂ ರೂಢಿಯಲ್ಲಿವೆ. ಅರೇಬಿಕ್–ಫಾರಸಿ ಅಭ್ಯಾಸ ನಡೆದಿರಂವಂತೆ ಹಲವು ಕಾಲೇಜುಗಳಲ್ಲಿಯೂ ಓರಿಯಾಲಾಜಿಕಲ್ ಸೆಮಿನರಿಗಳಲ್ಲಿಯೂ ಮಧ್ಯಕಾಲೀನ ಲ್ಯಾಟಿನ್ ಅಭ್ಯಾಸ ನಡೆಯುತ್ತಿದೆ.

2. ಸಮಿತಿಯ ಸಲಹೆಗಳು

ಭಾಷಾ ಶಿಕ್ಷಣ ತತ್ವಗಳನ್ನನುಸರಿಸಿ ಭಾಷೆಗಳ ಮಹತ್ವದ ಪ್ರಮಾಣ, ಇಂದಿನ ಕನ್ನಡ ಜನತೆಯ ಪರಿಸ್ಥಿತಿ, ಅಲ್ಪಸಂಖ್ಯಾತರ ಸಮಸ್ಯೆಗಳು, ವಿಕಸನಪೂರ್ಣ ವಿದ್ಯಾರ್ಜನೆಯ ಕ್ರಮ : ಎಲ್ಲ ವಿಷಯಗಳನ್ನು ಕುರಿತು ಆಮಂತ್ರಿತರೊಡನೆ ಹಾಗೂ ಸಾರ್ವಜನಿಕವಾಗಿ ನಡೆದ ಚರ್ಚೆಗಳನ್ನು ಲಕ್ಷಿಸಿ, ಸಮಿತಿಯಂ ಸದಸ್ಯರ ವಿಚಾರಗಳನ್ನು ವಂಥಿಸಿ ಈ ವರದಿಯಲ್ಲಿ ಸೂಚಿಸಿರುವ ಅಭಿಪ್ರಾಯಂಗಳನ್ನು ಸರ್ವಾನುಮತದಿಂದ ಸಮಿತಿಯು ಅಂಗೀಕರಿಸಿದೆ.

(1) 1981-82ನೆಯ ಶೈಕ್ಷಣಿಕ ವರ್ಷದಿಂದಲೇ ಕನ್ನಡ ಭಾಷೆಯನ್ನು ಏಕೈಕ ಪ್ರಥಮಭಾಷೆಯನ್ನಾಗಿ ಮಾಡಿ ಆದರ ಅಭ್ಯಾಸ ಕಡ್ಡಾಯವಾಗಬೇಕು. ಅದಕ್ಕೆ 150 ಅಂಕಗಳಿರಬೇಕು. (ಈ ವಿಷಯದಲ್ಲಿ ಒಂದಂ ತಾತ್ಪರ್ತಿಕ ವ್ಯವಸ್ಥೆಯು ಅವಶ್ಯವಾದ್ದರಿಂದ ಅದನ್ನು ಮುಂದೆ ಒಂದಂ ಟಿಪ್ಪಣಿಯಲ್ಲಿ ವಿವರಿಸಲಾಗಿದೆ.)

(2) ತಮಿಳಂ, ತೆಲುಗಂ, ಮಲೆಯಾಳಂ, ಮರಾಠಿ, ಗುಜರಾತಿ, ಉರ್ದು, ಹಿಂದೀ—ಈ ಆಧುನಿಕ ಭಾಷೆಗಳಲ್ಲಿ ಒಂದು :

ಇಲ್ಲವೆ

ಇಂಗ್ಲಿಷು

ಇಲ್ಲವೆ

ಸಂಸ್ಕೃತ, ಅರೇಬಿಕ, ಪರ್ಸಿಯನ್, ಲ್ಯಾಟಿನ್, ಗ್ರೀಕ್—ಈ ಪ್ರಾಚೀನ ಭಾಷೆಗಳಲ್ಲಿ ಒಂದು :

(3) ನಿರ್ದಿಷ್ಟಗೊಳಿಸಿದ ಪ್ರಥಮಭಾಷೆಯನ್ನೂ ಹಾಗೂ ಆಯ್ದುಕೊಂಡ ದ್ವಿತೀಯ ಭಾಷೆಯನ್ನೂ ಬಿಟ್ಟು ಇನ್ನಾವುದಾದರೊಂದು ಭಾಷೆಯನ್ನು ತೃತೀಯ ಭಾಷೆಯಾಗಿ ಆಯ್ದುಕೊಳ್ಳಬೇಕು. ಈ ಭಾಷೆಯನ್ನು ಪಟ್ಟಿ (2) ರಲ್ಲಿ ಕಾಣಿಸಿರುವ ಭಾಷೆಗಳ ಪಟ್ಟಿಯಿಂದ ಆಯ್ದುಕೊಳ್ಳಬೇಕು.

(4) ತೃತೀಯ ಭಾಷೆಗೆ 50 ಅಂಕಗಳಿರಬೇಕು. ತೃತೀಯ ಭಾಷೆಯೂ ಪರೀಕ್ಷೆಗೆ ಕಡ್ಡಾಯದ ವಿಷಯವಾಗಬೇಕು.

(5) ದ್ವಿತೀಯ ಮತ್ತು ತೃತೀಯ ಭಾಷೆಯ ಗುಂಪುಗಳಲ್ಲಿ ಎಲ್ಲ ಭಾಷಾವರ್ಗಗಳೂ ಸೇರ್ಪಡೆಯಾಗುತ್ತವೆ. ಅಭ್ಯಸಿಸಲಿರುವ ಭಾಷೆಯು ಅರ್ವಾಚೀನವಾಗಲಿ, ಪ್ರಾಚೀನವಾಗಲಿ, ಆಯಾ ಹಂತದಲ್ಲಿ ಉಳಿದ ಭಾಷೆಗಳ ಹಾಗೂ ಭಾಷಾವರ್ಗಗಳ ವಂಟ್ಟಕ್ಕೆ ಅದರ ವಂಟ್ಟವೂ ಸರಿಸಮವಾಗಿರಬೇಕು.

(6) ಮೇಲೆ ಕಾಣಿಸಿದ ಐದು ಸಲಹೆಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಅನ್ವಯಿಸುವುವು. ಆದರೆ ಕಡ್ಡಾಯದ ಪರೀಕ್ಷಾ ವಿಷಯವಾಗಿ ವಿದ್ಯಾರ್ಥಿಗಳಿಗೆ ಭಾರವಾಗದೆ ಪ್ರತಿಭಾವಂತ ವಿದ್ಯಾರ್ಥಿಗಳ ಸುಪ್ತ ಚೇತನವನ್ನು ಉದ್ದೀಪಿಸುವಂತಹ ಒಂದು ಆರೋಹಣ ಕ್ರಮವೂ ನವ ಜನಾಂಗದ ದೃಷ್ಟಿಯಿಂದ ಸ್ವಾಗತಾರ್ಹವೆನಿಸಿದೆ. ಕಡ್ಡಾಯವಿದ್ದ ಭಾಷಾ ವಿಷಯಗಳು ಈಗಿರುವಂತೆಯೇ ಅಂದರೆ (ಪ್ರಥಮಭಾಷೆಗೆ 150, ದ್ವಿತೀಯ ಭಾಷೆಗೆ 100 ತೃತೀಯ ಭಾಷೆಗೆ 50) ಅಂಕಗಳು ಉಳಿಯಲಿ. ಆದರೆ ಇಚ್ಛಿಪಟ್ಟವರಿಗೆ ಹೆಚ್ಚಿನ ಪರಿಶ್ರಮ ಪಡುವ ಸುಸಂಧಿ ದೊರೆಯುವಂತಿರಬೇಕು. ಇಂತಹ ಕ್ರಮವು ವಿದ್ಯಾರ್ಥಿಗಳ ಅಭಿವೃದ್ಧಿಗೆ ಕಾರಣವಾಗುವುದರಲ್ಲಿ ಸಂಶಯವಿಲ್ಲ. ಅಭ್ಯಾಸದಲ್ಲಿ ಹೆಚ್ಚಿನ ಆಸ್ಥೆಯನ್ನು ವಹಿಸಲು ಅದು ಅವರನ್ನು ಪ್ರೇರಿಸುತ್ತದೆ. ಮುಂದೆ ಸಾಧ್ಯವಾಗದ ಒಂದು ವಿಷಯದ ಅಭ್ಯಾಸವನ್ನು ಎಸ್.ಎಸ್.ಎಲ್.ಸಿ. ವರ್ಷದಲ್ಲಿಯೇ ಕೊನೆಗೊಳಿಸಲು ಅದು ಅವರನ್ನು ಹುರಿದುಂಬಿಸುತ್ತದೆ.

ಆ ಕ್ರಮವು ಯಾವುದೆಂದರೆ, ಒಂದು Subject Examination ಇಲ್ಲವೆ ಒಂದು ವಿಶಿಷ್ಟ ವಿಷಯ ಪರೀಕ್ಷೆ. ಕನ್ನಡ, ಇಂಗ್ಲಿಷು, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಹಿಂದೀ, ಉರ್ದು, ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್—ಇವುಗಳಲ್ಲಿ ಒಂದು ಭಾಷೆಯನ್ನೋ ಅಥವಾ ಅವಕಾಶವಿರುವ ಇನ್ನಾವುದಾದರೂ ಒಂದು ವಿಷಯವನ್ನೋ ಆಯ್ದುಕೊಂಡು ವಿದ್ಯಾರ್ಥಿಗಳು ತಮಗೆ ತಾವೇ ಅಭ್ಯಸಿಸಬಹುದು. ಅವುಗಳಿಗಾಗಿ ಶಾಲೆಗಳಲ್ಲಿ ಯಾವ ಬೋಧನಾ ಸೌಲಭ್ಯಗಳೂ ಇರುವದಿಲ್ಲ. ಹೀಗೆ ಹೆಚ್ಚಿನ ವಿಷಯವನ್ನು ಆಯ್ಕೆಮಾಡಿಕೊಂಡವರು ಅದನ್ನು ಸ್ವತಂತ್ರವಾಗಿ ಅಭ್ಯಸಿಸಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಇದು ಸ್ವಸಂತೋಷದ ಪರೀಕ್ಷೆ.

ಈ ವಿಷಯದಲ್ಲಿ ಪರೀಕ್ಷೆಯನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆ ಜೊತೆಯಲ್ಲಿಯೇ ವ್ಯವಸ್ಥೆ ಮಾಡಬಹುದು. ಆಡಳಿತ ದೃಷ್ಟಿಯಿಂದ ಇದು ಸೂಕ್ತ. ಇಲ್ಲವೇ ಆ ಪರೀಕ್ಷೆ ಆದ ಒಂದು ತಿಂಗಳಲ್ಲಿ ನಡೆಸಬಹುದು.

ವಿದ್ಯಾರ್ಥಿಗಳು ಈ ವಿಷಯದಲ್ಲಿ ಗಳಿಸುವ ಅಂಕಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಆದಕ್ಕೆ ಪ್ರತ್ಯೇಕವಾಗಿಯೇ ಅರ್ಹತಾ ಪತ್ರ ವಿತರಣೆಯ ವ್ಯವಸ್ಥೆ ಆಗಬೇಕು.

ಭಾಷಾ ವಿಷಯಗಳಲ್ಲದೆ, ಚಿತ್ರಕಲೆ, ಸಂಗೀತ, ವೃತ್ತಿ ಶಿಕ್ಷಣ, ನೃತ್ಯ, ಮುಂತಾದ ಇನ್ನಿತರ ವಿಷಯಗಳನ್ನೂ ಸೇರಿಸಬಹುದು.

ಈ ವಿಷಯಗಳಿಗೆ ಸಂಬಂಧಪಟ್ಟಂತೆ ಆಗತ್ಯವಾದ ಪಠ್ಯವಸ್ತು ಮತ್ತು ಪರೀಕ್ಷಾಕ್ರಮ ವನ್ನು ತಯಾರಿಸುವ ಜವಾಬ್ದಾರಿಯನ್ನು ತಜ್ಞರ ಸಮಿತಿಗೆ ವಹಿಸಬೇಕು.

ಸಲಹೆ (1)ಕ್ಕೆ ಟಿಪ್ಪಣಿ :

(ಅ) 1981–82 ರಿಂದಲೇ ಕನ್ನಡವು ಏಕೈಕ ಪ್ರಥಮಭಾಷೆಯಿರಬೇಕೆಂದು ಹೇಳಿದೆಯಷ್ಟೆ. ಕನ್ನಡ ಮಾತೃಭಾಷೆಯಾದವರಿಗೆ ಅಲ್ಲದೆ, ಅದನ್ನು "ದ್ವಿತೀಯ ಮಾತೃಭಾಷೆ" ಯೆಂದು ಕರ್ನಾಟಕದಲ್ಲಿ ನೆಲಸಿ ಸ್ವೀಕರಿಸಿದವರಿಗೆ ಇದರಿಂದ ಯಾವ ಸಮಸ್ಯೆಯೂ ಉದ್ಭವಿಸುವುದಿಲ್ಲ. ಆದರೆ ಕರ್ನಾಟಕದಲ್ಲಿ ನೆಲಸಿದ್ದರೂ ಕನ್ನಡವನ್ನು ಕಲಿಯುವ ಏರ್ಪಾಟು ಮಾಡಿಕೊಳ್ಳದೆ ಇರುವ ಅನೇಕ ಕನ್ನಡೇತರ ಕುಟುಂಬಗಳು ಕರ್ನಾಟಕದಲ್ಲಿವೆ. ಇವರ ಸಲುವಾಗಿ ಸರ್ಕಾರದವರಾಗಲಿ, ಖಾಸಗಿ ಸಂಸ್ಥೆಗಳಾಗಲಿ ತೆರೆದ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುವ ವ್ಯವಸ್ಥೆ ಇರಬೇಕೆಂದು ಅಂಗೀಕೃತ ವಾಗಿದೆ. ಆದರೆ ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇದೀಗ ಅದನ್ನು ಪ್ರಾರಂಭಿಸ ಬೇಕಾಗಿದೆ. 1981–82 ರಿಂದ ಪ್ರಾಥಮಿಕ 3ನೇ ಇಯತ್ತೆಯಲ್ಲಿ ಅದನ್ನು ಪ್ರಾರಂಭಿ ಸಿದರೆ, 3ನೆಯ ಇಯತ್ತೆಯನ್ನು ಮುಗಿಸಿ, 4, 5, 6, 7, ಇವುಗಳನೂ ದಾಟಬೇಕಾದರೆ 1981-82 ರಲ್ಲಿ ಕನ್ನಡವನ್ನು ಪ್ರಾರಂಭಿಸಿದ ವಿದ್ಯಾರ್ಥಿಗಳಿಗೆ ಹಂತಹಂತದಲ್ಲಿ ಅದನ್ನು ಕಲಿಯಲು 5 ವರ್ಷಗಳು ಬೇಕಾಗುತ್ತವೆ. ಕಾರಣ ಸಮಿತಿಯು ನಿರ್ಧಾರದಂತೆ ಕನ್ನಡೇತರ ವಿದ್ಯಾರ್ಥಿಗಳಿಗೂ 1981–82 ರಿಂದ 150 ಅಂಕಗಳ ಕನ್ನಡವನ್ನು 8ನೆಯ ಇಯತ್ತೆಯಿಂದ ಕಡ್ಡಾಯದ ವಿಷಯ ಹಾಗೂ ಪ್ರಥಮಭಾಷೆಯನ್ನಾಗಿ ಮಾಡಿದರೆ ಅವರಿಗೆ ತೊಂದರೆ ಯುಂಟಾಗುತ್ತದೆ. ಆದುದರಿಂದ ಅವರಿಗಾಗುವ ಈ ತೊಂದರೆಯನ್ನು ನಿವಾರಿಸಲು ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಸಮಿತಿಯು ಈ ಕೆಳಗಿನ ವ್ಯವಸ್ಥೆಯನ್ನು ಸಲಹೆ ಮಾಡಿದೆ. ಈ ವ್ಯವಸ್ಥೆಯ ಪ್ರಕಾರ ಸರ್ಕಾರಿ ಶಾಲೆಗಳಲ್ಲಾಗಲಿ, ಖಾಸಗಿ ಶಾಲೆ ಗಳಲ್ಲಾಗಲೀ, ಕನ್ನಡೇತರ ವಿದ್ಯಾರ್ಥಿಗಳು 1981-82 ರ ಶೈಕ್ಷಣಿಕ ವರ್ಷದಿಂದ ಕನ್ನಡವನ್ನು ಕಡ್ಡಾಯದ ವಿಷಯವಾಗಿ ಕಲಿಯಲು ಪ್ರಾರಂಭಿಸುತ್ತಾರೆ. ಹಂತಗಳನ್ನು ಈ ರೀತಿಯಾಗಿ ಏರ್ಪಡಿಸಲಾಗುವುದು.

1981-82	ಕನ್ನಡ ಕಡ್ಡಾಯದ ವಿಷಯ	3ನೆಯ ಇಯತ್ತೆ
1982-83	,,	4ನೆಯ ಇಯತ್ತೆ
1983-84	,,	5ನೆಯ ಇಯತ್ತೆ
1984-85	,,	6ನೆಯ ಇಯತ್ತೆ
1985-86	,,	7ನೆಯ ಇಯತ್ತೆ
1986-87 ಹಾಗೂ ಮುಂದೆ	,,	8ನೆಯ ಇಯತ್ತೆ

ಹೀಗೆ ಸಾಗುವದರಿಂದ ವ್ಯವಸ್ಥಾಪಕರಿಗೆ ವ್ಯವಸ್ಥೆಮಾಡಲು ಯೋಗ್ಯ ಸಮಯ ದೊರೆಯುತ್ತದೆ. ಕನ್ನಡೇತರ ಮಕ್ಕಳಿಗೆ ಉಳಿದ ಮಕ್ಕಳಂತೆ ಕನ್ನಡವನ್ನು ಕ್ರಮೇಣ ಚಿನ್ನಾಗಿ ಅರಿತುಕೊಂಡು ನಿರೀಕ್ಷಿಸಿದ ಪುಟ್ಟವನ್ನು ಸುಲಭವಾಗಿ ತಲುಪಲು ವೇಳೆ ಹಾಗೂ ಶಿಕ್ಷಣ ದೊರೆಯುತ್ತದೆ. ಕರ್ನಾಟಕ ರಾಜ್ಯದಲ್ಲಿ 10 ವರ್ಷ ನೆಲಸಿದ ಪುನೆತನಗಳ ಮಕ್ಕಳು ಕನ್ನಡ ವನ್ನು ಈ ರೀತಿಯಾಗಿ ಕಡ್ಡಾಯದ ವಿಷಯವನ್ನಾಗಿ ಕಲಿಯಬೇಕು.

(ಆ) ಮೇಲೆ ಉಲ್ಲೇಖಿಸಿದ ಕಾರಣದ ಮೂಲಕ 1986–87ನೆಯ ಶೈಕ್ಷಣಿಕ ವರ್ಷದಲ್ಲಿ ಕನ್ನಡೇತರ ಮಕ್ಕಳಿಗೂ 8ನೆಯ ಇಯತ್ತೆಯಲ್ಲಿ 150 ಗುಣಾಂಕಗಳ ಕನ್ನಡ ಭಾಷಾ ವಿಷಯವನ್ನು ಅಭ್ಯಸಿಸುವ ಚೈತನ್ಯ ಬರುವವರೆಗೆ ಅವರು ಕನ್ನಡ ಭಾಷಾ ವಿಷಯ ವನ್ನು ಕಡ್ಡಾಯವಾಗಿ 3ನೆಯ ಇಯತ್ತೆಯಿಂದ 7ನೆಯ ಇಯತ್ತೆಯವರೆಗೆ ಕಲಿತು ಮುಂದೂ ವರಿಯುತ್ತಾರೆ. ಈ ಅವಧಿ ಮುಗಿಯುವವರೆಗೆ—ಅಂದರೆ 1981–82, 1982–83, 1983–84, 1984–85 ಹಾಗೂ 1985–86—ಈ ಐದು ವರ್ಷಗಳಲ್ಲಿ 8ನೆಯ ಇಯತ್ತೆಯಲ್ಲಿ ಕನ್ನಡೇತರ ಮಕ್ಕಳು 150 ಗುಣಾಂಕಗಳ ಮಟ್ಟದ ತಮ್ಮ ಮಾತೃಭಾಷೆ ಯನ್ನು ಹಾಗೂ 100 ಅಂಕಗಳ ದ್ವಿತೀಯ ಭಾಷೆ ಇಲ್ಲವೆ 50 ಗುಣಾಂಕಗಳ ತೃತೀಯ ಭಾಷೆಯಾದ ಕನ್ನಡವನ್ನೂ ಅಭ್ಯಸಿಸಬೇಕಾಗುತ್ತದೆ. ಆದರೆ 1986–87ರಿಂದ ಮಾತ್ರ ಅವರಿಗೆ ಕನ್ನಡ 150 ಗುಣಾಂಕಗಳಿದ್ದ ಕಡ್ಡಾಯದ ಭಾಷೆಯಾಗುತ್ತದೆ. ಆಗ 100 ಗುಣಾಂಕ (ದ್ವಿತೀಯ) ಇಲ್ಲವೆ 50 ಗುಣಾಂಕಗಳುಳ್ಳ (ತೃತೀಯ) ಭಾಷೆಯಾಗಿ ಅವರು ತಮ್ಮ ಮಾತೃಭಾಷೆಯನ್ನು ಕಲಿಯಬಹುದು.

(ಇ) ಇದು ಅಲ್ಪಸಂಖ್ಯಾತರ ಮಾತೃಭಾಷೆಗಳ ವಿಷಯವಾಯಿತು. ಸಂಸ್ಕೃತ ಹಾಗೂ ಇನ್ನುಳಿದ ಪ್ರಾಚೀನ ಭಾಷೆಗಳಿಗೆ 1981–82ನೆಯ ಶೈಕ್ಷಣಿಕ ವರ್ಷದಿಂದ ಸಹ ಪ್ರಥಮ ಭಾಷೆಯ ಸ್ಥಾನವಿರುವುದಿಲ್ಲ. ಅವುಗಳನ್ನು ದ್ವಿತೀಯ (100 ಅಂಕಗಳು) ಇಲ್ಲವೆ ತೃತೀಯ (50 ಅಂಕಗಳು) ಭಾಷೆಗಳೆಂದು ಆಯ್ದುಕೊಳ್ಳಬಹುದು. ಸಂಸ್ಕೃತವು ದ್ವಿತೀಯ ಮತ್ತು ತೃತೀಯ ಭಾಷೆಗಳ ಗುಂಪಿನಲ್ಲಿರುವುದರಿಂದ ಆ ಗುಂಪಿನಲ್ಲಿರುವ ಇತರ ಭಾಷೆಗಳ ಮಟ್ಟಕ್ಕೆ ಅದರ ಪಠ್ಯಕ್ರಮ ಸರಿಸಮವಾಗಬೇಕಾಗಿರುತ್ತದೆ.

(ಈ) ದ್ವಿತೀಯ ಭಾಷೆಗಳ ಪಟ್ಟಿಯಲ್ಲಿ ಕನ್ನಡಕ್ಕೆ ಹಾಗೂ ಇಂಗ್ಲಿಷಿಗೆ ಸ್ಥಾನವಿರುವುದು. 'ಇ' ಯಲ್ಲಿ ಹೇಳಿದಂತೆ ಸಂಸ್ಕೃತ ಹಾಗೂ ಉಳಿದ ಪ್ರಾಚೀನ ಭಾಷೆಗಳಿಗೂ ಇಲ್ಲಿ ಸ್ಥಾನ ವಿರುವುದು. ಇಲ್ಲಿ ಆಯ್ದುಕೊಂಡ ಪ್ರತಿಯೊಂದು ಭಾಷೆಗೂ 100 ಅಂಕಗಳಿರುವವು.

(ಉ) ತೃತೀಯ ಭಾಷೆಗಳ ಪಟ್ಟಿಯಲ್ಲಿ ಕನ್ನಡ, ಸಂಸ್ಕೃತ ಮತ್ತು ಹಿಂದೀ ಭಾಷೆಗಳು ಇರುತ್ತವೆ.

ಕನ್ನಡ ಶಿಕ್ಷಕರನ್ನು ಇಲ್ಲಿಯವರೆಗೆ ನೇಮಿಸದಿರುವ ಮೂಲಕ ಈ ಮೊದಲು ಹೇಳಿದಂತೆ ವಿದ್ಯಾರ್ಥಿಗಳು ಪ್ರೌಢಶಾಲೆಗಳಲ್ಲಿ 150 ಅಂಕಗಳ ಕನ್ನಡ ಭಾಷೆಯನ್ನು 8ನೆಯ ಇಯತ್ತೆಯಲ್ಲಿ ಅಭ್ಯಸಿಸಲು 1986–87ರವರೆಗೆ ಅರ್ಹರಾಗಿರುವುದಿಲ್ಲ. 1981–82 ರಿಂದ 1985–86ನೆಯ ವರ್ಷ ಮುಗಿಯುವವರೆಗೆ (ಅಂದರೆ 3ನೆಯ ಇಯತ್ತೆಯಲ್ಲಿ ಅಭ್ಯಸಿಸಲು 1981–82ರಲ್ಲಿ ಪ್ರಾರಂಭಿಸಿದ ವಿದ್ಯಾರ್ಥಿಯ 1985–86ರಲ್ಲಿ 7ನೆಯ) ಸರ್ಕಾರ ಈಗಾಗಲೇ ನಿರ್ಧರಿಸಿ ಪಠ್ಯಕ್ರಮದಲ್ಲಿ ಪ್ರತಿವರ್ಷ ಕನ್ನಡ ಭಾಷೆಯ ಶಿಕ್ಷಣಕ್ಕಾಗಿ ಏರ್ಪಾಟು ಮಾಡಿದ ಪ್ರಕಾರ ಪ್ರಾಥಮಿಕ ಮೂರನೆಯ ತರಗತಿಯಿಂದ ಕ್ರಮಶಃ ಕನ್ನಡವನ್ನು ಕಲಿಸಲು ಬೇಕಾದ ಸೌಲಭ್ಯಗಳನ್ನು 1981–82ರಿಂದ ಒದಗಿಸಲೇಬೇಕು. ಈ ಕಾರ್ಯವನ್ನು ಕುರಿತು ಸರ್ಕಾರ ಒಡನೆ ಕಾರ್ಯಪ್ರವೃತ್ತರಾಗಲೇ ಬೇಕು.

11(3) (ಅ) ಕೆಲವು ನಕ್ಷೆಗಳು : ಮುಂಖ್ಯ ಸಲಹೆಗಳ ಪ್ರಕಾರ 1981–82 ರಿಂ
ಹಾಗೂ ಮುಂದೆ ಎಲ್ಲ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ.

ಭಾಷಾ ಶಿಕ್ಷಣ ವ್ಯವಸ್ಥೆ

ಪ್ರಥಮಭಾಷೆ	ದ್ವಿತೀಯಭಾಷೆ	ತೃತೀಯಭಾಷೆ
ಕನ್ನಡ ಏಕೈಕ ಕಡ್ಡಾಯದ ಭಾಷೆ ಅಂಕಗಳು 150	ಅಂಕಗಳು 100 ಕೆಳಗೆ ಕಾಣಿಸಿದ ಭಾಷೆಗಳಲ್ಲಿ ಒಂದು (ಅ) ಆಧುನಿಕ ಭಾರತೀಯ ಭಾಷೆಗಳು : ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಹಿಂದೀ, ಉರ್ದು. (ಆ) ಇಂಗ್ಲಿಷು. (ಇ) ಪ್ರಾಚೀನ ಭಾಷೆಗಳು : ಸಂಸ್ಕೃತ, ಅರೇಬಿಕ್, ಪರ್ಸಿಯನ್, ಲ್ಯಾಟಿನ್, ಗ್ರೀಕ್.	ಅಂಕಗಳು : 50 ದ್ವಿತೀಯಭಾಷೆಯೆಂದು ಆಯ್ದುಕೊಂಡ ಭಾಷೆಯನ್ನು ಬಿಟ್ಟು ಉಳಿದ ಭಾಷೆಗಳಲ್ಲಿ ಒಂದು : ದ್ವಿತೀಯಭಾಷೆಯ (ಅ), (ಆ) ಮತ್ತು (ಇ) ವರ್ಗಗಳೊಳಗಿಂದ ಆಯ್ದುಕೊಳ್ಳಬಹುದು. ತೃತೀಯಭಾಷೆಯೂ ಕಡ್ಡಾಯ ಪರೀಕ್ಷಾ ಭಾಷೆ.

11(3) (ಅ) : ವಿಶಿಷ್ಟ ವಿಷಯ ಪರೀಕ್ಷಾ ವ್ಯವಸ್ಥೆ

ಎಸ್.ಎಸ್.ಎಲ್.ಸಿ. ಪರೀಕ್ಷೆ ನಂತರದ ಪರೀಕ್ಷೆ ಅಥವಾ ಜೊತೆಯಲ್ಲಿ ನಡೆಯುವ ಪರೀಕ್ಷೆ.		1981–82 ರಿಂದ ಮುಂದೆ ಎಸ್.ಎಸ್.ಎಲ್.ಸಿ. ವರ್ಷದಲ್ಲಿಯೇ ಅಭ್ಯಾಸ.
ಶಾಲೆಯಲ್ಲಿ ಬೋಧನೆ ಇಲ್ಲ	ಮೇಲಿನ ಮೂರೂ ಅಂಕಣಗಳಲ್ಲಿಯೂ ಯಾವುದೇ ಒಂದು ಭಾಷೆ ಅಥವಾ ವಿಶೇಷ ವಿಷಯವನ್ನು ಅಭ್ಯಸಿಸಿ ಪರೀಕ್ಷೆ ತೆಗೆದು ಕೊಳ್ಳಬಹುದು.	ಪ್ರತ್ಯೇಕ ಅರ್ಹತಾಪತ್ರ
ಸ್ವತಂತ್ರ ಅಭ್ಯಾಸ	ಅಂಕಗಳು : 100	ಸುಪ್ತ ಚೇತನದ ಉದ್ದೀಪನವೇ ಗುರಿ.
	ಎಸ್. ಎಸ್. ಎಲ್. ಸಿ. ಗಿಂತ ತುಸು ಹೆಚ್ಚಿನ ವಯಸ್ಸು.	

1981–82 ರಿಂದ 1985–86 ರ ವರೆಗೆ ಗ್ರಾಹ್ಯವೆಂದು ಸೂಚಿಸಿದ ತಾತ್ಪೂರ್ತಿಕ ವ್ಯವಸ್ಥೆಯ ಎರಡು ನಕ್ಷೆಗಳು

ಕನ್ನಡೇತರ ವಿದ್ಯಾರ್ಥಿಗಳಿಗಾಗಿ

ಪ್ರಥಮಭಾಷೆ	ದ್ವಿತೀಯಭಾಷೆ	ತೃತೀಯಭಾಷೆ
ಕನ್ನಡ : ಅಂಕಗಳು—150 (ಕನ್ನಡ ಶಿಕ್ಷಕರಿಲ್ಲದ ಮೂಲಕ ಪ್ರಾಥಮಿಕ 3ನೆಯ ಇಯತ್ತೆಯಿಂದ ಕನ್ನಡೇತರ ವಿದ್ಯಾರ್ಥಿಗಳು ಕನ್ನಡ ಕಲಿತಿಲ್ಲ. ಕಾರಣ 1981-82 ರಿಂದ ಕನ್ನಡವನ್ನು ಕಡ್ಡಾಯವಾಗಿ 3ನೆಯ ಇಯತ್ತೆಯಿಂದ ಕಲಿಯಲು ಪ್ರಾರಂಭಿಸಿದ ವಿದ್ಯಾರ್ಥಿಗಳು 1986–87 ರಲ್ಲಿ 8ನೆಯ ಇಯತ್ತೆಯಲ್ಲಿ ಕನ್ನಡವನ್ನು ಪ್ರಥಮ ಭಾಷೆಯೆಂದು (150 ಅಂಕಗಳು) ತೆಗೆದು ಕೊಳ್ಳುತ್ತಾರೆ.	ಅಂಕಗಳು—100 ಕನ್ನಡ ಇಲ್ಲವೆ ಇಂಗ್ಲಿಷು ಇಲ್ಲವೆ ಒಂದು ಪ್ರಾಚೀನ ಭಾಷೆ (ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್)	ಅಂಕಗಳು—50 ಕನ್ನಡ ಇಲ್ಲವೆ ಹಿಂದೀ ಇಲ್ಲವೆ ಒಂದು ಪ್ರಾಚೀನ ಭಾಷೆ (ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್)
ಆಲ್ಲಿಯವರೆಗೆ ತಮ್ಮ ಮಾತೃಭಾಷೆಯನ್ನು (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾತಿ, ಉರ್ದು, ಹಿಂದೀ) 150 ಅಂಕಗಳ ವಿಷಯವನ್ನಾಗಿ ತೆಗೆದುಕೊಳ್ಳುತ್ತಾರೆ. ಹಾಗೂ ಕನ್ನಡವನ್ನು ಪರ್ಷಾನು ವರ್ಷ ಕಲಿತು 1986-87ರಲ್ಲಿ ಪ್ರಥಮ ಭಾಷೆಯಾಗಿಸಿಕೊಳ್ಳುತ್ತಾರೆ. 1986–87ರ ವರೆಗೆ ಕನ್ನಡೇತರ ವಿದ್ಯಾರ್ಥಿಗಳು 4ನೆಯ ಇಯತ್ತೆಯಲ್ಲಿ ಕನ್ನಡವನ್ನು ದ್ವಿತೀಯ ಇಲ್ಲವೆ ತೃತೀಯ ಭಾಷೆಯಾಗಿ ಕಲಿಯುತ್ತಾರೆ.		ಕನ್ನಡವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳದಪರಿಗೆ ಅದು ತೃತೀಯ ಭಾಷೆಯಾಗಿ ಕಡ್ಡಾಯದ ಪರೀಕ್ಷಾ ವಿಷಯವಾಗಿರುತ್ತದೆ.

ಕನ್ನಡ ವಿದ್ಯಾರ್ಥಿಗಳಿಗಾಗಿ 1981-86ರ ವರೆಗೆ ಮಾಡಿದ ಭಾಷಾಭ್ಯಾಸ ವ್ಯವಸ್ಥೆ

ಪ್ರಥಮಭಾಷೆ	ದ್ವಿತೀಯಭಾಷೆ	ತೃತೀಯಭಾಷೆ
ಕನ್ನಡ ಏಕೈಕ ಕಡ್ಡಾಯದ ಭಾಷೆ. ಅಂಕಗಳು : 150.	ಅಂಕಗಳು : 100 ಕೆಳಗೆ ಕಾಣಿಸಿದ ಭಾಷೆಗಳಲ್ಲಿ ಒಂದು ; (ಅ) ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಉರ್ದು, ಹಿಂದೀ ಇಲ್ಲವೆ. (ಆ) ಇಂಗ್ಲಿಷು ಇಲ್ಲವೆ. (ಇ) ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್.	ಅಂಕಗಳು : 50 ಕೆಳಗಣ ಭಾಷೆಗಳಲ್ಲಿ ಒಂದು : (ಅ) ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಉರ್ದು, ಹಿಂದೀ ಇಲ್ಲವೆ. (ಆ) ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್. ಇಲ್ಲವೆ ಗ್ರೀಕ್

ಕನ್ನಡ ಹಾಗೂ ಕನ್ನಡೇತರ ವಿದ್ಯಾರ್ಥಿಗಳಿಗೆ 1981-86 ರವರೆಗೆ ಹಾಗೂ ಮುಂದೆ ಸರ್ವ ಸಾಧಾರಣವಾದ ವಿಶಿಷ್ಟ ವಿಷಯ ಪರೀಕ್ಷಾ ವ್ಯವಸ್ಥೆ

ಪ್ರಥಮಭಾಷೆ	ದ್ವಿತೀಯಭಾಷೆ	ತೃತೀಯಭಾಷೆ
ಎಸ್.ಎಸ್.ಎಲ್.ಸಿ. ಪರೀಕ್ಷೆಯ ಜೊತೆಗೆ ಅಥವಾ ಅನಂತರದ ಪರೀಕ್ಷೆ ಶಾಲೆಯಲ್ಲಿ ಬೋಧನ ಇಲ್ಲ. ಸ್ವತಂತ್ರ ಅಭ್ಯಾಸ.	ಪ್ರಥಮ—ದ್ವಿತೀಯ–ತೃತೀಯ ಭಾಷೆಗಳಾಗಿ ಉಲ್ಲೇಖಿಸಿಕೊಂಡ ಯಾವುದೇ ಒಂದು ಭಾಷೆ ಅಥವಾ ವಿಷಯ ಆರಿಸಿಕೊಂಡು ವಿದ್ಯಾರ್ಥಿ ಪರೀಕ್ಷೆಗೆ ತೆಗೆದುಕೊಳ್ಳಬಹುದು. 100 ಅಂಕಗಳು ಎಸ್.ಎಸ್.ಎಲ್.ಸಿ. ಗಿಂತ ತುಸು ಹೆಚ್ಚಿನ ಮಟ್ಟ	ಎಸ್.ಎಸ್.ಎಲ್.ಸಿ. ವರ್ಷದಲ್ಲಿಯೇ ಅಭ್ಯಾಸ ಪ್ರತ್ಯೇಕ ಅರ್ಹತಾ ಪತ್ರ. ಸಂಪ್ರ ಚೇತನದ ಉದ್ದೀಪನವೇ ಗುರಿ.

ಕೆಲವು ವಿವರಣೆಗಳು

(1) ತಾತ್ಪೂರ್ತಿಕ ವ್ಯವಸ್ಥೆ

1981 ರಿಂದ 1986ರ ವರೆಗೆ ಮಾಡಿದ ತಾತ್ಪೂರ್ತಿಕ ವ್ಯವಸ್ಥೆಗೂ ಸಮಿತಿಯು ಮುಖ್ಯ ಸಲಹೆಗಳ ಪ್ರಕಾರ ಒಡನೆ ಪ್ರಾರಂಭವಾಗಿ ಹಾಗೆಯೇ ಮುಂದುವರಿಯಬೇಕಾದ ವ್ಯವಸ್ಥೆಗೂ ಇರುವ ಅಂತರಗಳಿಷ್ಟು.

(ಅ) ಕನ್ನಡೇತರ ವಿದ್ಯಾರ್ಥಿಗಳ ಮಾತೃಭಾಷೆಯು (ತಮಿಳು ಮುಂತಾದ) ಅಭ್ಯಾಸ 150 ಅಂಕಗಳು ಮಟ್ಟದಿದ್ದು ಕನ್ನಡ ಭಾಷೆಯನ್ನು ಅವರು 100 ಇಲ್ಲವೆ 50 ಅಂಕಗಳ ವಿಷಯವನ್ನಾಗಿ, ದ್ವಿತೀಯ ಇಲ್ಲವೆ ತೃತೀಯ ಭಾಷೆಯಾಗಿ, 1985-86ನೆಯ ಶೈಕ್ಷಣಿಕ ವರ್ಷ ಮುಂಗಿಯುವವರೆಗೆ ಅಭ್ಯಸಿಸುತ್ತಾರೆ. ದ್ವಿತೀಯ ಭಾಷೆಯಾಗಿ ವಿದ್ಯಾರ್ಥಿಗಳು ಬಹುತೇಕ ಇಂಗ್ಲೀಷನ್ನು ಅಭ್ಯಸಿಸುವ ಕಾರಣವಾಗಿ, ಅವರು ಕನ್ನಡವನ್ನು ತೃತೀಯ ಭಾಷೆಯಾಗಿ ವ್ಯಾಸಂಗಕ್ಕಾಗಿ ಎತ್ತಿಕೊಳ್ಳಬಹುದು. ಈ ಅವಧಿಯಲ್ಲಿ ಸಹ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಅಭ್ಯಸಿಸುವ ಕನ್ನಡೇತರ ವಿದ್ಯಾರ್ಥಿಗಳೂ ಇರಬಹುದು. ಅಂಥವರ ಸಲುವಾಗಿ ಕನ್ನಡವನ್ನು ದ್ವಿತೀಯ ಭಾಷೆಗಳ ಮಾಲಿಕೆಯಲ್ಲಿ ಸೇರಿಸಲಾಗಿದೆ. ಏನೇ ಇರಲಿ ಈ ಅವಧಿಯಲ್ಲೆಲ್ಲ — 1981–82 ರಲ್ಲಿ ಪ್ರಾಥಮಿಕ 3ನೆಯ ಇಯತ್ತೆಯಲ್ಲಿ ಕನ್ನಡದ ಅಭ್ಯಾಸವನ್ನು ಪ್ರಾರಂಭಿಸಿದ ವಿದ್ಯಾರ್ಥಿಗಳು ವರ್ಷಾನುವರ್ಷ ಆ ವಿಷಯವನ್ನು ಅಭ್ಯಸಿಸಿ 1986-87 ರಲ್ಲಿ 150 ಅಂಕಗಳ ಕನ್ನಡ ವಿಷಯವನ್ನು ಅಭ್ಯಸಿಸಲು ಅರ್ಹರಾಗುತ್ತಾರೆ. ಆ ವರ್ಷದಿಂದ ಕನ್ನಡದ ವಿಷಯದಲ್ಲಿ ಮಾಡಿದ ಸಲಹೆಯು ಪೂರ್ಣ ಜಾರಿಯಲ್ಲಿ ಬರುತ್ತದೆ.

(ಆ) "ಕನ್ನಡವನ್ನುಳಿದ ಆಧುನಿಕ ಭಾರತೀಯ ಭಾಷೆಗಳು (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾತಿ, ಹಿಂದೀ, ಉರ್ದು) ಇಂಗ್ಲೀಷು, ಮತ್ತು ಪ್ರಾಚೀನ ಭಾಷೆಗಳ ಒಂದು ಪಟ್ಟಿ ಮಾಡಬೇಕು. (ಸಂಸ್ಕೃತ, ಅರೇಬಿಕ್, ಪರ್ಶಿಯನ್, ಲ್ಯಾಟಿನ್, ಗ್ರೀಕ್) ಈ ಭಾಷೆಗಳಲ್ಲಿ ಒಂದನ್ನು ದ್ವಿತೀಯ ಭಾಷೆಯಾಗಿ ಆಯ್ದುಕೊಳ್ಳಬಹುದು. ದ್ವಿತೀಯ ಭಾಷೆಗೆ 100 ಅಂಕಗಳು ಇರುತ್ತವೆ. ಇವುಗಳಲ್ಲಿ ಇನ್ನೊಂದು ಭಾಷೆಯನ್ನು ತೃತೀಯ ಭಾಷೆಯಾಗಿ ಆಯ್ದುಕೊಳ್ಳಬಹುದು. ತೃತೀಯ ಭಾಷೆಗೆ 50 ಅಂಕಗಳಿರುತ್ತವೆ." ಈ ಸಲಹೆಗೂ ಸಮಿತಿಯು ಸೂಚಿಸಿದ ತಾತ್ಪೂರ್ತಿಕ ಭಾಷಾ ವ್ಯವಸ್ಥೆಗೂ ಅಂತರಗಳಿವೆ. ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಮಾಡಿದ ತಾತ್ಪೂರ್ತಿಕ ವ್ಯವಸ್ಥೆಯಲ್ಲಿ ಕನ್ನಡವನ್ನು ಮೂರು ಅಂಕಣಗಳಲ್ಲಿಯೂ ಕಾಣಿಸಬೇಕಾಗಿದೆ. 150 ಅಂಕಗಳ ಕನ್ನಡವನ್ನು ಕನ್ನಡಿಗ ವಿದ್ಯಾರ್ಥಿಗಳು ತೆಗೆದುಕೊಳ್ಳುತ್ತಾರೆ. ಇವರು ಕನ್ನಡ ಮಾತೃಭಾಷೆ ಇದ್ದವರಾಗಬಹುದು, ಇಲ್ಲವೆ ಅನ್ಯಭಾಷೆ ಮಾತೃಭಾಷೆ ಇದ್ದರೂ ಕನ್ನಡ ನಾಡಿನಲ್ಲಿ ನೆಲಸಿದವರಾಗಬಹುದು. ಕನ್ನಡೇತರ ವಿದ್ಯಾರ್ಥಿಗಳಿಗಾಗಿ 100 ಹಾಗೂ 50 ಅಂಕಗಳ ಕನ್ನಡವನ್ನು ತಾತ್ಪೂರ್ತಿಕವಾಗಿ ದ್ವಿತೀಯ ಹಾಗೂ ತೃತೀಯ ಭಾಷೆಯೆಂದು ಸೇರಿಸಲಾಗಿದೆ. 1986-87ನೇ ಶೈಕ್ಷಣಿಕ ವರ್ಷದಿಂದ ಇವೆರಡೂ ಕನ್ನಡಗಳೂ ಇಲ್ಲವಾಗಿ 150 ಅಂಕಗಳ ಏಕೈಕ ಕನ್ನಡವು ಎಲ್ಲರಿಗೂ ಕಡ್ಡಾಯದ ಪ್ರಥಮಭಾಷೆ ಆಗುತ್ತದೆ.

(ಇ) ಇನ್ನೊಂದು ಅಂತರವೆಂದರೆ ಆಧುನಿಕ ಭಾರತೀಯ ಭಾಷೆಗಳ ಮಾಲಿಕೆಯು (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾತಿ, ಉರ್ದು, ಹಿಂದೀ) 150 ಅಂಕಗಳ

ಏಕೈಕ ಪ್ರಥಮಭಾಷೆಯಾದ ಕನ್ನಡದ ಜೊತೆಗೆ ನಿಲ್ಲುವುದಿಲ್ಲ ನಿಜ. ಆದರೆ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಈ ಭಾಷೆಗಳು ಪ್ರಥಮ ಭಾಷೆಯೇ (150 ಅಂಕಗಳು) ಆಗಿ 1986-87 ರ ವರೆಗೆ ಮುಂದುವರಿಯಬೇಕಾಗಿದೆ. ಆದೇ ಪ್ರಕಾರ 1986-87ರ ವರೆಗೆ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಕನ್ನಡ ದ್ವಿತೀಯ ಹಾಗೂ ತೃತೀಯ ಭಾಷೆಯಾಗಿ ಮುಂದುವರಿಯಲಿವುದು,

(ಈ) ಆದರೆ ಕನ್ನಡಿಗ ವಿದ್ಯಾರ್ಥಿಗಳಿಗಾಗಿ 1981-82ರಿಂದಲೇ ಕನ್ನಡವು ಏಕೈಕ ಪ್ರಥಮಭಾಷೆ (150 ಅಂಕಗಳು) ಯಾಗುವುದು. ಕನ್ನಡವನ್ನು ಬಿಟ್ಟು ಉಳಿದ ಆಧುನಿಕ ಭಾರತೀಯ ಭಾಷೆಗಳು (ತಮಿಳಂ ಮುಂತಾದ) ದ್ವಿತೀಯ ಹಾಗೂ ತೃತೀಯ ಭಾಷೆಗಳ ಅಂಕಣಗಳಲ್ಲಿ (ಕಾಲಂಗಳು) ಪ್ರಾಚೀನ ಭಾಷೆಗಳೊಡನೆ ಕಾಣಿಸಿಕೊಂಡು ಮುಂಬರುವ ಎಲ್ಲ ವರ್ಷಗಳಲ್ಲಿಯೂ ಆದೇ ರೀತಿಯಾಗಿ ಮುಂದುವರಿಯುವುವು.

(ಉ) ಸಮಿತಿಯ ಸಲಹೆಗಳ ಪ್ರಕಾರ ಎರಡು ಭಾಷೆಗಳನ್ನು (ದ್ವಿತೀಯ ಹಾಗೂ ತೃತೀಯ) ತಮಗೆ ಇಚ್ಛೆಯಿದ್ದಂತೆ ವಿದ್ಯಾರ್ಥಿಗಳು ಆಯ್ದುಕೊಳ್ಳಬಹುದು. ಆದರೆ ಇಂಗ್ಲಿಷ್ ಭಾಷೆಯೊಂದನ್ನು 1985-86ನೆಯ ಶೈಕ್ಷಣಿಕ ವರ್ಷ ಮುಗಿಯುವವರೆಗೆ ದ್ವಿತೀಯ ಭಾಷೆಯೆಂದು ಮಾತ್ರ ಅಭ್ಯಸಿಸಬಹುದೆಂದು ತಾತ್ಕಾಲಿಕ ವ್ಯವಸ್ಥೆಯಲ್ಲಿ ವಿಧಿಸಲಾಗಿದೆ. 1986-87 ರಿಂದ ವಿದ್ಯಾರ್ಥಿಗಳು ಕನ್ನಡವನ್ನು ಕಡ್ಡಾಯವಾಗಿ ಕಲಿತು ಉಳಿದ ಯಾವ ಎರಡು ಭಾಷೆಗಳನ್ನಾದರೂ ಆಯ್ದುಕೊಳ್ಳಬಹುದು.

(ಊ) ಕನ್ನಡ, ಬೇರೆ ಒಂದು ಆಧುನಿಕ ಭಾರತೀಯ ಭಾಷೆ, ಒಂದು ಪ್ರಾಚೀನ ಭಾಷೆ: ಯಾವ ಭಾಷೆಯನ್ನೇ ವಿದಾರ್ಥಿಯು ತೃತೀಯ ಭಾಷೆಯೆಂದು ಆಯ್ದುಕೊಂಡಿರಲಿ, ಅದು 1981-82 ರಿಂದಲೇ ಕಡ್ಡಾಯದ ಪರೀಕ್ಷಾ ವಿಷಯವಾಗಿರುವುದು. ಇದೇ ವ್ಯವಸ್ಥೆಯು ಸಮಿತಿಯ 4ನೆಯ ಸಲಹೆಯ ಪ್ರಕಾರ ಮುಂದೆಯೂ ನಡೆದುಕೊಂಡು ಬರುವುದು.

(2) ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಗಳು

'ಭಾಷಾ ಶಿಕ್ಷಣದ ಗೊತ್ತುಗುರಿಗಳು' ಎಂಬ ಭಾಗದಲ್ಲಿ ಪೈಸ್ಕೂಲುಗಳಲ್ಲಿ ಕಲಿಯಬೇಕಾದ ಎಲ್ಲ ಭಾಷೆಗಳ ತರತಮ ಮಹತ್ವವನ್ನು ಅಳೆಯಲು ಹವಣಿಸಿದೆ. ಹೀಗೆ ಅಳೆಯುವಾಗ ಉಪಯೋಗಿಸಿದ ಅಳತೆಗೋಲೆಂದರೆ ಇಂದಿನ ಒಬ್ಬ ಸುಸಂಸ್ಕೃತ ನಾಗರಿಕನಿಗೆ ಕನ್ನಡನಾಡಿನಲ್ಲಿ ವಿವಿಧ ಭಾಷೆಗಳಿಂದ ಬರುವ ಕೊಡುಗೆಯೇ ಸರಿ.

ಅಭ್ಯಸಿಸಲಿರುವ ಮೂರು ಭಾಷೆಗಳಿಗೂ ಸರಿಸಮಾನ ಅಂಕಗಳಿರಬೇಕೆಂದು ಒಂದು ಅಭಿಪ್ರಾಯವಿದೆ. ಆದರೆ ಪ್ರಥಮ-ದ್ವಿತೀಯ-ತೃತೀಯ ಎಂದು ಭಾಷೆಗಳನ್ನು ನಿಗಡಿಸುವುದರಲ್ಲಿಯೇ ಒಂದು ವಿಶೇಷ ಅರ್ಥವಿದೆ. 'ಪ್ರಥಮ' ಎಂಬುದು ಬರಿ ಒಂದು ಅಭಿಮಾನ ಇಲ್ಲವೆ ಭಾವನಾವೇಶದ್ಯೋತಕವಾದ ಪದವಲ್ಲ. ಇಂದಿನ ಸಾಮಾನ್ಯ ಬಳಕೆಯಲ್ಲಿ ಅಂಥ ದೊಂದು ಅರ್ಥ ಅವಕ್ಕೆ ಬಂದಿದೆ. ಆದರೆ ಶಿಕ್ಷಣ ಪಡೆಯಬೇಕೆಂಬ ಹವ್ಯಾಸವುಳ್ಳ ಲಕ್ಷಾವಧಿ ವಿದ್ಯಾರ್ಥಿಗಳಿಗೆ ಕನ್ನಡನಾಡಿನಲ್ಲಿ ಅತ್ಯಂತ ಪ್ರಯೋಜನಕಾರಿಯಾದ ಭಾಷೆ ಯಾವುದು? ಕನ್ನಡ ನಾಡಿನಲ್ಲಿ ಕನ್ನಡವೊಂದೇ ಆ 'ಪ್ರಥಮ' ಭಾಷೆಯಾಗಬಲ್ಲದು. ಅದು ಕನ್ನಡ ಜನತೆಯ ಭಾಷೆ. ಅಂತೇ ಕನ್ನಡ ನಾಡಿನಲ್ಲಿಯ ವ್ಯವಹಾರದ, ಆಡಳಿತದ, ಸೇವಾ ಆಯೋಗದ, ಶಾಲೆ ಕಾಲೇಜುಗಳ, ವಿಶ್ವವಿದ್ಯಾನಿಲಯಗಳ ಮಾಧ್ಯಮವಾದ ಭಾಷೆ. ಆದರ

ಪ್ರಯೋಜಕತೆ ಜನತೆಗೆ ಸಂಪೂರ್ಣ ಲಭ್ಯವಿರಲು ತಡವಾದರೆ ಜನತೆ ರೊಚ್ಚಿಗೇಳುವುದರಲ್ಲಿ ಸಂಶಯವಿಲ್ಲ. ಪ್ರಪಂಚದ ಕೆಲವೊಂದು ವಿಶಿಷ್ಟ ವಿಜ್ಞಾನ ವಿಭಾಗಗಳನ್ನು ತೆರೆದಿಡಲು ಇನ್ನೂ ಅನೇಕವರ್ಷಗಳವರೆಗೆ ಇಂಗ್ಲಿಷಿನ ಪ್ರತ್ಯಕ್ಷ ಜ್ಞಾನ ಬೇಕಾಗಬಹುದು. ನಾವು ವೆಂಚ್ಟಿದ ಒಂದು ಸಾಹಿತ್ಯದ ಮೇಲ್ಮೈಯನ್ನು—ಅದು ಸಂಸ್ಕೃತವೇ ಇರಲಿ ಇಲ್ಲವೇ ಇನ್ನಾವ ಭಾಷೆಯೇ ಇರಲಿ—ಹೃದಯ ತುಂಬಿ ಸೂಸುವಂತೆ ಸವಿಯಲು ಆ ಸಾಹಿತ್ಯದ ಭಾಷೆಯ ನಿಚ್ಚಳವಾದ ಜ್ಞಾನ ಅವಶ್ಯವಾಗಬಹುದು. ಆದರೆ ಕಾಲ ಗತಿಸಿದಂತೆ ನಮ್ಮ ನಾಡಿನ ವಿವಿಧ ಸಂಸ್ಥೆಗಳ ದೃಷ್ಟಿ ನಿಚ್ಚಳವಾದಂತೆ—ಪ್ರಪಂಚದ ಜ್ಞಾನ-ವಿಜ್ಞಾನವೆಲ್ಲ ಕನ್ನಡದಲ್ಲಿ ಒಡಮೂಡುವುದರಲ್ಲಿ ಸಂಶಯವಿಲ್ಲ.

ಆಡಳಿತ, ಸಾರ್ವಜನಿಕ ಸೇವೆ, ವ್ಯವಹಾರ, ಉದ್ಯೋಗ, ಉಚ್ಚ ಶಿಕ್ಷಣ-ಹೀಗೆ ಜೀವನದ ವಿವಿಧ ಭಾಗಗಳನ್ನು ಅಭಿವ್ಯಕ್ತಗೊಳಿಸುವುದರಿಂದ ವಿದ್ಯಾರ್ಥಿಯು ಪಡೆಯುವ ಕನ್ನಡದ ಜ್ಞಾನಕ್ಕೆ ಆಳವೂ, ವಿಸ್ತಾರವೂ ಇರಬೇಕಾಗುತ್ತದೆ. ಅನೇಕ ವಿಷಯಗಳ ವ್ಯಾಸಂಗಕ್ಕಾಗಿ ಭಾಷೆಯೇ ಹಿಗ್ಗಬೇಕಾಗುತ್ತದೆ. ಈ ದಿಕ್ಕಿನಲ್ಲಿ ವಿದ್ಯಾರ್ಥಿಯ ಕನ್ನಡದ ಅಭ್ಯಾಸ ಮುಂದುವರಿದಿರಬೇಕು ಹೀಗೆ ಮುಂದುವರಿಸಲು ಭಾಷೆಯ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯದ ಅಭ್ಯಾಸವೂ ಅವಶ್ಯವಾಗುತ್ತದೆ. ಕನ್ನಡೇತರ ವಿದ್ಯಾರ್ಥಿಯೂ ಕನ್ನಡವನ್ನು ಹೀಗೆ ವೈವಿಧ್ಯಪೂರ್ಣವಾಗಿ ಅಭ್ಯಸಿಸುತ್ತಾನೆ. ಅಂತೆಯೇ ಪ್ರಥಮ ಭಾಷೆಯಾದ ಕನ್ನಡಕ್ಕೆ 150 ಅಂಕಗಳನ್ನು ಕಾದಿರಿಸಿದೆ.

ಕನ್ನಡವನ್ನು ಪ್ರಥಮ ಭಾಷೆಯಾಗಿ ಅಭ್ಯಸಿಸುವಾಗ ಈ ಅಭ್ಯಾಸವ ಗುರಿಗಳೇನಿರಬೇಕು? ಪಠ್ಯಪುಸ್ತಕಗಳ ನಿರ್ದೇಶನ ಮಂಡಲವು ಗುರಿಗಳನ್ನು ಈ ರೀತಿಯಾಗಿ ಸ್ಫುಟಗೊಳಿಸಿದೆ. ಆ ಮಾತುಗಳನ್ನೇ ಕೆಲವು ಹೆಚ್ಚು ಕಡಿಮೆಗಳೊಡನೆ ಇಲ್ಲಿ ಸೇರಿಸಿದೆ.

(ಅ) ಉತ್ತಮ ಶ್ರವಣ, ಉತ್ತಮ ಅರ್ಥಗ್ರಹಣ, ಹಾಗೂ ಶೀಘ್ರ ವಾಚನ ಸಾಧ್ಯವಾಗುವಂತೆ ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನು ಬೆಳೆಸಬೇಕು.

(ಆ) ಮನೋರಂಜನ, ಜ್ಞಾನಾರ್ಜನ, ಸಾಹಿತ್ಯಾಭಿರುಚಿ ಹಾಗೂ ಸೂಕ್ಷ್ಮ ಪರಿಜ್ಞಾನದ ತೃಪ್ತಿಗಾಗಿ ಸ್ವತಂತ್ರ ಅಭ್ಯಾಸವನ್ನು ಮುಂದುವರಿಸಲು ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿ ಮಾಡುವುದು.

(ಇ) ಅನರ ರಸಗ್ರಹಣಶಕ್ತಿ, ಕಲ್ಪಕತೆ, ಸ್ವಂತಿಕೆ ಹಾಗೂ ಸೃಜನಶೀಲತೆಗಳ ಉದ್ದೀಪ್ತವಾಗುವಂತೆ ಪರಿಣಮಿಸುವುದು.

(ಈ) ಉಕ್ತ ಹಾಗೂ ಲಿಖಿತ ಅಭಿವ್ಯಕ್ತಿಯ ಒಳ್ಳೆಯ ವಿಕಾಸ ವಿದ್ಯಾರ್ಥಿಗಳಲ್ಲಿ ರೂಪುಗೊಳ್ಳುವಂತೆ ನೋಡಿಕೊಳ್ಳುವುದು.

(ಉ) ಶುದ್ಧ ಉಚ್ಚಾರ, ದಿನದಿನಕ್ಕೆ ಬೆಳೆಯುತ್ತಿರುವ ಶಬ್ದಕೋಶ, ಭಾಷೆಯು ದೇಹರಚನೆ ಇಲ್ಲವೆ ವಾಕ್ಯಗಳ ವೈಕಟ್ಟನ್ನು ಚೆನ್ನಾಗಿ ಅರಿತುಕೊಂಡು ಅದನ್ನು ಉಚಿತವಾಗಿ ದೋಷರಹಿತವಾಗಿ ಹಾಗೂ ಪರಿಣಾಮಕಾರಿಯಾಗಿ ಉಪಯೋಗಿಸುವ ಜಾಣ್ಮೆ: ಇವು ವಿದ್ಯಾರ್ಥಿಗಳಲ್ಲಿ ಬೆಳೆಯುವಂತೆ ಪ್ರಯತ್ನಿಸುವುದು.

(ಊ) ವ್ಯಾಕರಣ, ಭಾಷೆಯಲ್ಲಿಯ ಮುಖ್ಯ ಸಾಹಿತ್ಯಪ್ರಕಾರಗಳು ಹಾಗೂ ಮಹತ್ವದ ಕವಿ ಹಾಗೂ ಸಾಹಿತಿಗಳು: ಈ ವಿಷಯಗಳ ಹಾಗೂ ವ್ಯಕ್ತಿಗಳ ಪರಿಚಯ

ಮಾಡಿ ಕೊಡುವುದು. ಆಧುನಿಕ ಕನ್ನಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಮಾತ್ರ ವ್ಯಾಕರಣ, ಪ್ರಕಾರ ಸಾಹಿತ್ಯ ಹಾಗೂ ಸಾಹಿತಿ–ಕವಿಗಳ ಪರಿಚಯವನ್ನು ಮಾಡಿಕೊಡುವುದು.

(ಖ) ಅಪರಿಗೆ ಕಲಿಸುವ ಆಧುನಿಕ ಕನ್ನಡ ಗದ್ಯ ಪದ್ಯಗಳ ದ್ವಾರಾ ಜೀವನದ ಶ್ರೇಷ್ಠ ಮೌಲ್ಯಗಳು ದೊರೆತು ಭಾವನೆಗಳ ಉದಾತ್ತೀಕರಣದ ಮಾರ್ಗವಾಗಿ ಉತ್ತಮ ಹೃದಯ ಸಂಸ್ಕೃತಿ ವಿದ್ಯಾರ್ಥಿಗಳದಾಗಿ ಅವರ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸವಾಗುವಂತೆ ಪ್ರಯತ್ನಿಸಬೇಕು. ಹಳಗನ್ನಡ–ನಡುಗನ್ನಡದ ಮುಖ-ಪರಿಚಯವಿರಲೆಂದು ಮಾತ್ರ ಕೀರ್ತಿವಂತ ಕವಿ-ಸಾಹಿತಿಗಳಿಂದ ಒಂದೆರಡು ಉದ್ಧೃತ ಭಾಗಗಳನ್ನು ಪಠ್ಯಪುಸ್ತಕದಲ್ಲಿ ಸಂಗ್ರಹಿಸಬಹುದು.

(ಗ) ವಿದ್ಯಾರ್ಥಿಗಳಿಗೆ ಈ ನಾಡು ಹಾಗೂ ರಾಷ್ಟ್ರ ತಮ್ಮದೆಂಬ, ಭಾಷೆ ತಮ್ಮದು, ಸಾಹಿತ್ಯ ಹಾಗೂ ಸಂಸ್ಕೃತಿ ತಮ್ಮದೆಂಬ ಭಾವನೆ ಜಾಗೃತವಾಗುವಂತೆ ಪಠ್ಯ ಕ್ರಮವನ್ನು, ಪಠ್ಯ ಸಾಮಗ್ರಿಯನ್ನು ಹಾಗೂ ಬೋಧನ ವಿಧಾನವನ್ನು ರೂಪಿಸಬೇಕು.

(ಎ) ಓದು : ಗದ್ಯ : ಪ್ರಬಂಧ, ಸಣ್ಣಕಥೆ, ಆಟ ನೋಟಗಳ ಪ್ರಪಂಚ, ಸಾಹಸ—ವೈಜ್ಞಾನಿಕ ಸಂಶೋಧನೆಗಳು ಹಾಗೂ ಯಂತ್ರ ಚಮತ್ಕಾರಗಳು, ಸಾಂಸ್ಕೃತಿಕ ಪರಂಪರೆಯ ಕೊಡುಗೆ, ಸಾಹಿತ್ಯಕ ಇಲ್ಲವೆ ಐತಿಹಾಸಿಕ ಮಹತ್ವದ ಪತ್ರಗಳು, ಕಾದಂಬರಿಗಳಿಂದ ಉದ್ಧೃತ ಭಾಗಗಳು : ಭಾಷಣಗಳು, ಪ್ರವಾಸ ಸಾಹಿತ್ಯ, ಚರಿತ್ರೆ, ಆತ್ಮಚರಿತ್ರೆ, ಜನತೆಯ ಆಚಾರವಿಚಾರ, ಜನತೆಯ ಐತಿಹಾಸಿಕ ಇಲ್ಲವೆ ಭೌಗೋಳಿಕ ವೃತ್ತಾಂತ ವೈಜ್ಞಾನಿಕ ಕಥಾಪ್ರಪಂಚ, ಪಶುಪಕ್ಷಿಗಳ ಜಗತ್ತು, ನಾಟಕಗಳಿಂದ ಆಯ್ದ ದೃಶ್ಯಗಳು, ಏಕಾಂಕಗಳು, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳ ಮೇಲೆ ಪ್ರಬಂಧಗಳು, ಡೈರಿಗಳು, ಉದ್ಧೃತ ಭಾಗಗಳನ್ನು ಆದಷ್ಟುಮಟ್ಟಿಗೆ ಆಧುನಿಕ ಕನ್ನಡ ಸಾಹಿತ್ಯದ (ಅಲ್ಲಲ್ಲಿ ನಡುಗನ್ನಡ ಸಾಹಿತ್ಯದ) ವಿವಿಧ ಶೈಲಿಗಳು ನಿದರ್ಶನಕ್ಕೆ ಬರುವಂತೆ ಆಯ್ದಿರಬೇಕು.

ಪದ್ಯ : ಭಾವಗೀತೆಗಳು, ಕಥನಕವನಗಳು, ಲಾವಣಿಗಳು, ತ್ರಿಪದಿಗಳು, ಅಷ್ಟ ಷಟ್ಪದಿಗಳು, ಶೋಕಗೀತೆಗಳು, ಓಡುಗಳು, ನೀಳ್ಗವನಗಳೊಳಗಿಂದ ಉದ್ಧೃತ ಭಾಗಗಳು, ರಾಷ್ಟ್ರೀಯತೆ, ಶೌರ್ಯ, ನಿಸರ್ಗ, ನೀತಿ, ಭಕ್ತಿ ಮೊದಲಾದ ಜೀವನ ಮೌಲ್ಯಗಳನ್ನು ಕುರಿತ ಕವನಗಳು, ವಚನಗಳು, ಕಂದಗಳು, ದಾಸರ ಹಾಡುಗಳು, ಸಾಂಗತ್ಯ, ಕೆಲವು ವೃತ್ತಗಳು, ಷಟ್ಪದಿಗಳು.

ಉಪ ಪಠ್ಯ ಗದ್ಯ : ಒಂದು ಏಕ ಸೂತ್ರತೆಯುಳ್ಳ ಕೃತಿ, ಕಾದಂಬರಿ ವೈಜ್ಞಾನಿಕ ಕಾದಂಬರಿ, ಸಾಹಸದ ಕಥೆ, ವೈದಿಕ ಕಥೆಗಳು, ಚರಿತ್ರೆ, ಆತ್ಮ ಚರಿತ್ರೆ, ಕರ್ನಾಟಕದ ಸಮಗ್ರ ಇತಿಹಾಸವನ್ನು ಒಳಗೊಂಡ ಗ್ರಂಥ, ಸಂಕ್ಷಿಪ್ತಗೊಳಿಸಿದ ಜಗನ್ಮಾನ್ಯ ಕಾದಂಬರಿ, ಒಂದು ನಾಟಕ, ಐದು ಏಕಾಂತಗಳ ಒಂದು ಸಂಗ್ರಹ.

(ಏ) ವ್ಯಾಕರಣ, ಛಂದಸ್ಸು, ಮತ್ತು ಅಲಂಕಾರ—ಶಾಸ್ತ್ರ :

ವ್ಯಾಕರಣ : ಇದು ಕ್ರಿಯಾತ್ಮಕವಾಗಿರಬೇಕು. ಈಗಿನ ಕನ್ನಡ ಪ್ರಥಮಭಾಷಾ ಪಠ್ಯ ಕ್ರಮದಲ್ಲಿ ಇದರ ವಿವರಗಳು ಸಾಕಷ್ಟು ಬಂದಿವೆ.

ಛಂದಸ್ಸು : ಭಾಷಾಭ್ಯಾಸಕ್ಕೆ ನಿಲ್ಲದೆ ಸಾಹಿತ್ಯದ ಅಭ್ಯಾಸವನ್ನೂ ಆಸ್ಥೆಯಿಂದ ಪ್ರಥಮ ಭಾಷಾಭ್ಯಾಸವು ಪಾಲಿಸುವದೆಂಬುವ ಮಾತಿಗೆ ಛಂದಸ್ಸು ಹಾಗೂ ಅಲಂಕಾರ

ಶಾಸ್ತ್ರದ ಅಭ್ಯಾಸ ಸಾಕ್ಷಿಯಾಗಿದೆ. ಆದರೆ ಛಂದಸ್ಸನ್ನು ಕಲಿಸುವಾಗ ಬರಿ ಮಾತ್ರೆ, ಗಣ, ಗುರು, ಲಘುಗಳನ್ನಲ್ಲದೆ ಕೆಳಗೆ ಕಾಣಿಸಿದ ವಿಷಯಗಳನ್ನು ಮೊದಲು ಕಲಿಸುವುದು ಅವಶ್ಯಕವಾಗಿದೆ :—

(1) ತಾಳಲಯವೆಂದರೇನು ?

(2) ಗದ್ಯ ಹಾಗೂ ಪದ್ಯದ ತಾಳಲಯಕ್ಕೆ ಇರುವ ಅಂತರವೇನು ?

(3) ವಚನ ಹಾಗೂ ಸ್ವಚ್ಛಂದ ಛಂದಗಳ ತಾಳಲಯಕ್ಕೂ ಗದ್ಯಪದ್ಯಗಳ ತಾಳಲಯಕ್ಕೂ ಇರುವ ಅಂತರವೇನು ?

ಅಲ್ಲದೆ ಛಂದಸ್ಸು ಕಲಿಸುವಾಗ ಕಂದ ಪದ್ಯ, ಷಟ್ಪದಿಗಳು, ರಗಳೆಗಳು ಹಾಗೂ ವೃತ್ತಗಳ ಛಂದಸ್ಸನ್ನು ಅಭ್ಯಸಿಸುವ ಏರ್ಪಾಟಿನೆಯೇ ಹೊರತು ಆಧುನಿಕ ಕಾವ್ಯದ ಭಾವ ಗೀತೆ, ಸರಳ ರಗಳೆ, ಅಷ್ಟ ಷಟ್ಪದಿಗಳ ಹಾಗೂ ತ್ರಿಪದಿ—ಸಾಂಗತ್ಯಗಳ ಛಂದಸ್ಸನ್ನು ತಿಳಿಸುವ ಏರ್ಪಾಟಿಲ್ಲ. ಆಧುನಿಕ ಕಾವ್ಯ ಛಂದಸ್ಸನ್ನು ವಿದ್ಯಾರ್ಥಿಗಳಿಗೆ ಮೊದಲು ತಿಳಿಸಿಕೊಡುವ ಏರ್ಪಾಟಾಗಬೇಕು. ಇದರ ಬಗ್ಗೆ ಒಳ್ಳೆ ಗ್ರಂಥಗಳು ಪ್ರಕಟವಾಗಿವೆ. ವೇಳೆ ಉಳಿದರೆ ವಚನ, ಸಾಂಗತ್ಯ—ತ್ರಿಪದಿ—ಷಟ್ಪದಿಗಳ ಛಂದಸ್ಸನ್ನೂ ತಿಳಿಸಿಕೊಡಬಹುದು.

ಅಲಂಕಾರಗಳ ವಿಷಯದಲ್ಲಿಯೂ ಕೆಲವು ಮೂಲಭೂತ ವಿವರಣೆಗಳು ಅವಶ್ಯವಾಗಿವೆ. ಅಲಂಕಾರಿಕ ಭಾಷೆ ಎಂದರೇನು ? ಅದು ವ್ಯಾವಹಾರಿಕ ಹಾಗೂ ಶಾಸ್ತ್ರೀಯ ಭಾಷೆಯಿಂದ ಹೇಗೆ ಭಿನ್ನವಿರುತ್ತದೆ ? ಅಲಂಕಾರಗಳಿಗೂ ಹಾಗೂ ಕಲ್ಪಕತೆ ಮತ್ತು ಭಾವನಾಭಿವ್ಯಕ್ತಿಗೂ ಏನು ಸಂಬಂಧ ? ಈ ಪ್ರಶ್ನೆಗಳನ್ನು ಬಿಡಿಸಿದಾಗ ಮಾತ್ರ ಆಯ್ದ ಕೆಲವೊಂದು ಅಲಂಕಾರಗಳ ವಿವರಣೆಗೆ ಅರ್ಥ ಬರುತ್ತದೆ.

(ಒ) ಲೇಖನ ಕಾರ್ಯ : ಕನ್ನಡವನ್ನು ಪ್ರಥಮಭಾಷೆಯಾಗಿ ಅಭ್ಯಸಿಸಿದ ವಿದ್ಯಾರ್ಥಿಗಳಿಂದ ಯಾವ ಮಟ್ಟದ ಬರವಣಿಗೆಯನ್ನು ನಿರೀಕ್ಷಿಸಬಹುದು ? ಇದರ ತರಹಗಳನ್ನು ಮುಂದೆ ಕಾಣಿಸಿದೆ :—

(1) ಉಪ ಪಠ್ಯಪುಸ್ತಕದಿಂದ ಉದ್ಧತವಾದ ಒಂದು ಭಾಗವನ್ನು ಅವರ ಸಾರ ಕೆಡದಂತೆ ಸಂಕ್ಷೇಪಿಸುವುದು.

(2) ಆ ಪುಸ್ತಕದಿಂದಾಯ್ದ ಒಂದು ಸೂತ್ರದ ಸಾರವನ್ನು ವಿಸ್ತಾರವಾಗಿಸಿ ಬರೆಯುವುದು.

(3) ಸಾಮಾನ್ಯ ವಿಷಯಗಳ ಮೇಲಿನ ವಿಚಾರಪೂರ್ಣ ನಿಬಂಧಗಳು ಇಲ್ಲವೆ ಅಂತರಂಗವನ್ನು ತೆರೆದು ಬರೆಯುವ ಪ್ರಬಂಧಗಳು.

(4) ಪಠ್ಯೇತರ ಪದ್ಯಗಳ ಸಾರಗ್ರಹಣ, ರಸಗ್ರಹಣ, ವಿವರಣೆ, ಇತ್ಯಾದಿ.

(5) ಸ್ವತಂತ್ರ ಕಥೆ, ವರ್ಣನೆ, ಪ್ರವಾಸಕಥನ, ನಿತ್ಯಾನುಭವನಿರೂಪಣ, ಇತ್ಯಾದಿ.

(6) ಆಡಳಿತ ಇಲ್ಲದೆ ವ್ಯವಹಾರವನ್ನು ಕುರಿತ ಬರವಣಿಗೆ : ಪತ್ರವಿ, ವರದಿ, ಇತ್ಯಾದಿ.

(7) ಒಂದು ಸರ್ವಸಾಮಾನ್ಯ ಐತಿಹಾಸಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಇಲ್ಲವೆ ವೈಜ್ಞಾನಿಕ ವಿಷಯದ ಮೇಲೆ ಪ್ರಬಂಧ.

ದ್ವಿತೀಯ ಭಾಷೆ : ಇದು ನಮ್ಮ ಸಲಹೆಯ ಪ್ರಕಾರ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದಾಗಬಹುದು. ಇಂಗ್ಲೀಷಾಗಬಹುದು, ಸಂಸ್ಕೃತ ಮೊದಲಾದ ಪ್ರಾಚೀನ ಭಾಷೆಗಳಲ್ಲಿ ಒಂದಾಗಬಹುದು. ಇದಕ್ಕೆ ಅಂಕಗಳು 100. ಹೀಗೆ ಆಯ್ದುಕೊಂಡ ಭಾಷೆಯನ್ನು ಕಲಿಸಲು ಯಾವ ಗುರಿಗಳನ್ನಿಟ್ಟುಕೊಳ್ಳಬೇಕು ? ಗುರಿಗಳನ್ನು ಹೀಗೆ ನಿರ್ದಿಷ್ಟಗೊಳಿಸಬಹುದು :

(ಅ) ಬಳಕೆ ಮಾತಿನ ಹಾಗೂ ರೇಡಿಯೊ ಭಾಷಣಗಳ ಅರ್ಥಗ್ರಹಣ, ಘಟನೆಗಳು ಮಾಡಿದ ವರ್ಣನೆಗಳು ಇಲ್ಲವೆ ಟೀಕೆ ಟಿಪ್ಪಣಿಗಳು ಹಾಗೂ ವಿಚಾರಗಳ ಕ್ರಮಾನುಗತಿ : ಇವುಗಳ ಅರ್ಥ ಮಾಡಿಕೊಳ್ಳುವದು.

(ಆ) ವಾಕ್ಯಗಳನ್ನು ಹಾಗೂ ಉದ್ಧೃತ ಗದ್ಯಭಾಗಗಳ ಅರ್ಥವನ್ನು ತಿಳಿದು ಕೊಂಡು ಸ್ಪಷ್ಟವಾಗಿ ಓದುವದು : ಕವಿತೆಗಳನ್ನು ಅವುಗಳ ತಾಳಲಯ ಹಾಗೂ ಉಚಿತ ಸ್ವರಭಾರ ಇಲ್ಲವೆ ಕಾಕುವನ್ನು ಲಕ್ಷಿಸಿ ಹೇಳುವದು.

(ಇ) ಪುಸ್ತಕ ಸಂಗ್ರಹಾಲಯದಲ್ಲಿಯ ಪುಸ್ತಕಗಳನ್ನೂ ಮಾಸಿಕಗಳನ್ನೂ ವೃತ್ತ ಪತ್ರಿಕೆಗಳನ್ನೂ ಓದಲು ನೈಜ ಲವಲವಿಕೆಯನ್ನು ಬೆಳೆಸಿಕೊಳ್ಳುವುದು.

(ಈ) ಮೊದಲು ಓದಿಕೊಳ್ಳದೆ ಇದ್ದ ಉದ್ಧೃತ ಭಾಗಗಳ ಅರ್ಥಗ್ರಹಣ ಇಲ್ಲವೆ ಸಾರಗ್ರಹಣವನ್ನು ಕುರಿತು ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುವದು ; ಅರ್ಥವರ್ಥ ಸೂಚಿಸಿದ ಇಲ್ಲವೆ ತುಣುಕು ತುಣುಕಾಗಿ ಕೊಟ್ಟ ಕತೆಗಳಲ್ಲಿ ಬಿಟ್ಟಿರುವ ವಿವರಗಳನ್ನು ತುಂಬುವದು ಇಲ್ಲವೆ ಸಂಪೂರ್ಣವಾಗಿಸಿ ಮುಕ್ತಾಯಗೊಳಿಸುವದು ; ಖಾಸಗಿ ಪತ್ರಗಳನ್ನು ಇಲ್ಲವೆ ಅನೌಪಚಾರಿಕ ಆಮಂತ್ರಣಗಳನ್ನು ಬರೆಯುವದು ; ಜಾಹಿರಾತು ಕೊಟ್ಟ ಹುದ್ದೆಗಳಿಗಾಗಿ ಅರ್ಜಿಗಳನ್ನು ಬರೆಯುವದು ; ಎಲ್ಲರಿಗೂ ಗೊತ್ತಿರುವ ವಿಷಯಗಳ ಮೇಲೆ ಚಿಕ್ಕ ಚಿಕ್ಕ ಪ್ಯಾರಾಗಳನ್ನು ಬರೆಯುವದು ಸಾಧ್ಯವಿದ್ದರೆ ಚಿಕ್ಕ ನಿಬಂಧಗಳನ್ನು ಬರೆಯುವುದು.

(ಉ) ವ್ಯಾಕರಣ :—ಪ್ರತಿನಿತ್ಯದ ಬಳಕೆಮಾತಿನಲ್ಲಿ ಹಾಗೂ ಬರೆಹದಲ್ಲಿ ಬಳಸಲಾಗುತ್ತಿರುವ ಮುಖ್ಯ ಭಾಷಾರೂಢಿಯ ಜೀವಾಣುಗಳನ್ನು (ಹಳೆಯ ಮಾತಿನಲ್ಲಿ ಹೇಳುವುದಾದರೆ ವಿವಿಧ ವ್ಯಾಕರಣ ನಿಯಮಗಳನ್ನು) ಕ್ರಿಯಾತ್ಮಕ ವ್ಯಾಕರಣದಲ್ಲಿ ವಿದ್ಯಾರ್ಥಿಗಳಿಗೆ ಮಾತಿನಲ್ಲಿಯೂ ಬರೆಹದಲ್ಲಿಯೂ ಮನದಟ್ಟಾಗುವಂತೆ ಅವುಗಳನ್ನು ಉಚಿತ ಉದ್ಧೃತ ಇಲ್ಲವೆ ಕಲ್ಪಿತ ಉದಾಹರಣೆಗಳೊಡನೆ ಕಲಿಸಬೇಕು. ಇದೇ ರೀತಿಯಾಗಿ ಸರ್ವಸಾಮಾನ್ಯವಾಗಿ ಮಾತು ಹಾಗೂ ಬರೆಹದಲ್ಲಿದ್ದ ಶಬ್ದಗಳು ಮಕ್ಕಳಿಗೆ ಅನಾಯಾಸ ಉಪಯೋಗಿಸಲು ಬರುವಂತೆ ಅವರು ಅಭ್ಯಸಿಸುವ ಗದ್ಯ–ಪದ್ಯದಲ್ಲಿ ಕಾಣಿಸಿಕೊಳ್ಳುತ್ತಿರಬೇಕು. ಇಂಗ್ಲಿಷಿನಲ್ಲಿ ಇಂಥ ಶಬ್ದಗಳು ಸುಮಾರು 3000 ಇವೆಯೆಂದು ತಜ್ಞರು ಕಂಡುಹಿಡಿದಿದ್ದಾರೆ.

(ಊ) ಗದ್ಯ–ಪದ್ಯ ಸಂಗ್ರಹವನ್ನೂ ಒಂದು ಉಪಪಠ್ಯ ಪುಸ್ತಕವನ್ನೂ ವಿದ್ಯಾರ್ಥಿಗಳು ಅಭ್ಯಸಿಸುತ್ತಾರೆ.

(ಋ) ಸಾಧ್ಯವಿದ್ದರೆ ಸಾದಾ ವಿಷಯಗಳನ್ನು ಕುರಿತು ಕಲಿತ ಭಾಷೆಯಲ್ಲಿ ಮಾತನಾಡುವುದು ; ಸಂಭಾಷಣೆಯನ್ನು ಹಾಗೂ ಲೇಖನವನ್ನೂ ಉಳಿದ ಆಧುನಿಕ ಭಾಷೆಗಳ ವ್ಯಾಸಂಗದಲ್ಲಿ ನಿರೀಕ್ಷಿಸಬಹುದು. ಇಂಗ್ಲಿಷಿನಲ್ಲಿ ಇದು ಸುಲಭಸಾಧ್ಯವಲ್ಲ. ಆ ವಿಷಯವನ್ನು ಮುಂದೆ ಚರ್ಚಿಸಿದೆ.

ಇಂಗ್ಲಿಷು ಇವತ್ತಿಗೆ ಜಾಗತಿಕ ಭಾಷೆಯಾಗಿದೆ. ಅದರ ಹೊಟ್ಟೆಯಲ್ಲಿ ಅನೇಕ ಉಪ ಭಾಷೆಗಳಿವೆ : ಲಂಡನ್ ಡೈಯಲೆಕ್ಟ್, ಸ್ಕಾಟ್ಸ್, ಯಾರ್ಕ್‌ಷೈರ್ ಡೈಯಲೆಕ್ಟ್ ಮುಂತಾಗಿ. ಆದರೆ ಇಂಗ್ಲಿಷು ತಳೆದ ಜಾಗತಿಕ ರೂಪದಲ್ಲಿ ಅಮೆರಿಕನ್, ಆಸ್ಟ್ರೇಲಿಯನ್, ಸೌತ್ ಆಫ್ರಿಕನ್, ಕನೇಡಿಯನ್ ಮುಂತಾದ ಪ್ರಕಾರಗಳಿವೆ. ಇಂಗ್ಲೆಂಡಿನ ಜನ ಜಗತ್ತಿನ ಬೇರೆಬೇರೆ ಭಾಗಗಳಿಗೆ ಹೋಗಿ ಅಲ್ಲಿ ನೆಲಸಿದಂತೆ ಅಲ್ಲಿಯ ಪರಿಸರದಂತೆ ಕೆಲವು ಪರಿವರ್ತನೆಗಳನ್ನು ಹೊಂದಿದ ಇಂಗ್ಲಿಷುಗಳು ಇವು, ಇಂಗಿ ಷ್–ಇಂಗ್ಲಿಷ್, ಆಫ್ರಿಕನ್–ಇಂಗ್ಲಿಷ್ ಎಂದು ಬೇರೆ ಬೇರೆ ಜನಾಂಗಗಳು ತಮ್ಮ ದೇಶೀಯ ಭಾಷೆಗಳ ಜೊತೆಗೆ ರಾಜಕೀಯ ಕಾರಣಗಳ ಸಲುವಾಗಿ ಕಲಿತು ಇಂದಿಗೂ ಉಳಿಸಿಕೊಂಡ ಇಂಗ್ಲಿಷುಗಳು ತುಸು ಭಿನ್ನವಾಗಿವೆ. ಇವಕ್ಕೆ ಸ್ವತಂತ್ರ ಪ್ರಕ್ರಿಯೆಯಿಲ್ಲ. ಇವುಗಳ ವ್ಯಾಕರಣ ಇಲ್ಲವೆ ತಿರುಳುನುಡಿಗಳು ಇಂಗ್ಲಿಷಿನ ಸ್ವತಂತ್ರ ಪ್ರತಿಭೆ ಹಾಗೂ ಉತ್ಪಾದಕ ಶಕ್ತಿಯಿದ್ದ ದೇಶಗಳಿಂದ ಮಾತ್ರ ಬರಬಲ್ಲವು. ಆಲುಂಕಾರಗಳು, ಅಲ್ಲಲ್ಲಿ ಕೆಲವು ಶಬ್ದಗಳನ್ನು ಮಾತ್ರ ದೇಶೀಯ ಭಾಷೆಗಳು ತಮ್ಮತಮ್ಮ ಇಂಗ್ಲಿಷುಗಳಲ್ಲಿ ಸೇರಿಸಿಕೊಳ್ಳಬಲ್ಲವು.

ಹೀಗಾಗಿ ಇಂಗ್ಲಿಷನ್ನು ಒಂದು ಇತಿಯಾದ ಭಾಷೆಯೆಂದು ಕಲಿತುಕೊಡು ಅದನ್ನು ತಿಳಿದು, ಮಾತನಾಡಿ, ಬರೆದು ಓದಿ ಗ್ರಹಿಸಿಕೊಳ್ಳುವ ಅನೇಕ ಮುಖ ಪ್ರಕ್ರಿಯೆಯು ಇಂದು ಕಷ್ಟಕರವಾಗಿದೆ. ಕಾರಖಾನೆಗಳ ಇಂಗ್ಲಿಷು, ಇಂಜನಿಯರಿಂಗ್ ಇಂಗ್ಲಿಷು, ಕೋರ್ಟು ಕಚೇರಿಗಳ ಇಂಗ್ಲಿಷು, ವೈದ್ಯಕೀಯ ಇಂಗ್ಲಿಷು—ಹೀಗೆ ಭಿನ್ನ ಭಿನ್ನ ಪ್ರಕಾರದ ಇಂಗ್ಲಿಷುಗಳು 'ಟೇಪ್' ಆಗಿ ದೊರೆಯುತ್ತವೆ, ಅದೇ ಪ್ರಕಾರ ಬಳಕೆಮಾತಿನ ಇಂಗ್ಲಿಷು, ಬರವಣಿಗೆಯ ಇಂಗ್ಲಿಷು, ಅರ್ಥಗ್ರಹಣದ ಇಂಗ್ಲಿಷು : ಹೀಗೆ ವಿವಿಧ ಇಂಗ್ಲಿಷುಗಳ ಪಠ್ಯಕ್ರಮಗಳು (3 ತಿಂಗಳು—4 ತಿಂಗಳಿನ ಸರ್ಟಿಫಿಕೆಟ್ ಇಲ್ಲವೆ ಡಿಪ್ಲೊಮಾ ಕೋರ್ಸ್‌ಗಳು) ಜಗತ್ತಿನ ತುಂಬ ಹರಡಿಕೊಂಡಿವೆ.

ಇಂಗ್ಲಿಷು ಮಾತೃಭಾಷೆಯೆಂದು ಮಾತನಾಡುವವರೇ ಇಲ್ಲದಾಗಿ ಭಾರತೀಯರೂ ಕ್ರಮೇಣ ಇಂಗ್ಲಿಷಿನಿಂದ ದೂರವಾಗುತ್ತಿರುವಾಗ ಶಾಲೆ–ಕಾಲೇಜುಗಳಲ್ಲಿ ಮೊದಲಿನಂತೆ ಇಂಗ್ಲಿಷು ಕಲಿತು ಇಂಗ್ಲಿಷಿನ ಮೇಲೆ ಸರ್ವಾಂಗೀಣ ಪ್ರಭುತ್ವವನ್ನು ಸ್ಥಾಪಿಸುವೆವೆನ್ನುವದು ಕನಸಿನಲ್ಲಿ ಮುಂಡಿಗೆ ತಿಂದಂತೆಯೇ ಸರಿ. ಸಾರಗ್ರಹಣಕ್ಕೆ ನೆರವಾಗುವಷ್ಟು ಇಂಗ್ಲಿಷನ್ನು ನಾವು ಹೈಸ್ಕೂಲುಗಳಲ್ಲಿ ಕಲಿಯಬಹುದು. ಇದರಿಂದ ಇಂಗ್ಲಿಷಿನಲ್ಲಿ ಪುಸ್ತಕಗಳನ್ನು ಓದಿ ಕೊಳ್ಳಲು ಸಹಾಯವಾಗುವದು. ಇಂಗ್ಲಿಷನ್ನು ಹೆಚ್ಚಿನ ಜ್ಞಾನಾರ್ಜನೆಗಾಗಿ ಕನ್ನಡದಲ್ಲಿ ಭಾಷಾಂತರವಾಗದಿದ್ದ ಪುಸ್ತಕ ಓದಲು ಇಲ್ಲವೆ ಸೇರ್ಪಡೆಯಾಗದ ಜ್ಞಾನವನ್ನು ಪಡೆಯಲು ಉಪಯೋಗಿಸಬಹುದು. ಸಾಧ್ಯವಿನ್ನಷ್ಟು ಮಾತು–ಬರೆಹ ಸಾಧಿಸಬಹುದು. ಇದಕ್ಕೂ ಹೆಚ್ಚಿಗೆ ಇಂಗ್ಲಿಷನ್ನು ಹೈಸ್ಕೂಲು ಪಠ್ಯ ಕ್ರಮದಿಂದಲೇ ಸಂಪಾದಿಸಲು ಬಯಸುವದು ಸಾಹಸವೇ ಸರಿ. ಅಂತಹ ಶುದ್ಧ ಮಾತು–ಬರೆಹಗಳು ಶಿಕ್ಷಕರಿಗೇ ಸಾಧಿಸಿರುವುದಿಲ್ಲ. ಇದಿನ ಇಂಗ್ಲಿಷಿನಲ್ಲಿ ಬಳಕೆ ಮಾತು–ಬರೆಹಗಳನ್ನು ಕಲಿಯಲು ಮುಂಜಾನೆಯ ಇಲ್ಲವೆ ಸಾಯಂಕಾಲದ ಸರ್ಟಿಫಿಕೆಟ್ ಇಲ್ಲವೆ ಡಿಪ್ಲೊಮಾ ಪಠ್ಯಕ್ರಮಗಳನ್ನು ಅನುಸರಿಸಿ ಪರೀಕ್ಷೆಗೆ ಕುಳಿತುಕೊಳ್ಳಬೇಕು.

ಇಂಗ್ಲಿಷನ್ನೇ ಮಾಧ್ಯಮವಾಗಿ ಬಳಸುವ ಶಾಲೆಗಳು ಬೆಳೆಯುತ್ತಿವೆ ; ಹುಟ್ಟುತ್ತಲಿವೆ. ನಗರಗಳಲ್ಲಿ ಇಂತಹ ಶಾಲೆಗಳಲ್ಲಿಯು ವಿದ್ಯಾರ್ಥಿಗಳು ಒಂದು ತರಹದ ಉಚ್ಚಾರದ ಇಂಗಿಷನ್ನು ಮಾತನಾಡುತ್ತಾರೆ. ಅವರ ಮನೆಮಾತುಗಳು ಬೇರೆಬೇರೆ ಭಾಷೆಗಳಾಗಿರುವುದರಿಂದ ಇಂತಹ ವಿದ್ಯಾರ್ಥಿಗಳು ಒಂದೆಡೆ ಸೇರಿ ಸಂಭಾಷಣೆ ನಡೆಸಲು ಇಂಗ್ಲಿಷು ಸಹಾಯಕವಾಗುತ್ತದೆ. ಆದರೆ ಇಂಗ್ಲಿಷು ಪ್ರಾಥಮ್ಯವಿದ್ದ ಮಾತ್ರಕ್ಕೆ ಇಂಗ್ಲಿಷು ಚೆನ್ನಾಗಿ ಬರುವದೆಂದು ತಿಳಿಯುವದು

ಭ್ರಮೆಯಲ್ಲದೆ ಬೇರೆ ಅಲ್ಲವೆಂದು ಹಿಂದೆ ಹೇಳಿದ್ದೇವೆ. ಅಲ್ಲದೆ ಪ್ರಾದೇಶಿಕ ಭಾಷೆಯು ಹಾಗೂ ಮಾತೃಭಾಷೆಯಂ ಜ್ಞಾನವಿಲ್ಲದೆ ಇಂತಹ ವಿದ್ಯಾರ್ಥಿಗಳು ತಮ್ಮ ಸಂಸ್ಕೃತಿಗೆ ದೂರವಾಗಿ ಉಳಿಯುವದಲ್ಲದೆ ಕ್ರಿಯಾತ್ಮಕ ಶಿಕ್ಷಣ ಕ್ರಮದಿಂದಲೇ ದೂರವಾಗುತ್ತಾರೆ. ಮಂಜು ಬೆಳಕಿನಲ್ಲಿ ಕಾರಿನ ಹೆಡ್‌ಲೈಟುಗಳಂತೆ ವಿಚಾರಗಳು ದೀರ್ಘವಾದರೂ ಸತ್ವಹೀನವಾಗಿ ಅವರ ಕಣ್ಣೆದುರಿಗೆ ಹಾಯುತ್ತವೆ. ಇಂಗ್ಲಿಷು ಹೀಗೆ ಮಾಧ್ಯಮವಿದ್ದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿಯೂ 3ನೆಯ ಇಯತ್ತೆಯಿಂದ ಪ್ರಾರಂಭಿಸಿ ಪ್ರತಿಯೊಂದು ಇಯತ್ತೆಗೆ, ಉಳಿದ ಭಾಷೆಗಳು ಮಾಧ್ಯಮವಿದ್ದ ಶಾಲೆಗಳಲ್ಲಿಯಂತೆ, ಕನ್ನಡ ಕಲಿಸಿ 4ನೆ ಇಯತ್ತೆಯಿಂದ 10ನೆ ಇಯತ್ತೆ (ಅಂದರೆ ಎಸ್. ಎಸ್. ಎಲ್. ಸಿ.) ಮುಗಿಯುವವರೆಗೆ 150 ಅಂಕಗಳ ಕನ್ನಡವನ್ನು ಕಡ್ಡಾಯವಾಗಿ ಕಲಿಸುವಂತಾಗಿರಬೇಕು.

ಒಟ್ಟಾರೆ ದ್ವಿತೀಯ ಭಾಷೆಯಾಗಿ ಒಂದು ಆಧುನಿಕ ಭಾಷೆಯನ್ನು ಅಭ್ಯಸಿಸುವಾಗ ವಿದ್ಯಾರ್ಥಿಯ ಗುರಿಗಳೇನು ? ಈ ಮೊದಲೇ ಸ್ಪಷ್ಟಪಡಿಸಿದಂತೆ ಸಾರಗ್ರಹಣ, ಲಿರ್ಥ ಗ್ರಹಣಗಳು ಇಲ್ಲಿಯ ಬಾಷಾಭ್ಯಾಸದ ಮುಖ್ಯ ಗುರಿಯಾಗುತ್ತವೆ. ಗೊತ್ತುಪಡಿಸಿದ ಪಠ್ಯ ಪುಸ್ತಕಗಳನ್ನು ಸಹ ಈ ಭಾಷಾದೃಷ್ಟಿಯಿಂದ ಅಭ್ಯಸಿಸಬೇಕಾಗುತ್ತದೆ ರಸಾನುಭವ— ತಂತ್ರ—ಅಲಂಕಾರ— ತಾಳಲಯ ಮೊದಲಾದ ಸಾಹಿತ್ಯಕ ದೃಷ್ಟಿಗಳು ಇಲ್ಲಿ ಅಪ್ರಸ್ತುತ ವಾಗುತ್ತವೆ. ಸಂಭಾಷಣೆ—ಬರೆಹಗಳು ಆಧುನಿಕ ಭಾರತೀಯ ಭಾಷೆಗಳಲ್ಲಿ ಸಾಧ್ಯವಾಗ ಬಲ್ಲವು. ಆದರೆ ಇಲ್ಲಿ ತನ್ನ ಪರಿಸರವೇ ಇಲ್ಲದ ಇಂಗ್ಲೀಷು ಭಾಷೆಯನ್ನು ಕಲಿಯಬೇಕಾದಾಗ ಮಾತ್ರ ದೋಷಯುಕ್ತವಾದ ಸಂಭಾಷಣೆ ಹಾಗೂ ಬರೆಹ ಮಾತ್ರ ಸಾಧ್ಯವಾಗಬಹುದು.

ಒಂದು ಪ್ರಾಚೀನ ಭಾಷೆಯನ್ನು ದ್ವಿತೀಯ ಭಾಷೆಯೆಂದು ಅಭ್ಯಾಸಕ್ಕೆ ತೆಗೆದು ಕೊಂಡಾಗ ಅಭ್ಯಾಸದ ಗುರಿ ಮೇಲಿನ ಗುರಿಗಳಿಗಿಂತ ಬೇರೆಯಾಗುತ್ತದೆ. ಇಲ್ಲಿಯ ಗುರಿ ಗಳನ್ನು ಹೀಗೆ ಉಲ್ಲೇಖಿಸಬಹುದು.

(1) ಸಂಸ್ಕೃತ ವ್ಯಾಕರಣದ ಮೂಲತತ್ವ ಹಾಗು ರೂಢಿಗಳನ್ನು ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಸಿಕೊಡುವದು.

(2) ತನ್ನ ಪ್ರಾದೇಶಿಕ ಭಾಷೆಯನ್ನು ಇನ್ನಿಷ್ಟು ಚೆನ್ನಾಗಿ ತಿಳಿದುಕೊಳ್ಳುವಂತೆ ಆ ಭಾಷೆಯಲ್ಲಿದ್ದ ತತ್ಸಮ ಶಬ್ದಗಳು ಹಾಗು ಆಗಿರಬಹುದಾದ ಅವುಗಳ ಅರ್ಥಾಂತರ ಇಲ್ಲವೆ ರೂಪಾಂತರ. ಸಂಸ್ಕೃತ ವಾಕ್ಯರಚನೆ, ಸಂಧಿ, ಸಮಾಸ ಮೊದಲಾದ ವಿಶಿಷ್ಟ ಪ್ರಯೋಗಗಳನ್ನು ತಿಳಿಸಿಕೊಡುವದು. (ಈ ವಿಷಯ ವನ್ನು ಕುರಿತು ಹೊಸತಾಗಿ ಒಂದು ಪುಸ್ತಕವನ್ನು ಬರೆಯಿಸಬೇಕು.)

(3) ಸಂಸ್ಕೃತ ಗದ್ಯ–ಪದ್ಯಗಳನ್ನು ಶುದ್ಧವಾಗಿ ದೋಷರಹಿತವಾಗಿ ಓದಲು ಕಲಿಸ ಬಹುದು.

(4) ಸಂಸ್ಕೃತ ಭಾಷೆ ಹಾಗು ಸಾಹಿತ್ಯದ ವಿವಿಧ ಹಂತಗಳ ಸೌಂದರ್ಯವನ್ನು ಉದಾಹರಿಸುವ ಸುಲಭ ಉದ್ಧೃತ ಭಾಗಗಳನ್ನು ವೇದೋಪನಿಷತ್ತು, ಪುರಾಣ, ಮಹಾಕಾವ್ಯ ನಾಟಕ, ಕಥೆ, ಗದ್ಯ, ಗೀತಕಾವ್ಯ, ಸುಭಾಷಿತ ಮೊದಲಾದ ಸಾಹಿತ್ಯ ಪ್ರಕಾರಗಳಿಂದ ಆಯ್ದು ಅವುಗಳ ದ್ವಾರಾ ಈ ಸೌಂದರ್ಯಾನುಭವ ವನ್ನು ವಿದ್ಯಾರ್ಥಿಗಳಿಗೆ ತಂದುಕೊಡುವದು.

(5) ಸಂಸ್ಕೃತದಿಂದ ಕನ್ನಡಕ್ಕೆ ಒಂದು ಉದ್ಧೃತ ಭಾಗವನ್ನು ಭಾಷಾಂತರಿಸುವದು.

(6) ಭಾರತೀಯ ಸಂಸ್ಕೃತಿಯ ಸ್ಪಷ್ಟ ಕಲ್ಪನೆ ಬರುವಂತೆ ಅಭ್ಯಾಸಕ್ಕೆ ಗದ್ಯ-ಪದ್ಯ ಭಾಗಗಳನ್ನು ಆಯ್ದುಕೊಳ್ಳುವದು.

ಇಲ್ಲಿ ಪ್ರಾಚೀನ ಭಾಷೆಯೊಂದನ್ನು ಅಭ್ಯಸಿಸುವಾಗ ಸಂಭಾಷಣೆ ಇಲ್ಲವೆ ಬರೆಹದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅರ್ಥಗ್ರಹಣ ಇಲ್ಲವೆ ರಸಗ್ರಹಣಕ್ಕೇನೆ ಇಲ್ಲಿ ಹೆಚ್ಚಿನ ಪ್ರಾಧಾನ್ಯವಿದೆ. ಉಳಿದ ಭಾಷೆಗಳ ಅಭ್ಯಾಸದಲ್ಲಿ ಕಂಡುಬರುವ ಈ ಎರಡು ನೈಪುಣ್ಯಗಳು (skills) ಪ್ರಾಚೀನ ಭಾಷೆಯ ಅಭ್ಯಾಸದಲ್ಲಿ ಇಲ್ಲವಾದಕಾರಣ ಅಭ್ಯಾಸವನ್ನು ಸರಿಸಮ ಮಟ್ಟಕ್ಕೆ ತರಲು ಈ ಕೆಳಗಣ ಅಂಶಗಳನ್ನು ಉಪಯೋಗಿಸಲಾಗುವದು.

(ಅ) ಅರ್ಥ–ರಸ–ಗ್ರಹಣಕ್ಕಾಗಿ ವಿವಿಧ ಸಾಹಿತ್ಯ ಪ್ರಕಾರಗಳಿಂದ ಗದ್ಯ-ಪದ್ಯ ಆಯ್ದುಕೊಳ್ಳುವದು.

(ಆ) ಒಂದು ಸುಲಭ ಸಂಸ್ಕೃತ ಗದ್ಯವನ್ನು ಉಪಪಠ್ಯವನ್ನು ಗೊತ್ತುಪಡಿಸ ಬೇಕು. ಅಲ್ಲದೆ ಹೆಚ್ಚಿನ ಪ್ರಶ್ನೆಗಳನ್ನು ಅರ್ಥಗ್ರಹಣದಲ್ಲಿ ಕೇಳಿ ರಸಗ್ರಹಣ ವನ್ನು ಕುರಿತು ಒಂದೋ ಎರಡೋ ಇರಬಹುದು.

(ಇ) ಛಂದಸ್ಸಿನ ಅಭ್ಯಾಸ.

(ಈ) ಅಲಂಕಾರ ಇತ್ಯಾದಿ ಸಾಹಿತ್ಯಾಂಶಗಳ ಅಭ್ಯಾಸ.

ಸಂಭಾಷಣೆ ಹಾಗು ಸಂಸ್ಕೃತ ಲೇಖನ ವಿದ್ಯೆಯಂ ವಿಷಯಗಳಿಗಾಗಿ ಪಾಠಶಾಲೆಗಳ ಪರಂಪರೆಯ ವಿರ್ಪಾಟಿದೆ. ಅಲ್ಲದೆ ಸ್ನಾತಕೋತ್ತರ ಸಂಸ್ಕೃತದ ಅಭ್ಯಾಸಕ್ರಮದಲ್ಲಿ ಒಂದು ಐಚ್ಛಿಕ ಪೇಪರನ್ನು ಸಂಭಾಷಣೆ–ಲೇಖನಗಳಿಗಾಗಿಯೇ ಇಡಬಹುದು.

ಈಚಿಗಿನ ಸಂಸ್ಕೃತ ಸಾಹಿತ್ಯದ ಗದ್ಯ–ಪದ್ಯ ಭಾಗಗಳನ್ನು ಅಭ್ಯಾಸಕ್ರಮಕ್ಕಾಗಿ ಒಂದೊ ಎರಡೋ ಉದ್ದರಗಳನ್ನು ಆಯಿದರಬೇಕಲ್ಲದೆ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇಂದಿನ ಸಂಸ್ಕೃತ ಸೇರ್ಪಡೆಯಾಗಿರುವ ಕಾರಣವಿಲ್ಲ. ಇಂದಿನ ಸಂಸ್ಕೃತ ಸಾಹಿತ್ಯವನ್ನು ಮೀರಿದ ಸಾಹಿತ್ಯ ಪ್ರತಿಯೊಂದು ಆಧುನಿಕ ಭಾರತೀಯ ಭಾಷೆಯಲ್ಲಿ ದೊರೆಯುತ್ತದೆ. ಸಂಸ್ಕೃತವು ಜಗನ್ಮಾನ್ಯವಾಗಿರುವದು ಅದರಲ್ಲಿರುವ ಪ್ರಾಚೀನ ಸಾಹಿತ್ಯಕ್ಕೋಸ್ಕರ.

ಉಳಿದ ಪ್ರಾಚೀನ ಭಾಷೆಗಳು

ದ್ವಿತೀಯ ಭಾಷೆಗಳಿಂದು ಇವುಗಳ ಅಭ್ಯಾಸವನ್ನು ಸಹ ಸಂಸ್ಕೃತದ ಅಭ್ಯಾಸದ ಮಾದರಿಯಂ ಮೇಲೆ ಏರ್ಪಡಿಸಬಹುದು.

ತೃತೀಯ ಭಾಷೆ

ಕನ್ನಡ, ಉಳಿದ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು. ಇಂಗ್ಲಿಷು ಇಲ್ಲವೆ ಪ್ರಾಚೀನ ಭಾಷೆಗಳಲ್ಲಿ ಒಂದು ತೃತೀಯ ಭಾಷೆಯಾಗಬಹುದು.

ಸಮಿತಿಯ ಸಲಹೆಯ ಪ್ರಕಾರ ಕನ್ನಡವು ಆಡಳಿತದ ಸೌಕರ್ಯಕ್ಕಾಗಿ ಮಾತ್ರ 1985-86ರವರೆಗೆ ತೃತೀಯ ಇಲ್ಲವೆ ದ್ವಿತೀಯ ಭಾಷೆಯಾಗುವದು. 1986-87 ರಿಂದ ಕನ್ನಡೇತರ ವಿದ್ಯಾರ್ಥಿಗಳಿಗೂ ಅದು ಪ್ರಥಮ ಭಾಷೆ. ಕನ್ನಡ ವಿದ್ಯಾರ್ಥಿಗಳಿಗಂತೂ ಅದು 1981-82 ರಿಂದಲೇ ಪ್ರಥಮ ಭಾಷೆಯಾಗುವದು.

ತೃತೀಯ ಭಾಷೆಗೆ 50 ಅಂಕಗಳಿವೆ.

ಉಳಿದ ಆಧುನಿಕ ಭಾರತೀಯ ಭಾಷೆಗಳಂ ತೃತೀಯ ಭಾಷೆಗಳಾದಾಗ ಅವುಗಳ ಭ್ಯಾಸದ ಗುರಿ ಏನಿರಬೇಕಂ ?

(1) ವೃತ್ತಪತ್ರಿಕೆಗಳನ್ನೂ, ಪತ್ರಗಳನ್ನೂ, ಚಿಕ್ಕ ಚಿಕ್ಕ ಕಥೆಗಳನ್ನೂ, ಪಠ್ಯಪುಸ್ತಕದಲ್ಲಿರುವ ಸರಳ ಗದ್ಯ-ಪದ್ಯವನ್ನೂ ಓದಿ ಅರ್ಥಮಾಡಿಕೊಳ್ಳುವ ಶಕ್ತಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವದು.

(2) ದೈನಂದಿನ ವ್ಯವಹಾರದಲ್ಲಿ ಆ ಭಾಷೆಯಲ್ಲಿ ಮಾತನಾಡುವ ಅನುಕೂಲವನ್ನು ಮಾಡಿಕೊಡುವದು.

(3) ಆ ಭಾಷೆಯ ವ್ಯಾಕರಣದ ಮೂಲ ತತ್ವ ಹಾಗು ರೂಢಿಗಳನ್ನು ತಿಳಿಸಿ ಕೊಡುವುದು.

(4) ಅರ್ಜಿಗಳನ್ನು ಬರೆಯುವದು, ಪತ್ರಗಳು, ಪಠ್ಯಪುಸ್ತಕಗಳಲ್ಲಿಯಂ ವಿಷಯಂಗಳ ಮೇಲೆ ಒಂದೆರಡು ಪ್ಯಾರಾಗಳು, ಭಾಷೆಯಲ್ಲಿರುವ ಕೆಲವು ಪ್ಯಾರಾಗಳ - ಭಾಷಾಂತರಗಳು : ಹೀಗೆ ಲೇಖಿನ ಕಾರ್ಯವನ್ನೆಸಗುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಪಡೆದಿರಬೇಕು.

(5) ಆ ಭಾಷೆಯಲ್ಲಿ ಮಾಡಿದ ಉಪನ್ಯಾಸಗಳನ್ನು ತಿಳಿದುಕೊಳ್ಳುವ ಯೋಗ್ಯತೆ ಬಂದಿರಬೇಕು.

ಹೀಗೆ ಸಾರಗ್ರಹಣ, ಲೇಖಿನ, ಉಕ್ತೋಕ್ತಿಯ ಸಾರಗ್ರಹಣ, ಸಂಭಾಷಣಾ ಸೌಲಭ್ಯ ಹಾಗು ಲೇಖಿನ ಸೌಲಭ್ಯಗಳು ಹಂತಹಂತವಾಗಿ ಸಾಧಿಸುವಂತೆ ಪ್ರೌಢಶಾಲೆಯ ಮೂರು ವರ್ಷಗಳ ಪಠ್ಯಕ್ರಮವನ್ನು ಸುಲಭಾಂಶಗಳಿಂದ ಪ್ರಾರಂಭಿಸಿ ಕಠಿಣವಾದುದನ್ನು ನಾಲ್ಕೂ ಭಾಷಾ ನೈಪುಣ್ಯಗಳಲ್ಲಿ ಕ್ರಮೇಣ ಸೇರಿಸುತ್ತ ಹೋಗಬೇಕು .

ಮಾತನಾಡುವ ಅನುಕೂಲತೆ ಇಂಗ್ಲೀಷಿನಲ್ಲಿ ಮಾತ್ರ ದೋಷರಹಿತವಾಗಿ ಸಾಧಿಸಲಿಕ್ಕಿಲ್ಲ ; ಸಾಧ್ಯವಾದಷ್ಟನ್ನು ಸ್ವಾಗತಿಸಬೇಕಂ.

ತೃತೀಯ ಭಾಷೆಯು ಸಂಸ್ಕೃತ ಇಲ್ಲವೆ ಇನ್ನೊಂದಂ ಪ್ರಾಚೀನ ಭಾಷೆಯಿದ್ದಾಗ ಅಭ್ಯಾಸದ ಗುರಿಗಳು ಇನ್ನೂ ಸ್ವಲ್ಪ ಬೇರೆಯಾಗುತ್ತವೆ.

ಲೇಖಿನಕಾರ್ಯ ಇಲ್ಲಿ ಸಾಧ್ಯವಿಲ್ಲ. ಓದಿದ ಪಠ್ಯಪುಸ್ತಕಗಳೊಳಗಿನ ಒಂದೆರಡು ಪ್ಯಾರಾಗಳನ್ನು ಭಾಷಾಂತರ ಮಾಡಬಹುದು. ಅದಲ್ಲದೆ ವಿದ್ಯಾರ್ಥಿಗಳು ಓದುವೇ ಇದ್ದ ಅಷ್ಟೇ ಸುಲಭವಾದ ಒಂದು ಉದ್ಧೃತ ಭಾಗದ ಸಾರವನ್ನು ಕನ್ನಡದಲ್ಲಿ ಕೊಡಬಹುದು. ಅಲ್ಲದೆ ಲೇಖಿನ ಕಾರ್ಯ ಇಲ್ಲವೆ ಸಂಭಾಷಣೆ ಇಲ್ಲಿ ವ್ಯವಹಾರದ ದೃಷ್ಟಿಯಿಂದ ಚಮತ್ಕಾರಿಕವಾಗಬಹುದೇ ಹೊರತು ಬಹುತೇಕ ಪ್ರಯೋಜನಕರವಲ್ಲ.

ಆದರೆ ರೇಡಿಯೋವಾರ್ತೆಗಳ ಅರ್ಥಗ್ರಹಣ, ಸಂಸ್ಕೃತ ಪ್ರವಚನಗಳ ಸಾರಗ್ರಹಣ, ಪಠ್ಯಪುಸ್ತಕಗಳ ಹಾಗು ಉಪಪಠ್ಯ ಪುಸ್ತಕಗಳ ರಸಗ್ರಹಣ ಹಾಗು ಅರ್ಥಗ್ರಹಣ, ಅದೇ ಪಾತಳಿಯ ಭಾಷಾ ಸೌಲಭ್ಯದ ಗದ್ಯ-ಪದ್ಯಗಳ ಅರ್ಥ-ರಸಗ್ರಹಣ : ಇದೆಲ್ಲ ವಿದ್ಯಾರ್ಥಿಗಳಿಗೆ ಸಾಧ್ಯವಾಗಬೇಕು.

ಅಲ್ಲದೆ ಹಲವಾರು ಸಂಸ್ಕೃತ ಪದ್ಯಗಳ ಬಾಯಿಪಾಠ ಮತ್ತು ದೋಷರಹಿತವಾಗಿ ಶಬ್ದಗಳ ಅಕ್ಷರಸಂಯೋಜನೆ (spelling) ಹಾಗು ಉಚ್ಚಾರಗಳು ಸಹಜ ಸಾಧ್ಯವಾಗ ಬೇಕು. ಭಾಷೆಯ ವ್ಯಾಕರಣದ ಸರಳ ತತ್ವ-ರೂಢಿಗಳನ್ನೂ, ಸಂಧಿ, ಸಮಾಸಗಳಂತಹ ಘಟಕಗಳನ್ನೂ ಚೆನ್ನಾಗಿ ವಿದ್ಯಾರ್ಥಿಯು ತಿಳಿದುಕೊಂಡಿರಬೇಕು.

ಅಲ್ಲದೆ ಒಂದು ಕೃತಿಯ ರಸವಂತಿಕೆ, ಧ್ವನಿ, ಭಾಷೆಯ ಅಲಂಕಾರಿಕತೆ ಹಾಗು ತಾಳಲಯ, ವಿವಿಧ ಸಾಹಿತ್ಯ ಪ್ರಕಾರಗಳು ತಂತ್ರನೈಪುಣ್ಯ ಮೊದಲಾದ ವಿಷಯಗಳನ್ನು ಕುರಿತು ರಸಾಸ್ವಾದನೆ (appreciation) ವಿದ್ಯಾರ್ಥಿಗೆ ಸಾಧ್ಯವಾಗಿರಬೇಕು.

ಉಳಿದ ಪ್ರಾಚೀನ ಭಾಷೆಗಳ ಅಭ್ಯಾಸಕ್ರಮವನ್ನೂ ಇದೇ ರೀತಿಯಾಗಿ ಅಳವಡಿಸ ಬಹುದು.

ತೃತೀಯ ಭಾಷೆಗೆ 50 ಅಂಕಗಳಿವೆ. ಪ್ರಥಮ ಭಾಷೆಯ ಅಭ್ಯಾಸದಲ್ಲಿ ಒಂದು ಪೂರ್ಣ ದೃಷ್ಟಿಯಿದೆ. ಅಲ್ಲಿ ನಾಲ್ಕು ಭಾಷಾ ನೈಪುಣ್ಯಗಳಿಗೂ (Language skills) ಲಿಖಿತಾರ್ಥಗ್ರಹಣ, ಉತ್ತಾರ್ಥಗ್ರಹಣ, ಉಕ್ತಾಭಿವ್ಯಕ್ತಿ, ಲಿಖಿತಾಭಿವ್ಯಕ್ತಿ, ವ್ಯಾಕರಣ, ತಿರುಳ್ನುಡಿ, ಸಂಧಿ, ಸಮಾಸ ಮೊದಲಾದ ಭಾಷಾ ಶಾಸ್ತ್ರಾಂಗಗಳ ತಿಳುವಳಿಕೆಗಳು, ರಸಾನುಭವ, ಅಲಂಕಾರಿಕಭಾಷೆ, ತಾಳಲಯ ಹಾಗು ಛಂದಸ್ಸು, ತಂತ್ರ, ಸಾಹಿತ್ಯ ಪ್ರಕಾರ ಮೊದಲಾದ ಸಾಹಿತ್ಯಾಂಶಗಳ ಸ್ವಾರಸ್ಯಗ್ರಹಣಕ್ಕೂ ಕೂಡಿಯೇ ಅವಕಾಶವಿದೆ. ದ್ವಿತೀಯ ಭಾಷೆಯ ಅಭ್ಯಾಸದಲ್ಲಿ ನಾಲ್ಕು ಭಾಷಾನೈಪುಣ್ಯಗಳನ್ನೂ ವ್ಯಾಕರಣ ಮೊದಲಾದ ಶಾಸ್ತ್ರಾಂಗಗಳನ್ನೂ ದಾಟಿ ನಾವು ಹೋಗುವುದಿಲ್ಲ. ಇಂಗ್ಲಿಷನ್ನು ದ್ವಿತೀಯ ಭಾಷೆಯೆಂದು ಅಭ್ಯಸಿಸಿದಾಗ ಈ ನಾಲ್ಕು ನೈಪುಣ್ಯಗಳೂ ಚೆನ್ನಾಗಿ ಸಾಧಿಸುವುದಿಲ್ಲ. ಲಿಖಿತ ಇಲ್ಲವೆ ಉಕ್ತಾಭಿವ್ಯಕ್ತಿ ಅಲ್ಲಿ ದುಃಖಸಾಧ್ಯವಾಗುತ್ತದೆ. ಸಾಧ್ಯವಿದ್ದಲ್ಲಿ ದೋಷಯುಕ್ತವಾಗಿರುತ್ತದೆ. ತೃತೀಯ ಭಾಷೆಯ ಅಭ್ಯಾಸದಲ್ಲಿ ವ್ಯಾಕರಣ ಹಾಗು ಸಂಬಂಧಿಸಿದ ಅಂಶಗಳ ಅಭ್ಯಾಸ ನಡೆಯುತ್ತದೆ. ಆದರೆ ನಾಲ್ಕು ಭಾಷಾನೈಪುಣ್ಯಗಳ ಸಾಧನೆಯು ತೀರ ಸಾಮಾನ್ಯ ಸ್ತರದಲ್ಲಿ ನಡೆಯುತ್ತದೆ. ಇಂಗಿಷಿನಲ್ಲಿ ಅಭಿವ್ಯಕ್ತಿಯ ಎರಡು ನೈಪುಣ್ಯಗಳು ಸಾಧ್ಯವಾಗುವುದೇ ಇಲ್ಲ.

ಸಂಸ್ಕೃತ ಇಲ್ಲವೆ ಇನ್ನೊಂದು ಪ್ರಾಚೀನ ಭಾಷೆಯನ್ನು ದ್ವಿತೀಯ ಇಲ್ಲವೆ ತೃತೀಯ ಭಾಷೆಯೆಂದು ಅಭ್ಯಸಿಸಬಹುದು. ಇಲ್ಲಿ ವ್ಯಾಕರಣ ಹಾಗು ಅದಕ್ಕೆ ಸಂಬಂಧಿಸಿದ ಉಳಿದ ಅಂಶಗಳ ಅಭ್ಯಾಸವಾಗುತ್ತದೆ. ಆದರೆ ಅಭಿವ್ಯಕ್ತಿಯ ಎರಡು ನೈಪುಣ್ಯಗಳ ಅಭ್ಯಾಸ ಇಲ್ಲಿ ಪ್ರಸ್ತುತವಾಗುವುದಿಲ್ಲ. ಅವುಗಳ ಬದಲಾಗಿ ಅಭ್ಯಸಿಸುವ ಪಠ್ಯ ಹಾಗು ಉಪಪಠ್ಯ ಪುಸ ಕ ಗಳ ಪುಟಸಂಖ್ಯೆಗಳ ಆರ್ಥ-ರಸ-ಗ್ರಹಣ, ಛಂದಸ್ಸು, ಅಲಂಕಾರಿಕ ಭಾಷೆ, ರಸಾನುಭವ, ತಂತ್ರ, ಸಾಹಿತ್ಯ ಪ್ರಕಾರ ಮೊದಲಾದ ಸಾಹಿತ್ಯಾಂಶಗಳ ಅಭ್ಯಾಸಕ್ಕೆ ಮಹತ್ವ ಕೊಡುವದು : ಈ ರೀತಿಯಾಗಿ ಪಠ್ಯ ಕ್ರಮದ ಮಟ್ಟವನ್ನು ಸರಿಸಮವಾಗಿ ಮಾಡಬೇಕಾಗುವುದು. ಅಲ್ಲದೆ ಸಂಸ್ಕೃತ ಸಾಹಿತ್ಯ ವಿಕಾಸದ ವಿವಿಧ ಹಂತಗಳಿಂದ ಭಾಗಗಳನ್ನು ಆಯ್ದುಕೊಂಡು ಅವುಗಳ ಸೌಂದರ್ಯಾನುಭವವನ್ನು ಪಡೆದು ಅವು ಭಾರತೀಯ ಸಂಸ್ಕೃತಿಯ ಸ್ಪಷ್ಟ ಕಲ್ಪನೆಯನ್ನು ಹೇಗೆ ಕೊಡುತ್ತವೆಂಬುದನ್ನು ತಿಳಿದುಕೊಳ್ಳಬೇಕಾಗುವುದು.

(3) ಪರೀಕ್ಷೆಗೆ ಕಡ್ಡಾಯದ ವಿಷಯವಾದ ತೃತೀಯ ಭಾಷೆ

ಪರೀಕ್ಷೆಯಂ ವ್ಯವಸ್ಥೆಯೇ ಇಲ್ಲದೇ ತೃತೀಯ ಭಾಷೆಯ ಅಭ್ಯಾಸ ಶಿಥಿಲವಾಗಿದೆ. ಈಗ ಬಹಿರಂಗದಲ್ಲಿ-ಅಂದರೆ-ಭೋಧನದಲ್ಲಿ-ತೃತೀಯ ಭಾಷೆಯನ್ನು ಒಪ್ಪಿಕೊಂಡು ಅಂತ

ರಂಗದಲ್ಲಿ-ಅಂದರೆ ಪರೀಕ್ಷೆಯಲ್ಲಿ-ಅದನ್ನು ಕೈಬಿಡಲಾಗಿದೆ. ಇದು ಕ್ಷೇಮಕರ ವ್ಯವಸ್ಥೆಯಲ್ಲ. ತೃತೀಯ ಭಾಷೆಯ ಅಭ್ಯಾಸಕ್ಕೆ ವಿಪರ್ಯಾಟಿದ್ದರೆ ಅಭ್ಯಾಸದ ಕೊನೆಗೆ ಪರೀಕ್ಷೆಯೂ ಇರಬೇಕು. ಮೇಲಾಗಿ ತೃತೀಯ ಭಾಷೆಯು ಒಂದು ದೃಷ್ಟಿಯಿಂದ ಅರ್ಧ ಭಾಷೆಯೆ ಆಗಿದೆ. ಎರಡು-ಮೂರು ಭಾಷೆಗಳನ್ನು ಕಲಿಸಿ ಪರೀಕ್ಷೆ ತೆಗೆದುಕೊಳ್ಳುವದು ಬಹುಭಾಷಾಬೂಷಿತವಾದ ಭಾರತದಲ್ಲಿ ಭಾರವಾಗುವುದೆಂದು ನಾವು ಹೇಳಲಾರೆವು. ಮೇಲಾಗಿ ಕನ್ನಡವೊಂದನ್ನು ಕಡ್ಡಾಯದ ಭಾಷೆಯನ್ನಾಗಿ ಮಾಡಿ ಉಳಿದೆರಡು ಭಾಷೆಗಳ ಆಯ್ಕೆಯಲ್ಲಿ ಪೂರ್ಣ ಸ್ವಾತಂತ್ರ್ಯವಿರುವಾಗ ಇದು ನ್ಯಾಯವೂ, ಶಿಕ್ಷಣ ಶಾಸ್ತ್ರ ಸಮ್ಮತವೂ ಎಂದು ಸಮಿತಿಯ ಸ್ಪಷ್ಟ ಸಲಹೆಯಿದೆ.

(4) ಸಮಿತಿಯ ಸಲಹೆಗಳು (ಸಾರಾಂಶ ರೂಪದಲ್ಲಿ)

(1) 1981-82 ನೆಯ ಶೈಕ್ಷಣಿಕ ವರ್ಷದಿಂದಲೇ ಕನ್ನಡ ಭಾಷೆಯನ್ನು ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡಿ ಅದು ಕಡ್ಡಾಯದ ವಿಷಯವಾಗಬೇಕು. ಅದಕ್ಕೆ 150 ಅಂಕಗಳಿರಬೇಕು. ಈ ವಿಷಯದಲ್ಲಿ ಒಂದು ತಾತ್ಕಾಲಿಕ ವ್ಯವಸ್ಥೆಯು ಅವಶ್ಯವಾಗಿದೆ. ಅದನ್ನು 8ನೆಯ ಸಲಹೆಯಲ್ಲಿ ಉಲ್ಲೇಖಿಸಲಾಗಿದೆ.

(2) ಕೆಳಗೆ ಕಾಣಿಸಿದ ಭಾಷೆಗಳಲ್ಲಿ ಒಂದನ್ನು ದ್ವಿತೀಯ ಭಾಷೆಯಾಗಿ ಅಭ್ಯಸಿಸ ಬಹುದು. ಅದಕ್ಕೆ 100 ಅಂಕಗಳು :

ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಹಿಂದೀ, ಉರ್ದು : ಹೀಗೆ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು.

ಇಲ್ಲವೆ

ಇಂಗ್ಲಿಷು

ಇಲ್ಲವೆ

ಸಂಸ್ಕೃತ, ಅರೇಬಿಕ್, ಪರ್ಸಿಯನ್, ಲ್ಯಾಟಿನ್, ಗ್ರೀಕ್ : ಈ ಪ್ರಾಚೀನ ಭಾಷೆಗಳಲ್ಲಿ ಒಂದು.

(3) ಒಂದು ತೃತೀಯ ಭಾಷೆಯನ್ನೂ ತೆಗೆದುಕೊಳ್ಳಬೇಕಾಗುವದು. ಅದಕ್ಕೆ 50 ಅಂಕಗಳು. ಮೇಲೆ (2)ರಲ್ಲಿ ಕೊಟ್ಟ ಮಾಲಿಕೆಯಿಂದ ದ್ವಿತೀಯ ಭಾಷೆಯೆಂದು ಆಯ್ದುಕೊಂಡ ಭಾಷೆಯೊಂದನ್ನು ಬಿಟ್ಟು ಆ ಮಾಲಿಕೆಯಲ್ಲಿಯ ಬೇರೆ ಯಾವದೊಂದು ಭಾಷೆಯನ್ನು ತೃತೀಯ ಭಾಷೆಯೆಂದು ತೆಗೆದುಕೊಳ್ಳಬಹುದು.

(4) ತೃತೀಯ ಭಾಷೆಯು ಪರೀಕ್ಷೆಗೆ ಕಡ್ಡಾಯದ ವಿಷಯವಾಗಬೇಕು.

(5) ದ್ವಿತೀಯ ಮತ್ತು ತೃತೀಯ ಭಾಷೆಗಳ ಮಾಲಿಕೆಗಳಲ್ಲಿ ಎಲ್ಲ ಭಾಷಾ ವರ್ಗಗಳೂ ಸೇರ್ಪಡೆಯಾಗುತ್ತವೆ. ಅಭ್ಯಸಿಸಲಿರುವ ಭಾಷೆಯು ಅರ್ವಾಚೀನವಿರಲಿ, ಪ್ರಾಚೀನವಿರಲಿ, ಉಳಿದ ಭಾಷಾವರ್ಗಗಳ ಮಟ್ಟಕ್ಕೆ ಅದರ ಮಟ್ಟವೂ ಸರಿಸಮವಾಗಿರಬೇಕು.

(6) ಪ್ರತಿಭಾವಂತ ವಿದ್ಯಾರ್ಥಿಗಳ ಸುಪ್ತ ಚೇತನವನ್ನು ಉದ್ದೀಪಿಸುವ ಒಂದು ಅರೋಹಣ ಕ್ರಮವೂ ಅವಶ್ಯವಾಗಿದೆ. ಒಂದು ವಿಶಿಷ್ಟ ವಿಷಯಪರೀಕ್ಷೆಯನ್ನು ಈ ಉದ್ದೇಶದ ಸಲುವಾಗಿ ಏರ್ಪಡಿಸಲಾಗಿದೆ. ಈ ವಿಷಯಂಕ್ಕೆ 100 ಅಂಕಗಳು. ಆದರೆ 150 ಅಂಕಗಳಿದ್ದು ನಾಲ್ಕು ಭಾಷಾ ನೈಪುಣ್ಯಗಳು ವ್ಯಾಕರಣ ಹಾಗು ಉಳಿದ ಸಂಬಂಧಿಸಿದ ಅಂಗಗಳು. ಸಾಹಿತ್ಯಾಂಶಗಳು : ಈ ವೈವಿಧ್ಯದ ಪೂರ್ಣ ಅಭ್ಯಾಸವನ್ನು ಇಲ್ಲಿ 100 ಅಂಕ ಗಳಿಗಾಗಿಯೇ ರೂಪಿಸಿದೆ. ಇಂಗ್ಲಿಷು, ಕನ್ನಡ, ಉಳಿದ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು, ಸಂಸ್ಕೃತ ಮೊದಲಾದ ಪ್ರಾಚೀನ ಭಾಷೆಗಳಲ್ಲಿ ಒಂದು : ಇವುಗಳಲ್ಲಿ ಯಾವು ದೊಂದು ಭಾಷೆಯನ್ನು ಇಲ್ಲವೇ ಚಿತ್ರಕಲೆ, ಸಂಗೀತ, ನೃತ್ಯ, ಇತ್ಯಾದಿಗಳಲ್ಲಿ ಒಂದಂ— ಈ ವಿಶಿಷ್ಟ ವಿಷಯಪರೀಕ್ಷೆಗಾಗಿ ತೆಗೆದೆಂಕೊಳ್ಳಬಹುದು. ವಿದ್ಯಾರ್ಥಿಗಳು ಈ ವಿಷಯದಲ್ಲಿ ಪಡೆದ ಅಂಕಗಳನ್ನು ಎಸ್.ಎಸ್.ಎಲ್.ಸಿ.ಯ ಫಲಿತಾಂಶದಲ್ಲಿ ಸೇರಿಸಲಾಗುವದಿಲ್ಲ. ಈ ವಿಷಯದ ಪರೀಕ್ಷೆಯನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಜೊತೆಯಲ್ಲಿಯೋ ಅಥವಾ ಅನಂತರವೋ ನಡೆಸಬಹುದು. ಇದರಲ್ಲಿ ಪ್ರತ್ಯೇಕ ಅರ್ಹತಾಪತ್ರವನ್ನು ಕೊಡಲಾಗುವದು. ಈ ವಿಷಯದ ಮಟ್ಟ ಎಸ್.ಎಸ್.ಎಲ್.ಸಿ.ಗಿಂತ ಸ್ವಲ್ಪ ಮೇಲಿನದಾಗಿರುತ್ತದೆ. ಇದು ಸ್ವಸಂತೋಷದ ಪರೀಕ್ಷೆ. ಈ ವಿಶಿಷ್ಟ ವಿಷಯವನ್ನು ಶಾಲೆಯಲ್ಲಿ ಕಲಿಸುವುದಿಲ್ಲ. ಅದನ್ನು ತೆಗೆದುಕೊಂಡ ವಿದ್ಯಾರ್ಥಿಗಳು ತಾವೇ ಸ್ವತಂತ್ರವಾಗಿ ಅದನ್ನು ಅಭ್ಯಸಿಸುತ್ತಾರೆ.

(7) ಸಂಸ್ಕೃತವು 1981-82ನೆಯೇ ಶೈಕ್ಷಣಿಕ ವರ್ಷದಿಂದ ಪ್ರಥಮ ಭಾಷೆಯಾಗಿ ಉಳಿಯುವದಿಲ್ಲ. ಎರಡನೆಯ ಹಾಗು ಮೂರನೆಯ ಸಲಹೆಯಲ್ಲಿ ಹೇಳಿದಂತೆ ಸಂಸ್ಕೃತವನ್ನು ದ್ವಿತೀಯ ಇಲ್ಲವೆ ತೃತೀಯ ಭಾಷೆಯಾಗಿ ಅಭ್ಯಸಿಸಬಹುದು.

(8) ಮೊದಲನೆಯ ಸಲಹೆಯ ವಿಷಯದಲ್ಲಿ ತಾತ್ಪರ್ತಿಕವಾಗಿ ಮಾಡಬೇಕಾದ ವ್ಯವಸ್ಥೆ.

(ಅ) ಕನ್ನಡೇತರ ವಿದ್ಯಾರ್ಥಿಗಳು ತಮ್ಮ ಶಾಲೆಗಳಲ್ಲಿ ಪ್ರಾಥಮಿಕ 3 ನೆಯ ಇಯತ್ತೆ ಯಿಂದ ಕನ್ನಡವನ್ನು ಕಲಿಯಬೇಕೆಂಬ ನಿಯಮ ಅಂಗೀಕೃತವಾಗಿದ್ದರೂ ಕನ್ನಡ ಶಿಕ್ಷಕರು ನೇಮಕವಾಗಿ ಅದಿನ್ನೂ ಜಾರಿಯಲ್ಲಿ ಬಂದಿಲ್ಲ. ಕಾರಣ ಮೊದಲನೆಯ ಸಲಹೆಯಂತೆ ಕನ್ನಡೇತರ ವಿದ್ಯಾರ್ಥಿಗಳನ್ನು ಕುರಿತು ಆಚರಣೆಗೆ ತರುವ ಪೂರ್ವದಲ್ಲಿ ಕೆಲವೊಂದು ವ್ಯವಸ್ಥೆಗಳನ್ನು ಮಾಡಬೇಕಾಗಿದೆ.

(ಆ) ಮೊತ್ತಮೊದಲು ಸರ್ಕಾರವು ಕನ್ನಡೇತರ ವಿದ್ಯಾರ್ಥಿಗಳ ಶಾಲೆಗಳಲ್ಲಿ ಕೂಡಲೆ, ಅಂದರೆ 1981-82ನೆಯ ಶೈಕ್ಷಣಿಕ ವರ್ಷದಿಂದ ಈ ವಿದ್ಯಾರ್ಥಿಗಳಿಗೆ ಪ್ರಾಥಮಿಕ 3ನೆ ಇಯತ್ತೆಯಲ್ಲಿ ಹೀಗೆ ಕನ್ನಡ ಕಲಿಸಲು ಕನ್ನಡ ಶಿಕ್ಷಕರನ್ನು ನೇಮಿಸಬೇಕು.

(ಇ) 3ನೆ ಇಯತ್ತೆಯಲ್ಲಿ ಹೀಗೆ ಕನ್ನಡ ಕಲಿತ ಈ ಕನ್ನಡೇತರ ವಿದ್ಯಾರ್ಥಿಗಳಿಗೆ ಪ್ರತಿವರ್ಷ ನಾಲ್ಕು ವರ್ಷಗಳವರೆಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುತ್ತ ಹೋಗಬೇಕು.

1982—83	1983—84
1984—85	1985—86

ಹೀಗೆ 4, 5, 6, 7ನೆ ಇಯತ್ತೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿತ ವಿದ್ಯಾರ್ಥಿಗಳ 1986-87ನೆ ವರ್ಷದಲ್ಲಿ 8ನೆ ಇಯತ್ತೆಯಲ್ಲಿ 100 ಅಂಕಗಳ ಕನ್ನಡವನ್ನು ಕಡ್ಡಾಯವಾಗಿ ಕಲಿಯಲು ಶಕ್ತರಾಗುವರು. ಮುಂದೆ 1982-83ರಿಂದ ಪ್ರಾಥಮಿಕ 3ನೆ ಇಯತ್ತೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯುವ ವಿದ್ಯಾರ್ಥಿಗಳು ಇದೇ ದಾರಿಯನ್ನು ಅನುಸರಿಸುವರು.

(ಈ) 1986-87ರ ವರೆಗೆ ಕನ್ನಡೇತರ ವಿದ್ಯಾರ್ಥಿಗಳು 150 ಅಂಕಗಳ ಮಾತೃ ಭಾಷೆಯನ್ನು ಪ್ರಥಮ ಭಾಷೆಯಾಗಿ ಹಾಗು ಬರಿ 50 ಅಂಕಗಳ ಕನ್ನಡವನ್ನು ತೃತೀಯ ಭಾಷೆ ಇಲ್ಲವೆ 100 ಅಂಕಗಳ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯಬೇಕಾಗುವದು.

(ಉ) 1986-87ರಿಂದ ಎಲ್ಲ ವಿದ್ಯಾರ್ಥಿಗಳಿಗೂ 150 ಅಂಕಗಳ ಕನ್ನಡವು ಕಡ್ಡಾಯದ ಪ್ರಥಮ ಭಾಷೆಯಾಗುವದು. ಕರ್ನಾಟಕ ರಾಜ್ಯದಲ್ಲಿ 10 ವರ್ಷ ಹಾಗೂ ಮೇಲ್ಪಟ್ಟು ನೆಲಸಿದ ಎಲ್ಲ ಮಕ್ಕಳಿಗೆ ಕನ್ನಡವು ಹೀಗೆ ಕಡ್ಡಾಯದ ವಿಷಯವಾಗುವದು.

(ಊ) ಕನ್ನಡಿಗರಾದ ವಿದ್ಯಾರ್ಥಿಗಳಿಗೆ 1981–82ನೆಯ ಶೈಕ್ಷಣಿಕ ವರ್ಷದಿಂದ ಕನ್ನಡವು ಏಕೈಕ ಪ್ರಥಮ ಭಾಷೆಯಾಗಿ 150 ಅಂಕಗಳ ಕಡ್ಡಾಯದ ವಿಷಯವಾಗುತ್ತದೆ.

(ಋ) ಉಲ್ಲದೆ ಕನ್ನಡಿಗರಾದ ವಿದ್ಯಾರ್ಥಿಗಳಿಗೆ 1981-82ರಿಂದ ಕನ್ನಡವನ್ನು ಬಿಟ್ಟು ಉಳಿದೆಲ್ಲ ಭಾರತೀಯ ಭಾಷೆಗಳಂ ದ್ವಿತೀಯ ಹಾಗು ತೃತೀಯ ಭಾಷೆಗಳ ಅಂಕಣಗಳಲ್ಲಿ (ಕಾಲಂಗಳು) ಸಂಸ್ಕೃತ ಮೊದಲಾದ ಪ್ರಾಚೀನ ಭಾಷೆಗಳೊಡನೆ ಕಾಣಿಸಿಕೊಂಡು ಮುಂಬರುವ ಎಲ್ಲ ವರ್ಷಗಳಲ್ಲಿಯೂ ಅದೇ ರೀತಿಯಾಗಿ ಮುಂದುವರಿಯುವವು.

(ಋ) ಸಮಿತಿಯ 2ನೆ ಹಾಗೂ 3ನೆ ಸಲಕೆಗಳ ಪ್ರಕಾರ ಪ್ರಥಮ ಭಾಷೆಯಾದ ಕನ್ನಡವೊಂದನ್ನು ಬಿಟ್ಟು ಉಳಿದ ಯಾವ ಭಾಷೆಯನ್ನಾದರೂ ವಿದ್ಯಾರ್ಥಿಯು ದ್ವಿತೀಯ ಇಲ್ಲವೆ ತೃತೀಯ ಭಾಷೆಯಾಗಿ ತೆಗೆದುಕೊಳ್ಳಬಹುದು. ಆದರೆ ಈ ತಾತ್ಪೂರ್ತಿಕ ವ್ಯವಸ್ಥೆಯಲ್ಲಿ ಇಂಗ್ಲಿಷನ್ನು 1985–86ನೆಯ ವರ್ಷ ಮುಗಿಯುವವರೆಗೆ ಬರಿ ದ್ವಿತೀಯ ಭಾಷೆಯೆಂದೂ ಅಭ್ಯಸಿಸಬಹುದು.

(ಎ) ಕನ್ನಡ, ಉಳಿದ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಹಿಂದೀ, ಉರ್ದು) ಹಾಗು ಸಂಸ್ಕೃತ ಇಲ್ಲವೆ ಇನ್ನೊಂದು ಪ್ರಾಚೀನ ಭಾಷೆ (ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್) ಇವುಗಳಲ್ಲಿ ಒಂದು ಭಾಷೆಯನ್ನು ತೃತೀಯ ಭಾಷೆಯೆಂದು ಆಯ್ದುಕೊಂಡು ಅಭ್ಯಸಿಸಬಹುದು. ಹೀಗೆ ಆಯ್ದುಕೊಂಡ ಭಾಷೆ 1981-82 ರಿಂದಲೇ ಪರೀಕ್ಷೆಗೆ ಕಡ್ಡಾಯ ವಿಷಯವಾಗುವುದು. ಇದೇ ವ್ಯವಸ್ಥೆ ಮುಂದೆಯೂ ನಡೆದುಕೊಂಡು ಬರುವದು. 1986-87 ರಿಂದ ಕನ್ನಡವು ತೃತೀಯ ಭಾಷೆಗಳ ಪಟ್ಟಿಯಲ್ಲಿರುವುದಿಲ್ಲ. ಬದಲಾಗಿ ಆ ವರ್ಷದಿಂದ ಇಂಗ್ಲಿಷು ಆ ಪಟ್ಟಿಯಲ್ಲಿ ಸೇರುತ್ತದೆ.

(9) ನೆರೆಹೊರೆಯ ರಾಜ್ಯಗಳಲ್ಲಿ ಕನ್ನಡಕ್ಕೆ ಪ್ರಾಥಮಿಕ ಶಿಕ್ಷಣಕ್ಕೂ ಸಹ ನ್ಯಾಯವಾಗಿ ದೊರೆಯಬೇಕಾದ ಪುನ್ನಣೆಯಾಗಲಿ, ಪುರಸ್ಕಾರವಾಗಲಿ ದೊರೆಯುವುದೇ ಇಲ್ಲವೆಂಬ ದೂರು ಅಲ್ಲಿಯ ಕನ್ನಡಿಗರಿಂದ ಕೇಳಿ ಬರುತ್ತಿದೆ. ಅಲ್ಪಸಂಖ್ಯಾತರ ಭಾಷೆಗಳಲ್ಲಿ ಹೈಸ್ಕೂಲನ್ನು ಇಲ್ಲವೆ ಹೈಸ್ಕೂಲುಗಳಲ್ಲಿ ಅಲ್ಪಸಂಖ್ಯಾತರ ಭಾಷೆಗಳ ಅಭ್ಯಾಸಕ್ಕೆ ಪುನ್ನಣೆ ಕೊಡುವ ವಿಷಯದಲ್ಲಿಯೂ ಈ ದೂರು ಕೇಳಿಬರುತ್ತದೆ. ಈ ವಿಷಯಗಳಲ್ಲೆಲ್ಲ ಕರ್ನಾಟಕದ ರಾಜ್ಯ ಸರ್ಕಾರ ತುಂಬ ಔದಾರ್ಯದಿಂದ ನಡೆದುಕೊಂಡು ಬಂದಿದೆ. ಆದರೆ ಇಂತಹ ಧೋರಣವನ್ನು ಮುಂದುವರಿಸುವಾಗ ಕನ್ನಡಕ್ಕೂ ಅಂತಹ ಪುರಸ್ಕಾರ, ನೆರೆಹೊರೆಯ ರಾಜ್ಯಗಳಲ್ಲಿ ದೊರೆತಿದೆಯೇ ಎಂದು ತಿಳಿದುಕೊಂಡು ಮುಂದುವರಿಯುವ ಸಮಯ ಬಂದಿದೆ. ಉಲ್ಲವೆ ಕನ್ನಡ ನಾಡಿನಲ್ಲಿಯೇ ಮಕ್ಕಳಿಗೇ ಪ್ರಾಥಮಿಕ ಶಾಲೆಗಳನ್ನು ಕರ್ನಾಟಕದಲ್ಲಿ ಇನ್ನೂ ಎಲ್ಲಾ ಕಡೆ ಸ್ಥಾಪಿಸುವ ಕೆಲಸ ಮುಗಿಯದಿರುವಾಗ ಉಳಿದ ಭಾಷೆಗಳಿಗೆ ಅದಕ್ಕೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವದು ಸಾಧುವಲ್ಲ.

(10) ಇಂಗ್ಲಿಷ್ ಮಾಧ್ಯಮವಿದ್ದ ಪ್ರಾಥಮಿಕ ಶಾಲೆಗಳಲ್ಲಿ ಸಹ ಮೂರನೆ ಇಯತ್ತೆಯಿಂದ ಪ್ರಾರಂಭಿಸಿ ಪ್ರತಿಯೊಂದು ಇಯತ್ತೆಗೆ ಉಳಿದ ಭಾಷೆಗಳ ಮಾಧ್ಯಮವಿದ್ದ ಶಾಲೆಗಳಲ್ಲಿರುವಂತೆಯೇ ಕನ್ನಡ ಕಲಿಸಿ ಪ್ರೌಢ ಶಾಲೆಗಳಲ್ಲಿ 8ನೆ ಇಯತ್ತೆಯಿಂದ 10ನೆ ಇಯತ್ತೆ (ಅಂದರೆ ಎಸ್. ಎಸ್. ಎಲ್. ಸಿ.) ಮುಗಿಯುವವರೆಗೆ 150 ಅಂಕಗಳ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು.

KSA LIBRARY, B'lore
B021836
350RP GOK 1981
II–35

ಸರ್ಕಾರಿ ಮುದ್ರಣಾಲಯ, ಬೆಂಗಳೂರು